॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

श्रीमदानन्दतीर्थभगवत्पादाचार्य विरचितम्

# मायावादखण्डनम्
# (कन्नडभाषा विवरणम्)

# ಮಾಯಾವಾದಖಂಡನಮ್

(ಟೀಕಾ-ಟಿಪ್ಪಣಿಗಳ ಸಹಿತ ಕನ್ನಡದಲ್ಲಿವಿವರಣೆ)

ಡಾ. ಮಂಗಸೂಳಿ ಜಯತೀರ್ಥಾಚಾರ್ಯ

Published by
Pradnya Foundations
॥ ॐअसतोमा सद्गमय ॐतमसोमा ज्योतिर्गमय ॐमृत्योर्मा अमृतंगमय॥
Bangaluru-97
2014

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

श्रीमदानन्दतीर्थभगवत्पादाचार्य विरचितम्

# मायावादखण्डनम्
# (कन्नड भाषा विवरणम्)

# ಮಾಯಾವಾದಖಂಡನಮ್

(ಟೀಕಾ-ಟಿಪ್ಪಣಿಗಳ ಸಹಿತ ಕನ್ನಡದಲ್ಲಿವಿವರಣೆ)

## ಡಾ. ಮಂಗಸೂಳಿ ಜಯತೀರ್ಥಾಚಾರ್ಯ

Published by
Pradnya Foundations
॥ ॐअसतोमा सद्गमय ॐतमसोमा ज्योतिर्गमय ॐमृत्योर्मा अमृतंगमय॥
Bangaluru-97
2014

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

# समर्पणम्

श्रीवेंकटरमणाचार्य पदासक्त वैभवान्
श्रीमध्वशास्त्रदुग्धाब्ध्यो सदानिरतान्
मम पितामहान् रामाचार्यगुरूणां
पादपङ्कजे इदं प्रथमज्ञान
पुष्पं परमादरात्
समर्पयामि ।
–

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

# ಪ್ರಸ್ತಾವನೆ

ಭಾರತೀಯ ಆಧ್ಯಾತ್ಮದ ಜಗತ್ತಿನಲ್ಲಿ ಪಯಣಿಸ ಬೇಕಾದರೆ, ವೇದಾದಿ ಶಾಸ್ತ್ರಗಳ ಅಧ್ಯಯನ, ಬಹಳ ಮಹತ್ವದ ಸ್ಥಾನವನ್ನು ಪಡೆದಿದೆ. ಹೀಗಾಗಿ ಪ್ರತಿಯೊಬ್ಬ ಆಧ್ಯಾತ್ಮಿಕ ಜಿಜ್ಞಾಸು, ಈ ವೇದಾದಿ ಶಾಸ್ತ್ರಗಳ ಅಧ್ಯಯನ ಅವಶ್ಯವಾಗಿ ಮಾಡುತ್ತಾನೆ. ಹೀಗಿರುವಾಗ ವೇದಾದಿಶಾಸ್ತ್ರಗಳ ವಿಷಯ ಏನು? ಅವುಗಳ ಅಧ್ಯಯನದಿಂದ ಆಗುವ ಪ್ರಯೊಜನವೇನು? ಮತ್ತು ವೇದಾದಿಶಾಸ್ತ್ರಗಳನ್ನು ಅಧ್ಯಯನ ಮಾಡಲು ಏನು ಅರ್ಹತೇಗಳು ಬೇಕು? ಹಾಗು ವಿಷಯ, ಪ್ರಯೊಜನ, ಅರ್ಹತೆ, ಇವುಗಳಲ್ಲಿಯ ಯಥಾಯೊಗ್ಯ ಸಂಬಂಧವೇನು, ಎಂಬ ಮುಂತಾದ ಪ್ರಶ್ನೆಗಳು ಪ್ರತಿಯೊಬ್ಬ ಆಧ್ಯಾತ್ಮಿಕ ಜಿಜ್ಞಾಸುವಿಗೆ ಬರುವದು ಸಹಜ, ಇದನ್ನೆ ಶಾಸ್ತ್ರಗಳಲ್ಲಿ अनुबन्धचतुष्टय ಗಳೆನ್ನುತ್ತಾರೆ.

ವೇದಾದಿ ಶಾಸ್ತ್ರಗಳಿಗೆ अनुबन्ध चतुष्टय ಗಳು ಯಾವವು? ಇವುಗಳ ಬಗ್ಗೆಯೇ, ಶ್ರೀಮದಾಚಾರ್ಯರು, ತಮ್ಮ ಈ ಮಾಯಾವಾದ ಖಂಡನದಲ್ಲಿ ವಿಮರ್ಶಿಸಿದ್ದಾರೆ. ಶ್ರೀಮದಾಚಾರ್ಯರ ಮುಂಚಿನ ಮತಾಚಾರ್ಯರಲ್ಲಿ ವೇದಾದಿ ಶಾಸ್ತ್ರಗಳ अनुबन्ध चतुष्टय ಗಳ ಬಗ್ಗೆ ಸಾಕಷ್ಟು ಭಿನ್ನಭಿಪ್ರಾಯಗಳು ಕಂಡುಬಂದರೂ, ಅವೆಲ್ಲವು ಮುಖ್ಯವಾಗಿ ಅದ್ವೈತ ಮತ ಪ್ರತಿಪಾದಿಸುವ अनुबन्ध चतुष्टय ಗಳಲ್ಲಿ ಸಮಾವೇಶಗೊಳ್ಳುತ್ತವೆ. ಆದ್ದರಿಂದ ಈ ಪ್ರಕರಣವು ಅದ್ವೈತ ಮತವು ವೇದಾದಿ ಶಾಸ್ತ್ರಗಳಿಗೆ ಪ್ರತಿಪಾದಿಸಿದ अनुबन्ध चतुष्टय ಗಳನ್ನು ವಿಮರ್ಷಿಸುತ್ತದೆ. ಈ ವಿಮರ್ಷಾತ್ಮಕ ಪ್ರಕರಣದಲ್ಲಿ, ಶ್ರೀಮದಾಚಾರ್ಯರು ಅದ್ವೈತ ಮತವು ವೇದಾದಿ ಶಾಸ್ತ್ರಗಳಿಗೆ ಪ್ರತಿಪಾದಿಸಿದ अनुबन्ध चतुष्टय ಗಳು ಹೇಗೆ ದೋಷಪೂರ್ಣವಾಗಿವೆ ಎಂಬುದನ್ನು, ಅದ್ವೈತ ಮತದ ನ್ಯಾಯ ಹಾಗು ಯುಕ್ತಿ ಗಳಿಂದಲೇ ತೋರಿಸಿ, ಅವುಗಳಿಗೆ ವಿರೋಧಿಸುವ ಆಗಮ ಪ್ರಮಾಣ ವಾಕ್ಯಗಳನ್ನು ಉದಾಹರಿಸುತ್ತಾರೆ, ಹಾಗೂ ಆ  ನಮೂದಿಸಿದ  ಆಗಮ ಪ್ರಮಾಣ ವಾಕ್ಯಗಳು ಹೇಗೆ ವೇದಾದಿಶಾಸ್ತ್ರಗಳಿಗೆ ಸ್ವ-ಅಭಿಪ್ರೇತ ವಿಶಯಾದಿಗಳನ್ನು ಪ್ರದಿಪಾದಿಸುತ್ತವೆ ಎಂಬುದನ್ನು ತೊರಿಸುತ್ತಾರೆ.

ಈ ಪ್ರಕರಣದಲ್ಲಿ, ಇವೆಲ್ಲ ಅಂಶಗಳನ್ನು ಕೆಳಗಿನ ಕ್ರಮದಲ್ಲಿ ಇಡಲಾಗಿದೆಃ

• ಮೊದಲಿಗೆ ವೇದಾದಿ ಶಾಸ್ತ್ರಗಳಿಗೆ ಸ್ವಾಭಿಪ್ರೆತ ವಿಷಯಾದಿಗಳು ಯಾವವು? ಹಾಗು

ಪರಮತದವರಿಗೆ ಅಭಿಪ್ರೇತ ವಿಷಯಾದಿಗಳು ಯಾವವು? ಎಂಬುದನ್ನು ವಿವರಿಸಲಾಗಿದೆ.

• ಶ್ರೀಮದಾಚಾರ್ಯರು ತಮ್ಮ ಮಂಗಳಾಚರಣದಲ್ಲಿ, ಪರಮತದವರು ವೇದಾದಿಶಾಸ್ತ್ರಗಳಿಗೆ ಹೇಳುವ ವಿಷಯಾದಿಗಳು ದೋಷಪೂರ್ಣವಾಗಿದ್ದರಿಂದ, ಹಾಗು ಅವುಗಳು ಯಥಾರ್ಥ ಜ್ಞಾನಕ್ಕೆ ಪ್ರತಿಬಂಧಕಗಳಾಗಿರುವದರಿಂದ, ಅವರ ಮತವನ್ನು ಕಗ್ಗತ್ತೆಲೆಗೆ ಹೋಲಿಸಿ, ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸುವದೆ ಎಲ್ಲ ವೇದಾದಿಶಾಸ್ತ್ರಗಳ ತಾತ್ಪರ್ಯವಾಗಿದೆ ಎಂದು ತಿಳಿಸಲು, ನೃಸಿಂಹದೇವರನ್ನು,

अखिल अज्ञानमतध्वान्त दिवाकर: जयति।
अमित सज्ञानसुखशक्तिपयोनिधि: जयति।

ಎಂಬ ಎರಡು ವಿಶಿಷ್ಟ ಗುಣಗಳಿಂದ ಸ್ತುತಿಸುತ್ತಾರೆ. ಈ ಎರಡು ಪ್ರಮೆಯಗಳನ್ನೆ ಈ ಪ್ರಕರಣದಲ್ಲಿ ವಿಶೇಷವಾಗಿ ವಿವರಿಸಲಾಗಿದೆ, ವೇದಾದಿಶಾಸ್ತ್ರಗಳಿಗೆ ಅದ್ವೈತ ಮತದಂತೆ ವಿಷಯಾದಿಗಳನ್ನು ಹೇಳಿದರೆ, ವೇದಾದಿಶಾಸ್ತ್ರಗಳಿಗೆ ಅನಾರಂಭಣೀಯತ್ವ ಉಂಟಾಗುತ್ತದೆ. ಅನಾರಂಭಣೀಯತ್ವ ಎಂದರೆ ಜ್ಞಾನಿಗಳ ಅಧ್ಯಯನಕ್ಕೆ ಯೊಗ್ಯವಲ್ಲದ್ದು ಎಂದರ್ಥ. ಇದನ್ನು ಶ್ರೀಮದಾಚಾರ್ಯರು ಈ ಕೆಳಗಿನ ಅನುಮಾನದಿಂದ ಸಿದ್ಧಮಾಡುತ್ತಾರೆ:

विमतं अनारंभणीयं अन्यथाप्रतिपादकत्वात् यदित्थं तत्तथा यथा संप्रतिपन्नम्।

• ಈ ಅನುಮಾನವನ್ನು ಶ್ರೀಮದಾಚಾರ್ಯರು ಎರಡು ತರಹದಿಂದ ಸಿದ್ಧಮಾಡುತ್ತಾರೆ

  • ವೇದಾದಿಶಾಸ್ತ್ರಗಳು ಅದ್ವೈತ ಮತದಂತೆ ವಿಷಯಾದಿಗಳನ್ನು ಪ್ರತಿಪಾದಿಸಿದರೆ, ಅವುಗಳು ಅದ್ವೈತ ಮತದ ಪ್ರಮೇಯಮೆರೆಗೆ ಅ-ಯಥಾರ್ಥ (अयथार्थ) ಪ್ರತಿಪಾದಕಗಳಾಗುವದರಿಂದ अन्यथाप्रतिपादक (ಅನ್ಯಥಾಪ್ರತಿಪಾದಕ) ಗಳಾಗುತ್ತವೆ. ಆದ್ದರಿಂದ ಅವುಗಳಿಗೆ अनारंभणीयत्व ಉಂಟಾಗುತ್ತದೆ.

  • ವೇದಾದಿಶಾಸ್ತ್ರಗಳು ಅದ್ವೈತವನ್ನು ಪ್ರತಪಾದಿಸಿದಲ್ಲಿ, ಅವುಗಳಿಗೆ ವಿಷಯಾದಿಗಳು ಲಭಿಸಲಾರದ್ದರಿಂದ, ಅವು अन्यथाप्रतिपादक ಗಳಾಗುತ್ತವೆ ಎಂದು ಪರ ನ್ಯಾಯದಿಂದಲೆ ತೊರಿಸುತ್ತಾರೆ. ಆದ್ದರಿಂದಲೂ ಅವುಗಳಿಗೆ अनारंभणीयत्व ಉಂಟಾಗುತ್ತದೆ.

• ಹೀಗೆ ಮೇಲಿನಂತೆ ಅದ್ವೈತ ಮತದ ನ್ಯಾಯವನ್ನು ಅವಲಂಬಿಸಿ ವೇದಾದಿಶಾಸ್ತ್ರಗಳಿಗೆ, ಅದ್ವೈತ ಮತ ಅಭಿಪ್ರೇತ ವಿಷಯಾದಿಗಳನ್ನು ನಿರಾಕರಿಸಿ, आगम ವಾಕ್ಯಗಳ ಬಲದಿಂದಲೂ ಪರ-ಅಭಿಪ್ರೇತ ವಿಷಯಾದಿಗಳನ್ನು ನಿರಾಕರಿಸುತ್ತಾರೆ.

• ಮತ್ತೂ, ಮೇಲೆ ಹೇಳಿದಂತೆ ಪರ ಮತದವರ ಪ್ರಮೇಯಗಳಿಗೆ ಅವರ ನ್ಯಾಯದಿಂದಲೆ ದೋಷಗಳನ್ನು ಹಾಗು ಆಗಮ ಪ್ರಮಾಣವಾಕ್ಯಗಳ ವಿರೊಧತೆಯನ್ನು ತೊರಿಸುವ

ಸಂದರ್ಭದಲ್ಲಿಯೇ ಸ್ವ-ಅಭಿಪ್ರೇತ ವಿಷಯಾದಿಗಳನ್ನೂ ಪ್ರತಿಪಾದಿಸುತ್ತಾರೆ.

- ಈ ಪ್ರಕರಣದಲ್ಲಿ ಕೆಳಗಿನ ಆಗಮ ಪ್ರಮಾಣಗಳನ್ನು ನಮೂದಿಸಲಾಗಿದೆಃ
    - श्रीभगवद् गीतायाम् भगवत् वचनम्
    - काठक श्रुति
    - ब्रह्मसूत्राणि्

ಹೀಗೆ ಈ ಪ್ರಕರಣದಲ್ಲಿ, ಶ್ರೀಮದಾಚಾರ್ಯರು, ಅದ್ವೈತ ಮತದ ಮೂಲಭೂತ ಪ್ರಮೇಯಗಳನ್ನು ವಿಮರ್ಷಿಸಿ, ಅವುಗಳು ಹೇಗೆ ದೋಷಪೂರ್ಣವಾಗಿವೆ ಎಂದು ಅವರ ಮತದ ನ್ಯಾಯದಿಂದಲೇ ಹಾಗು ಆಗಮ ಪ್ರಮಾಣ ವಾಕ್ಯಗಳಿಂದಲೂ ತೋರಿಸುತ್ತಾರೆ. ಇನ್ನೊಂದು ವಿಶೇಷವಾದ ಸಂಗತಿ ಎಂದರೆ, ಈ ಪ್ರಕರಣವು ಕೇವಲ ಪರ ಮತದ ವಿಮರ್ಷಾತ್ಮಕ ಹಾಗೂ ಏಕದೇಶದಿಂದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ಸಂಬಂಧಿಸಿದ್ದರಿಂದ , ಇಲ್ಲಿ, ಶ್ರೀಮದಾಚಾರ್ಯರಿಗೆ ತಮ್ಮ ಮತವನ್ನು ಪ್ರಸ್ಥಾಪಿಸುವ, ಪ್ರಸಕ್ತಿ ಇರಲಿಲ್ಲಾದರೂ, ಪರ ಮತದ ಪ್ರಮೆಯಗಳಿಗೆ ಪರ ನ್ಯಾಯದಿಂದಲೇ ದೋಷಗಳನ್ನು ಹಾಗೂ ಆಗಮ ಪ್ರಮಾಣಗಳ ವಿರೋಧವನ್ನು ತೋರಿಸುತ್ತಿರುವ ಸಂದರ್ಭದಲ್ಲಿಯೆ, ತಮ್ಮ ಮತದ ಪ್ರಮೆಯ ಗಳನ್ನು ಪ್ರಸ್ಥಾಪಿಸುತ್ತಾರೆ. ಆದ್ದರಿಂದ ಸ್ವಪಕ್ಷಸಾಧನ ಅಭಾವರೂಪ ದೋಷಕ್ಕೂ ಇಲ್ಲಿ ಆಸ್ಪದ ವಿರುವದಿಲ್ಲ.

ಈ ಪ್ರಸ್ತುತ ಗ್ರಂಥದಲ್ಲಿ, ಶ್ರೀಮದಾಚಾರ್ಯರ, ಮಾಯಾವಾದ ಖಂಡನಮ್ ಎಂಬ ಪ್ರಕರಣವನ್ನು ಶ್ರೀಟೀಕಾಕೃತ್ಪಾದರ ಟೀಕೆ ಸಹಿತ, ಶ್ರೀವ್ಯಾಸತೀರ್ಥರ ಮಂದಾರ ಮಂಜಿರಿ, ಶ್ರೀಶೀನಿವಾಸತೀರ್ಥರ ದುರ್ಗಮಾರ್ಥ ವ್ಯಾಖ್ಯಾ ಹಾಗೂ ಶ್ರೀಸತ್ಯನಾಥರ ಪರಶುಗ್ರಂಥಗಳ ಅನುಮೊದನೆಯೊಂದಿಗೆ ಕನ್ನಡದಲ್ಲಿ ವಿವರಿಸಲಾಗಿದೆ. ಹಾಗೂ ಗ್ರಂಥದ ಅಂತ್ಯದಲ್ಲಿ ಓದುಗರ ಅವಗಾಹನೆಗಾಗಿ ಈ ಪ್ರಕರಣದಲ್ಲಿ ಕಂಡುಬಂದ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಕೊಡಲಾಗಿದೆ.

ಶ್ರೀಮದಾಚಾರ್ಯರು ತಮ್ಮ ಮತವನ್ನು, प्रत्यक्ष, अनुमान, ಹಾಗೂ आगम ಪ್ರಮಾಣಗಳ ಹಿನ್ನೆಲೆಯಲ್ಲಿ, तत्वद्योत ಎಂಬ ಗ್ರಂಥದಲ್ಲಿ ವಿಶೇಷವಾಗಿ (साधकबाधकभावाभाव व्युत्पादन भेदात् )ಎಂಬ ನ್ಯಾಯವನ್ನು ಅನುಸರಿಸಿ) ಪ್ರಸ್ಥಾಪಿಸಿದ್ದಾರೆ.

---

श्रीमंगसूळि गुरुराजाचार्यसूनु
डा.मंगसूळि जयतीर्थाचार्यः

जयनाम संवत्सरस्य
शालिवाहन शके १९३६
ज्येष्ठमासे, सप्तम्यां तिथौ
गुरुवासरः,बेंगळूरु
ता: ५-०६-२०१४

# ವಿಷಯಾನುಕ್ರಮಣಿಕೆ


ಪ್ರಸ್ತಾವನೆ .................... 4

मंगलाचरणम् .................... 8

೧. ಟೀಕಾ ಮಂಗಲಾಚರಣ .................... 9

೨. ವೇದಾದಿಶಾಸ್ತ್ರಗಳ ಅನುಬಂಧಚತುಷ್ಟಯಗಳು .................... 10

೨.೧ ವೇದಾದಿಶಾಸ್ತ್ರಗಳಿಗೆ ಸ್ವಅಭಿಪ್ರೇತ ಅನುಬಂಧಚತುಷ್ಟಯಗಳು .................... 10

೨.೨ ವೇದಾದಿಶಾಸ್ತ್ರಗಳಿಗೆ ಪರಅಭಿಪ್ರೇತ ಅನುಬಂಧಚತುಷ್ಟಯಗಳು .................... 13

೩. ಮಂಗಲಾಚರಣ ಶ್ಲೋಕ .................... 14

೪. ಪರಮತವು ದೋಷಪೂರ್ಣ ಎಂದು ಪ್ರತಿಪಾದಿಸುವ .................... 17

೪.೧ ಪ್ರಸ್ತಾವನೆ .................... 18

೪.೨ ಪೂರ್ವಪೀಠಿಕೆ .................... 19

೪.೨.೧ ಅನುಮಾನದ ಲಕ್ಷಣ .................... 19

೪.೨.೨ ಅನುಮಾನದ ಅವಯವಗಳು .................... 20

೪.೨.೩ ಅನುಮಾನದ ಅವಯವ ನಿಯಮದ ನಿರಾಕರಣೆ .................... 22

೪.೨.೪ ಅನುಮಾನದ ಪ್ರಕಾರಗಳು .................... 23

೪.೩ ದೂಷಣ ಅನುಮಾನ .................... 24

೪.೩.೧ ಅನುಮಾನ ದಲಕೃತ್ಯ .................... 25

೪.೪ ವೇದಾದಿಶಾಸ್ತ್ರಗಳಿಗೆ ಅಯತಾರ್ಥಪ್ರತಿಪಾದಕತ್ವದ ಮೂಲಕ ಅನ್ಯಥಾ ಪ್ರತಿಪಾದಕತ್ವ .................... 33

೪.೪.೧ "न हि ब्रह्मात्मैक्यस्य याथार्थं तत्पक्षे" ವಾಕ್ಯದ ವಿಮರ್ಷೆ .................... 35

೪.೪.೨ ಜೀವಬ್ರಹ್ಮ ಸ್ವರೂಪದ ಪರಾಮರ್ಶೆ .................... 39

೪.೫ ವೇದಾದಿಶಾಸ್ತ್ರಗಳಿಗೆಃ ಅನುಬಂಧಚತುಷ್ಟಯಗಳು ಲಭಿಸದ ಮೂಲಕ ಅನ್ಯಥಾಪ್ರತಿಪಾದಕತ್ವ .... 60

೪.೫.೧ ಅಜ್ಞಾನ ಅಸಂಭವವಾದ್ದರಿಂದ ವಿಷಯಾದಿಗಳ ಅಭಾವತೆ .................... 62

೪.೫.೨ प्राकारान्त ದಿಂದಲೂ ಶಾಸ್ತ್ರಗಳಿಗೆ ವಿಶಯಾದಿಗಳ ಅಭಾವತೆ .................... 64

೫. ವೇದಾದಿಶಾಸ್ತ್ರಗಳಿಗೆ ಆಗಮಪ್ರಮಾಣಗಳಿಂದ ಪರಾಭಿಪ್ರೆತ ವಿಷಯಾದಿಗಳ ನಿರಾಕರಣೆ ಹಾಗೂ ಸ್ವಾಭಿಪ್ರೆತ ವಿಷಯಾದಿಗಳ ಸಮರ್ಥನೆ .................... 91

೫.೧ ಭಗವದ್ಗೀತೆಯಲ್ಲಿಯ ಭಗವದ್ ವಚನ .................... 92

೫.೨ ಕಾಠಕ ಶೃತಿ ಮಂತ್ರ .................... 103

೫.೩ ಬ್ರಹ್ಮಸೂತ್ರದಲ್ಲಿಯ ಒಂದು ಸೂತ್ರ .................... 107

೬. ಉಪಸಂಹಾರ .................... 108

೭. ಟೀಕಾ ಅಂತ್ಯ ಮಂಗಲ ಪದ್ಯ .................... 110

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

# मंगलाचरणम्

नमामि श्रीवेंकटेशं सर्वानिष्टनिवारकम्।
सर्वाभीष्टप्रदं नाथं रामार्याभीष्टदैवतम्॥
कल्याणात्भुतगात्राय कामितार्थ प्रदायिने।
श्रीमद्वेंकटनाथाय श्रीनिवासाय ते नमः॥

पान्त्वस्मान्पुरुहूतवैरिबलवन्मातंगमाद्यत्घटा
कुम्भोचाद्रिविपाटनाधिकपटुप्रत्येकवज्रायिताः।
श्रीमत्कण्ठीरवास्यप्रततसुनखरादारितारातिदूर्
प्रध्वस्तध्वान्तशान्तप्रविततमनसा भाविता नाकिवृन्दैः॥
लक्ष्मीकान्त समन्ततो विकलयन्नैवेशितुस्ते समं
पश्यामुत्तमवस्तु दूरतरतोऽपास्तं रसो योऽष्टमः।
यद्रोषोत्करदक्षनेत्रकुटिलप्रान्तोत्थिताग्निस्फुरत्
खद्योतोपमविस्फुलिंगभसिता ब्रह्मेशशक्रोत्कराः॥
विष्णोरत्युत्तमत्वादखिलगुणगणैस्तत्रभक्तिंगरिष्ठां
संश्लिष्टे श्रीधराभ्याममुमथपरिवारात्मनासेवकेषु।
यःसन्धत्तेविरिंचिश्वसनविहगपानन्दरुद्रेन्द्रपूर्वे
ष्वाध्यायंस्तारतम्यंस्फुटमविसदावायुरस्मद्गुरुस्तम्॥
पूर्णप्रज्ञकृतं भाष्यं आदौ तद्भावपूर्वकम्।
यो व्याकरोन्नमस्तस्मै पद्मनाभाख्ययोगिने॥
चित्रैपदैश्चैर्यगम्भीरैः वाक्यैर्मानैः अखंडितैः।
गुरुभावंव्यंजयन्ति भाति श्रीजयतीर्थ वाक्॥
अर्थिकल्पितकल्पोऽयं प्रत्यर्थिगजकेसरी
व्यासतीर्थगुरुर्भूयात् अस्मदिष्टार्थ सिद्धये॥
सत्यनाथगुरुः पातु यो धीरो नवचन्द्रिकाम्।
नवामृतगदातीर्थ ताण्डवानि व्यचीक्लृपत॥
श्रीनिवासगुरून् वन्दे श्रीनिवासान्घ्रिसद्व्रतीन्।
श्रीमध्वशास्त्रदुग्दाब्धिपारगन्तॄन् अहं भजे॥
येभ्यः श्रीमध्वसिद्धान्तमहंसम्यग् अधितवान्।
तान् रामार्यगुरून्वन्दे वेंकटार्यपदाश्रयान् ॥
टीकाटिप्पण्यार्थान् साकल्य प्रणम्य गुरुपादपंकजे।
करोमि मायावादखण्डनकन्नडभाषा विवरणं यथामति॥

---

॥श्रीलक्ष्मीवेंकटेशो विजयते॥
॥श्रीमध्वेशो विजयतेतराम्॥

## ೧. ಟೀಕಾ ಮಂಗಲಾಚರಣ

ಸರ್ವಜ್ಞಕಲ್ಪರಾದ ಟೀಕಾಕಾರರಾದ ಶ್ರೀಮಜ್ಜಯತೀರ್ಥಮುನಿಗಳು ಶ್ರೀಮದಾಚಾರ್ಯಕೃತ ಮಾಯಾವಾದಖಂಡನ ಎಂಬ ಪ್ರಕರಣಕ್ಕೆ ಟೀಕಾ ರಚಿಸುವ ಇಚ್ಛೆವುಳ್ಳವರಾಗಿ, ತಾವು ಮಾಡಲಿರುವ ಗ್ರಂಥ ರಚನೆಯು, ನಿರ್ವಿಘ್ನವಾಗಿ ಪರಿಸಮಾಪ್ತಿಯನ್ನು ಕಾಣಲು, ಶ್ರೀನೃಸಿಂಹಸ್ತವನರೂಪ ಮಂಗಲವನ್ನು ಮಾಡಿ, ಶಿಷ್ಯಶಿಕ್ಷಣಾರ್ಥಕ್ಕಾಗಿ ಅದನ್ನು ಗ್ರಂಥದ ಆದಿಯಲ್ಲಿ ಮಾಡಬೇಕೆಂಬ ಕಟ್ಟಪ್ಪಣೆ ಮಾಡತಾ, ತಾವು ಮಾಡಿದ ಮಂಗಲಾಚರಣವನ್ನು ತೋರಿಸುತ್ತಾರೆ:

**टीका मंगलाचरणम्**
**नरसिंहमसह्योरु प्रत्यूहतिमिरापहम्।**
**प्रणिपत्य व्याकरिष्ये मायावादस्य खंडनम्॥**

अन्वय: असह्योरुप्रत्यूह तिमिरापहं नरसिंहं, प्रणिपत्य मायावादस्य खण्डनं व्याकरिष्ये।

### ॥असह्योरु प्रत्यूहतिमिरापहं इति॥

**असह्या:** ಅಂದರೆ, ಪ್ರಾರಂಭಮಾಡಿದ ಕಾರ್ಯದ ಪರಿಸಮಾಪ್ತಿರೂಪ ಇಷ್ಟತೆಯ ವಿರೋಧಿಗಳಾಗಿರುವ ಹಾಗೂ ಅವುಗಳಿಂದ ಬಿಡುಗಡೆ ಹೊಂದಲು ಅಶಕ್ಯವಾದ ಎಂದರ್ಥ
**उरव:** ಅಂದರೆ, ಅಲ್ಪಮಂಗಲದಿಂದ ನಿವರ್ತಿಸದ, ಅಥವಾ ಬಹು ಸಂಖ್ಯಾಕಗಳಿಂದ ಕೂಡಿದ.
**ये प्रत्यूहा:** ಅಂದರೆ ವಿಘ್ನಗಳು.
ಈ ವಿಘ್ನಗಳು ಸಮ್ಯಗ್ ಜ್ಞಾನಕ್ಕೆ ವಿರೋಧಿಗಳಾದುದರಿಂದ ಕಗ್ಗತ್ತಲೆಯಂತೆ ಇವೆ.
ಇಂತಹ ವಿಘ್ನಗಳನ್ನು ನಾಶಮಾಡುವವನು प्रत्यूहतिमिरापहं तम्।
ಈತರಹದ ವಿಘ್ನಗಳನ್ನು ನಿರಸನಮಾಡುವದರಲ್ಲಿ, "नृसिंहादिकमन्यच्च दुरितादिनिवृत्तय" ಎಂಬ ವಚನದಂತೆ ಕೇವಲ ನರಸಿಂಹದೇವರೇ ಸಮರ್ಥರು. ಆದ್ದರಿಂದ ಅವರಿಗೇನೇ ಈ ಪ್ರಣಾಮವು ಎಂಬ ಆಶಯವಿರುತ್ತದೆ.

### ॥ मायावाद इति॥

**मायावादस्यखंडनम्:** ಮಾಯವಾದ ಎಂಬ ಪರಕೀಯ ಪ್ರಕರಣದ ಖಂಡನಾತ್ಮಕವಾದ, मायावादखण्डनं ಎಂಬ ಹೆಸರಿನ ಭಗವತ್ಪಾದಕೃತ ಪ್ರಕರಣ ಗ್ರಂಥವನ್ನು

**<u>व्याकरिष्ये</u>**: ವ್ಯಾಖ್ಯಾನವನ್ನು ಮಾಡುತ್ತೇವೆ

ಈ ವರೇಗಿನ ವಿವೇಚನೆಯಿಂದ, ಟೀಕಾ ಮಂಗಲಾಚರಣ ಶ್ಲೋಕದ ಅರ್ಥವು ಕೆಳಗಿನಂತೆ ಆಗುತ್ತದೆ.

ಸಹಿಸಲು ಅಶಕ್ಯವಾದ, ಸಮ್ಯಕ ಜ್ಞಾನಕ್ಕೆ ಕಗ್ಗತ್ತಲೆಯಂತೆ ವಿರೋಧಿಗಳಾದ, ಬೇರೆಯಾರಿಂದಲೂ ನಾಶಮಾಡಲಾಗದ ವಿಘ್ನಗಳ ಸಮೂಹವನ್ನು ನಾಶಮಾಡುಲು ಸಮರ್ಥನಾದ ಶ್ರೀನರಸಿಂಹದೇವರನ್ನು ನಮಸ್ಕರಿಸಿ, ಶ್ರೀಮದಾಚಾರ್ಯಕೃತ मायावादखण्डनं ಎಂಬ ಪ್ರಕರಣಗ್ರಂಥಕ್ಕೆ ವ್ಯಾಖ್ಯಾನಮಾಡುತ್ತೇವೆ.

## ೨. ವೇದಾದಿಶಾಸ್ತ್ರಗಳ ಅನುಬಂಧಚತುಷ್ಟಯಗಳು

ಈ ಪ್ರಕರಣವು ವೇದಾದಿಶಾಸ್ತ್ರಗಳಿಗೆ, ಪರಮತದವರಿಗೆ ಅಭಿಪ್ರೇತವಾದ ವಿಷಯಾದಿಗಳನ್ನು (अनुबन्ध चतुष्टय ಗಳನ್ನು) ನಿರಾಕರಿಸಿ, ಸ್ವಾಭಿಪ್ರೇತವಾದ ವಿಷಯಾದಿಗಳನ್ನು ಸಮರ್ಥಿಸಲು ಪ್ರವೃತ್ತವಾಗಿದೆ. ಆದ್ದರಿಂದ ವೇದಾದಿಶಾಸ್ತ್ರಗಳಿಗೆ ಲಭ್ಯವಾದ ವಿಷಯಾದಿಗಳು, ಈ ಪ್ರಕರಣಕ್ಕೂ ಲಭಿಸುವದರಿಂದ, ಈ ಪ್ರಕರಣಕ್ಕೆ अनारंभणीयत्व ದೋಷ ಬರುವದಿಲ್ಲ. अनारंभणीय ಎಂದರೆ ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಲ್ಲದ್ದು ಎಂದರ್ಥ.

ಯಾವದೇ ಪ್ರಕರಣವು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವೆನಿಸಬೇಕದರೆ, ಅದಕ್ಕೆ अनुबन्ध चतुष्टय (अधिकारि, विषय, प्रयोजन ಮತ್ತು ಅವುಗಳಲ್ಲಿಯ यथायोग्य संबन्ध) ಗಳಿರಬೇಕು. ಅಂದರೆ ಆ ಪ್ರಕರಣವು ಜ್ಞಾನಿಗಳಿಗೆ आरंभणीय ಎಂದರೆ ಅಧ್ಯಯನಕ್ಕೆ ಯೋಗ್ಯವಾದದ್ದು ಎಂದೆನಿಸುತ್ತದೆ. ಮುಂದಿನ ಭಾಗದಲ್ಲಿ, ವೇದಾದಿಶಾಸ್ತ್ರಗಳ अनुबन्ध चतुष्टय ಗಳ ಬಗ್ಗೆ ವಿವರಿಸಲಾಗಿದೆ.

### *೨.೧ ವೇದಾದಿಶಾಸ್ತ್ರಗಳಿಗೆ ಸ್ವಅಭಿಪ್ರೇತ ಅನುಬಂಧಚತುಷ್ಟಯಗಳು*

ವೇದಾದಿಶಾಸ್ತ್ರಗಳಿಗೆ ಸ್ವ-ಅಭಿಪ್ರೆತವಾದಅನುಬಂಧಚತುಷ್ಟಯಗಳು ಈ ಕೆಳಗಿನಂತಿರುತ್ತವೆ:

**टीका**

**इह हि विविधसांसारिक दु:खदर्शनेन विरक्तस्य शमदमादिमतो मुमुक्षो: अधिकारिण:, तन्निवृत्यै परमानन्दवाप्त्यै च, सकलजीवजडात्मकात् प्रपंचात् परमार्थत एव, अत्यन्तभिन्नं, निखिलगुणोदारं, निरस्त समस्त दोषं, परब्रह्म**

## प्रतिपाद्यितुम् सकलश्रुतिस्मृतीनां तत् उपकरणभूत ब्रह्ममीमांसायाश्च प्रवृत्तिः इति तत्वम्।

### अधिकारिः

ವಿವಿಧ ಸಾಂಸಾರಿಕ ದುಃಖ ದರ್ಶನದಿಂದ ವಿರಕ್ತಿಯನ್ನು ತಾಳಿದ, ಹಾಗೂ शमदमादि ಗಳಿಂದ ಸಂಪನ್ನರಾದ, ಮತ್ತು ಕೇವಲ ಮೋಕ್ಷವನ್ನು ಅಪೇಕ್ಷಿಸುವ ಸಜ್ಜನರು, ಈ ವೇದಾದಿಶಾಸ್ತ್ರಗಳ ಅಧ್ಯಯನಮಾಡಲು ಅಧಿಕಾರಿಗಳು.

**प्रयोजनः**

ಅತ್ಯಂತಿಕ ದುಃಖ ನಿವೃತ್ತಿ ಹಾಗೂ ದುಃಖ ಸಂಬಂಧವಿಲ್ಲದ ಪರಮಾನಂದವನ್ನು ಪಡೆಯುವದು. ಇದನ್ನೆ ಮೋಕ್ಷವೆನ್ನುವರು. ಅಂದರೆ ಮೋಕ್ಷವನ್ನು ಪಡೆಯುವದು ಎಂದರ್ಥ.

**विषयः**

ಸಕಲ ಜೀವಜಡಾತ್ಮಕ ಪ್ರಪಂಚಕ್ಕಿಂತಲೂ, ಪಾರಮಾರ್ಥಿಕವಾಗಿ ಅತ್ಯಂತ ಭಿನ್ನನಾದ, ಸಕಲಗುಣಗಳಿಂದ ಪರಿಪೂರ್ಣನಾದ, ಸಮಸ್ತ ದೋಷಗಳಿಂದ ವಿಧುರನಾದ, ಪರಬ್ರಹ್ಮನನ್ನು ಪ್ರತಿಪಾದಿಸುವದು ವೇದಾದಿಶಾಸ್ತ್ರಗಳ ಗುರಿ.

**संबन्धः**

अधिकारि, प्रयोजन ಮತ್ತು विषय ಗಳಲ್ಲಿಯ ಯಥಾಯೋಗ್ಯ ಸಂಬಂಧ.

### ಟಿಪ್ಪಣಿಗಳವಿಶೇಷ ವಿವರಣೆ

### अधिकारिः

ವಿವಿಧ ಸಾಂಸಾರಿಕ ದುಃಖ ದರ್ಶನದಿಂದ ವಿರಕ್ತಿ ಹೊಂದಿದವರು ಎಂದರೆ, "परीक्ष्य लोकान् कर्मचितान्..", "शान्तो दान्त उपरतः.." ಮುಂತಾದ ಶ್ರುತಿ ವಾಕ್ಯಗಳಲ್ಲಿ ಹೇಳಿದಂತೆ, ನಿತ್ಯಾನಿತ್ಯವಸ್ತುವಿವೇಕದಿಂದ ವೈರಾಗ್ಯತಾಳಿದವರು ಎಂದರ್ಥ. "सकलश्रुतिस्मृत्यादि उक्तज्ञानवतोऽपि वैराग्यादि शून्यस्य मोक्षो न दृश्यत"इति, ಉಕ್ತಿಯಂತೆಯೂ ವಿಷಯ ವೈರಾಗ್ಯವನ್ನು ಹೊಂದಿದವನೇ ಅಧಿಕಾರಿಯಾಗಲು ಸಾಧ್ಯ ಎಂದು ತಿಳಿದುಬರುತ್ತದೆ. ಈ ಸಾಂಸಾರಿಕ ದುಃಖವು, ಕತಿಪಯ ದುಃಖದಿಂದ ಕೂಡಿದ್ದಾಗಿರದೆ, ದುಃಖಗಳ ಪ್ರವಾಹ ಅಥವಾ ಪರಂಪರೆಯನ್ನೊಳಗೊಂಡಿರುತ್ತದೆ ಅಂದರೆ ವಿವಿಧತೆಯಿಂದ ಕೂಡಿರುತ್ತದೆ. ಆದ್ದರಿಂದ ಅಲ್ಲಿ ವೈರಾಗ್ಯವನ್ನು ತಾಳುವದು ಉಚಿತ ಎನಿಸುತ್ತದೆ. ಹಾಗಿಲ್ಲದಿದ್ದಲ್ಲಿ, ಸುಖಮಿಶ್ರಿತ ಸಂಸಾರದಲ್ಲಿ, ಕಿಂಚಿತ್ ದುಃಖ ಕಂಡಾಕ್ಷಣ, ಅಲ್ಲಿ ವಿರಕ್ತಿ ಹೇಳುವದು ಸಮಂಜಸವೆನಿಸುತ್ತಿರಲಿಲ್ಲ. ಇನ್ನು ನಿತ್ಯನರಕದಲ್ಲಿ ಸ್ವರೂಪಭೂತ ದುಃಖವನ್ನು ಅನಿಭವಿಸುವ

ದುರ್ಜೀವಿಗಳಿಗೆ ವೈರಾಗ್ಯ ಉಂಟಾಗಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಸಾಂಸಾರಿಕ ದುಃಖವನ್ನೇ ಹೇಳಲ್ಪಟ್ಟಿರುತ್ತದೆ.

शमदमादि ಎಂದರೆ: शम ಅಂದರೆ ಭಗವನ್ನಿಷ್ಠ ಬುದ್ಧಿ, दम ಅಂದರೆ ಇಂದ್ರಿಯ ನಿಗ್ರಹ ಎಂದರ್ಥ, ("शमोमन्निष्ठ्ता बुध्दि: दम इंद्रिय निग्रह:" इति भगवद्वचनात्). आदि ಪದವು, ಶ್ರುತಿಗಳಲ್ಲಿ ಹೇಳಿದ, शान्त, दान्त, उपरत:, तितिक्षु..ಮುಂತಾದ ಗುಣಗಳನ್ನು ಸೂಚಿಸುತ್ತದೆ. ಇದನ್ನು ब्रह्मसूत्रಗಳ साधनाध्याय ದಲ್ಲಿ ವಿವರಿಸಲಾಗಿದೆ.

ಇಲ್ಲಿ ಮೋಕ್ಷವನ್ನು ಬಯಸುವ ಸಜ್ಜನರು ಎಂದು मन्दाधिकारि ಅಭಿಪ್ರಾಯದಿಂದ ಹೇಳಲಾಗಿದೆ. उत्तमाधिकारि ಗಳು, ಮೋಕ್ಷ್ವನ್ನು ಕೂಡ ಬಯಸದ, ಕೇವಲ ಪರಮಾತ್ಮನ ಏಕಾಂತ ಭಕ್ತಿಯನ್ನು ಯಾಚಿಸುವ ಅಪರೋಕ್ಷ ಜ್ಞಾನಿಗಳಾಗಿರುತ್ತಾರೆ.

**प्रयोजन:**

ಅತ್ಯಂತಿಕ ದುಃಖ ನಿವ್ರುತ್ತಿ ಹಾಗೂ ದುಃಖ ಸಂಬಂಧವಿಲ್ಲದ ಪರಮಾನಂದವನ್ನು ಪಡೆಯುವದು. ಇದನ್ನೆ ಮೋಕ್ಷವೆನ್ನುವರು. ಅಂದರೆ ಮೋಕ್ಷವನ್ನು ಪಡೆಯುವದು ಎಂದರ್ಥ.

ಕತಿಪಯ ದುಃಖ ನಿವೃತ್ತಿಗೆ ಬ್ರಹ್ಮಜ್ಞಾನದ ಅವಶ್ಯಕತೆ ಇರುವದಿಲ್ಲ. ಆದ್ದರಿಂದ ಇಲ್ಲಿ, ಆತ್ಯಂತಿಕ ದುಃಖ ನಿವೃತ್ತಿ ಎಂದರೆ, ಅವಿದ್ಯಾದಿ ನಿವೃತ್ತಿ ಅಧೀನವಾದ ದುಃಖ ಪ್ರವಾಹದ ನಿವೃತ್ತಿ ಎಂದು ತಿಳಿಯತಕ್ಕದ್ದು.

ಮೋಕ್ಷವೆಂದರೆ "आत्यन्तिक दु:खनिवृत्ति विशिष्ट परमानन्द आविर्भाव एव मोक्ष:".

ಪರಮಾನಂದ ಎಂದರೆ "आनन्दस्य परमत्वं च दु:ख असम्भिन्नत्वं, नित्यत्वं, स्वस्वयोग्यताम् अपेक्ष्य पूर्णत्वं वा" इति।

ಇದನ್ನು ब्रह्मसूत्रಗಳ फलाध्याय ದಲ್ಲಿ ವಿವರಿಸಲಾಗಿದೆ.

**विषय:**

ಸಕಲ ಜೀವಜಡಾತ್ಮಕ ಪ್ರಪಂಚಕ್ಕಿಂತಲೂ, ಪಾರಮಾರ್ಥಿಕವಾಗಿ ಅತ್ಯಂತ ಭಿನ್ನನಾದ, ಸಕಲಗುಣಗಳಿಂದ ಪರಿಪೂರ್ಣನಾದ, ಸಮಸ್ತ ದೋಷಗಳಿಂದ ವಿಧುರನಾದ, ಪರಬ್ರಹ್ಮನನ್ನು ಪ್ರತಿಪಾದಿಸುವದು ವೇದಾದಿಶಾಸ್ತ್ರಗಳ ಗುರಿ.

ಇಲ್ಲಿ ಜೀವರು ಎಂದರೆ "जीवत्वं यदा..","जीवेशयो: भिदाचैव.." ಮುಂತಾದ ಶೃತಿ ವಾಕ್ಯಗಳಲ್ಲಿ ಹೇಳಿದಂತೆ, ಅಸ್ವತಂತ್ರ ಚೇತನರು ಹಾಗೂ "ब्रह्माणि जीवस्सर्वेऽपि.." ಎಂಬ ಶೃತಿವಾಕ್ಯದಲ್ಲಿ ಹೇಳಿದಂತೆ, दु:खस्पृष्ट चेतनರೂ ಹೌದು.

ಪಾರಮಾರ್ಥಿಕ ಪದದಿಂದ, ಪರಪಕ್ಷದವರು ಪ್ರತಿಪಾದಿಸುವ ಕಾಲ್ಪನಿಕ ಭೇದವನ್ನು ನಿರಾಕರಿಸಲಾಗಿದೆ.

ಅತ್ಯಂತ ಶಬ್ದವು ಮುರೂ ವಿಧವಾದ भेदाभेद ವಾದಿಗಳನ್ನು ನಿರಾಕರಿಸುತ್ತದೆ. ಮುರು ವಿಧವಾದ भेदाभेद ವಾದಿಗಳು:

- ಕೆಲವರು, "जीव ब्रहमणो: संसारे केवल भेद:, मुक्तौ तु अभेद:", ಅಂದರೆ, ಜೀವ-ಬ್ರಹ್ಮರಲ್ಲಿ ಕೇವಲ ಸಂಸಾರದಲ್ಲಿ ಭೇದವಿದ್ದು, ಮುಕ್ತಿಯಲ್ಲಿ ಅಭೇದವಿರುತ್ತದೆ ಎಂದು ಹೇಳುತ್ತಾರೆ.
- ಇನ್ನು ಕೆಲವರು, "संसारे भेदाभेदौ, मुक्तौ तु अभेद:" ಅಂದರೆ ಜೀವ-ಬ್ರಹ್ಮರಲ್ಲಿ, ಸಂಸಾರದಲ್ಲಿ ಭೇದ-ಅಭೇದ ವಿದ್ದು, ಮುಕ್ತಿಯಲ್ಲಿ ಅಭೇದವಿರುತ್ತದೆ ಎಂದು ಹೇಳುತ್ತಾರೆ.
- ಇನ್ನು ಕೆಲವರು "संसारे मुक्तौ च भेदाभेदौ एव" ಅಂದರೆ, ಸಂಸಾರ ಹಾಗೂ ಮುಕ್ತಿಯಲ್ಲಿಯೂ, ಜೀವ-ಬ್ರಹ್ಮರಲ್ಲಿ ಭೇದ-ಅಭೇದ ವಿರುತ್ತದೆ ಎಂದು ಹೇಳುತ್ತಾರೆ.

ವೇದಶಾಸ್ತ್ರಗಳಲ್ಲಿ, ಶೃತಿ, ಸ್ಮೃತಿ, ಇತಿಹಾಸ ಪುರಾಣ ಹಾಗೂ ವೇದಾರ್ಥ ನಿರ್ಣಾಯಕ, ನ್ಯಾಯವ್ಯುತ್ಪಾದಕಗಳಾದ, ಬ್ರಹ್ಮ ಮೀಮಾಂಸಾ ಶಾಸ್ತ್ರಗಳನ್ನು ಸಮಾವೇಶಮಾಡಲಾಗಿದೆ. ಇದನ್ನು ब्रह्मसूत्रगळ समन्वयाध्याय ಹಾಗೂ अविरोधाध्याय ದಲ್ಲಿ ವಿವರಿಸಲಾಗಿದೆ.

**संबन्ध:**

अधिकारि, प्रयोजन ಮತ್ತು विषय ಗಳಲ್ಲಿಯ ಯಥಾಯೋಗ್ಯ ಸಂಬಂಧ ಸೂಚಿಸುವ, ಮೋಕ್ಷವನ್ನು ಅಪೇಕ್ಷಿಸುವ ಅಧಿಕಾರಿ (मोच्य), ಹಾಗು ಮೋಕ್ಷವನ್ನು ಅಧಿಕಾರಿಗೆ ಪ್ರದಾನ ಮಾಡುವವ ( मोचक) ಪರಬ್ರಹ್ಮ. मोच्य–मोचक भाव ಸಂಬಂಧ ಎಂದರ್ಥ.

## *೧.೧ ವೇದಾದಿಶಾಸ್ತ್ರಗಳಿಗೆ ಪರಅಭಿಪ್ರೇತ ಅನುಬಂಧಚತುಷ್ಟಯಗಳು*

ವೇದಾದಿಶಾಸ್ತ್ರಗಳಿಗೆ ಪರ-ಅಭಿಪ್ರೇತ ಅನುಬಂಧಚತುಷ್ಟಯಗಳು ಈ ಕೆಳಗಿನಂತಿರುತ್ತವೆ:

### टीका

**अपरे तु, "स्वत: परब्रह्मभूतस्यैव जीवस्य अज्ञान निमित्तं दु:खादि, तत् अद्वैत ज्ञान निवर्तनीयं इत्यतो अनर्थहेतो:,अस्य प्रहाणाय आत्मैक्यविद्याप्रतिपत्तये सर्व शास्त्रारम्भ:" इति वर्णयन्ति।**

**अधिकारि:**

ಅಜ್ಞಾನ ನಿಮಿತ್ತವಾಗಿ ದುಃಖಪಡುವ, ಪರಬ್ರಹ್ಮಭೂತನಾದ ಜೀವ. ಇಲ್ಲಿ ಅಜ್ಞಾನ ಎಂದರೆ जीवब्रह्मैक्य ದ ಅಜ್ಞಾನ ಅಥವಾ अद्वैत ज्ञान निवर्तक ದಿಂದ ಕೂಡಿದ್ದು ಎಂದರ್ಥ.

**विषयः**
जीव–ब्रह्म ऐक्य ಪ್ರತಿಪಾದಿಸುವದೆ, ವೇದಾದಿ ಶಾಸ್ತ್ರಗಳ ಗುರಿ.

**प्रयोजनः**
अद्वैत ज्ञान निवर्तक ದಿಂದ ಉಂಟಾದ ಅಜ್ಞಾನ. ಹಾಗೂ ಅದರಿಂದ ಉಂಟಾದ ದುಃಖಾದಿ ಅನರ್ಥಗಳ ನಿವೃತ್ತಿ.

**संबन्धः**
अधिकारि, विषय, प्रयोजन ಗಳಲ್ಲಿಯ यथायोग्य ಸಂಬಂಧ.

## ಟಿಪ್ಪಣಿಗಳವಿಶೇಷ ವಿವರಣೆ

**विषयः**
यत् ज्ञानार्थं यत्र प्रवर्तते स तस्य विषयः ಎಂಬ ಉಕ್ತಿಯ ಅನುಗುಣವಾಗಿ, जीव–ब्रह्म ऐक्य ದ ಜ್ಞಾನವನ್ನು ಪಡೆಯುವದು. ಅಂದರೆ, जीव–ब्रह्म ऐक्य ಪ್ರತಿಪಾದಿಸುವದೆ, ವೇದಾದಿ ಶಾಸ್ತ್ರಗಳ ಗುರಿ.

**प्रयोजनः**
ಅಜ್ಞಾನದಿಂದ ಉಂಟಾದ ದುಃಖಾದಿ ಅನರ್ಥಗಳ ನಿವೃತ್ತಿ.
अज्ञानस्य दुःखादि अनर्थोपादानत्वात्, अज्ञान निवृत्ते तद् उपादानक दुःखादिकम् अपि निवर्तत इति, दुःखनिवृत्ति हेतु अज्ञान निवृत्तिः अपि प्रयोजनम् इति भावः।
ಅಂದರೆ, अद्वैत ज्ञान निवर्तन ದಿಂದ ಉಂಟಾದ ದುಃಖಾದಿ ಅನರ್ಥಗಳ ನಿವೃತ್ತಿ. ಹಾಗೂ ಅಜ್ಞಾನ ನಿವೃತ್ತಿಯಿಂದ ತಾನೆ ಬ್ರಹ್ಮ ಎಂಬ ಅನುಭೂತಿ.

**संबन्धः**
अधिकारि, विषय, प्रयोजन ಗಳಲ್ಲಿಯ यथायोग्य ಸಂಬಂಧ. ಅಂದರೆ ಅಜ್ಞಾನಿ ಜೀವ, ವೇದಾದಿಶಾಸ್ತ್ರ ಅಧ್ಯಯನದಿಂದ ಪಡೆದ ಜೀವಬ್ರಹ್ಮ ಐಕ್ಯ ಜ್ಞಾನ, ಅದರಿಂದ ತಾನೆ ಬ್ರಹ್ಮ ಎಂಬ ಅನುಭುತಿ.

# ३. ಮಂಗಲಾಚರಣ ಶ್ಲೋಕ

## टीका

**तन्मतम् अपाकृत्य स्वमतं समर्थयितुं इदं प्रकरणं आरभमाणो भगवान् आचार्यः परममंगलं नरसिंहस्तवनं आदौ आचरति।**

ವೇದಾದಿಶಾಸ್ತ್ರಗಳಿಗೆ, ಪರಮತದವರು ಪ್ರತಿಪಾದಿಸುವ ವಿಷಯಾದಿಗಳನ್ನು ನಿರಾಕರಿಸಿ,

ಸ್ವಮತ ಅಭಿಪ್ರೇತವಾದ ವಿಷಯಾದಿಗಳನ್ನು ಸಮರ್ಥಿಸಲು, ಈ ಪ್ರಕರಣವನ್ನು ಪ್ರಾರಂಭಮಾಡುವ ಶ್ರೀಮದಾಚಾರ್ಯರು, ಪರಮಮಂಗಲವಾದ ಶ್ರೀ ನೃಸಿಂಹಸ್ತವನವನ್ನು ಮೊದಲಿಗೆ ಆಚರಿಸುತ್ತಾರೆ.

## मायावाखण्डनम्

नरसिंहोऽखिलाज्ञान मतध्वान्तदिवाकरः।
जयत्यमितसज्ज्ञान सुखशक्तिपयोनिधिः॥

अन्वयः– अखिल अज्ञानमतध्वान्तदिवाकरः नरसिंहः जयति। अमित सज्ज्ञानसुखशक्तिपयोनिधिः नरसिंहः जयति।

## टीका

अखिलं चैतन्यमात्र अतिरिक्तं अज्ञान कल्पितं इति यन्मतं तदेव ध्वान्तं इव। सम्यग् ज्ञानप्रतिरूपत्वात्। तत निरसने दिवाकर इव। जयति उत्कृष्टो वर्तते। तथा च उक्तम्
जयेर्जयाभिभवयोः आद्ये अर्थे असावकर्मकः।
उत्कर्षप्राप्तिः आद्यो अर्थो द्वितीये अर्थे सकर्मकः॥" इति।

ಇಲ್ಲಿ, ಶ್ರೀಮದಾಚಾರ್ಯರು जयति ಎಂಬ ಕ್ರಿಯಾಪದವನ್ನು,

"जयेर्जयाभिभवयोः आद्ये अर्थे असावकर्मकः।
उत्कर्षप्राप्तिः आद्यो अर्थो द्वितीये अर्थे सकर्मकः॥"

ಎಂಬ ಉಕ್ತಿಯಂತೆ, ಸಕರ್ಮಕ ಹಾಗು ಅಕರ್ಮಕವಾಗಿಯೂ ಉಪಯೋಗಿಸಿದ್ದಾರೆ, जयति ಎಂದರೆ ಉತ್ಕೃಷ್ಟನಾಗಿದ್ದಾನೆ ಎಂದರ್ಥ.

- अखिल अज्ञानमतध्वान्तदिवाकरः नरसिंहः जयति।:

ಎಲ್ಲವು ಚೈತನ್ಯಮಯ, ಅದರ ಹೊರತಾಗಿ ಇರುವ ಎಲ್ಲವು ಅಜ್ಞಾನಕಲ್ಪಿತ ಎಂದು ಹೇಳುವ ಮತ अखिल–अज्ञानमत. ಇದನ್ನು ध्वान्त ಅಂದರೆ ಕತ್ತಲೆ. अखिल–अज्ञानमतध्वान्त ಎಂದರೆ ಕತ್ತಲೆಯಂತಿರುವ अखिल–अज्ञानमत ಎಂದರ್ಥ. ಏಕೆಂದರೆ ಅಂತಹ ತಿಳುವಳಿಕೆ ಸಮ್ಯಕ್ ಜ್ಞಾನದ ವಿರುದ್ಧವಾಗಿರುತ್ತದೆ. ಇಂತಹ ಕತ್ತಲಸಮವಾದ ತಿಳುವಳಿಕೆಯನ್ನು ಹೊಡೆದೋಡಿಸಲು, दिवाकरः नरसिंहः ಸೂರ್ಯನಂತಿರುವ ನೃಸಿಂಹದೇವರು, जयति ಎಂದರೆ ಉತ್ಕೃಷ್ಟರಾಗಿದ್ದರೆ ಎಂದರ್ಥ.

ಇಲ್ಲಿ जयति ಕ್ರಿಯಾಪದವನ್ನು ಕರ್ಮಸಾಪೇಕ್ಷತೆಯಿಂದ ಉಪಯೋಗಿಸಲಾಗಿದೆ. ಉದಾಹರಣೆಗೆ

चैत्र: शत्रून् जयति, अभिभवति, तिरस्करोति इति। ಎನ್ನುವಂತೆ. ಅದರಂತೆ ಇಲ್ಲಿ जयति ಎಂದರೆ ಉತ್ಕೃಷ್ಟನಾಗಿದ್ದಾನೆ, ಎಂಬುದು ಸಕರ್ಮಕ ಪ್ರಯೋಗವಾಗಿರುತ್ತದೆ.

- अमित सज्ज्ञानसुखशक्तिपयोनिधि: नरसिंह: जयति।:

ಇಲ್ಲಿ जयति ಕ್ರಿಯಾಪದವನ್ನು कर्मनैरपेक्ष ದಿಂದ ಉಪಯೊಗಿಸಲಾಗಿದೆ. ಅಂದರೆ, ಶ್ರೀನೃಸಿಂಹ ದೇವರ ವಿಶಿಷ್ಟ ಲಕ್ಷಣಗಳ ಉತ್ಕೃಷ್ಟತೆಯನ್ನು, ಇಲ್ಲಿ ಕರ್ಮನಿರಪೇಕ್ಷಭಾವದಿಂದ ವರ್ಣಿಸಲಾಗಿದೆ. ಆದ್ದರಿಂದ ಇಲ್ಲಿ ಜಯತಿ ಕ್ರಿಯಾಪದ ಅಕರ್ಮಕ ವಾಗಿರುತ್ತದೆ.

## टीका

**सत्वं ज्ञान सुखशक्तीनां विशेषणम्। ज्ञानस्य यथार्थत्वं सत्त्वं, सुखस्य दु:ख असम्भिन्नत्वं, शक्ते: अप्रतिबद्धता। ताभि: पयोनिधि: इव। पयोनिधि: परमितो भवति इत्यत: तं अमितत्वेन विशिनष्टि।**

सज्ज्ञानसुखशक्तिपयोनिधि: ಎಂಬಲ್ಲಿ, सत्व ಪದವು ज्ञान सुख ಮತ್ತು शक्ति ಇವೆಲ್ಲವುಗಳಿಗೆ ನಿರ್ದುಷ್ಟತ್ವವನ್ನು ಪ್ರತಿಪಾದಿಸುವ ವಿಶೇಷಣವಾಗಿರುತ್ತದೆ. ಅಂದರೆ, सत्व ಪದವು ಯಾವ ಯಾವದಕ್ಕೆ ವಿಶೇಷಿಸುತ್ತದೊ, ಅವುಗಳಲ್ಲಿಯ ದೋಷದ ಅಭಾವತೆಯನ್ನು ಹೇಳುತ್ತದೆ ("एवं च अयं येन येन विशेष्यते तत्तस्य दोष अभावं वक्ति").

"ज्ञानस्य अयथार्थत्वं दोष:। तस्य निर्दुष्टत्वे अभिहिते यथार्थत्वं लभ्यते।", ಅಂದರೆ, ಅಯತಾರ್ಥವು ಜ್ಞಾನದ ದೋಷವಾಗಿರುತ್ತದೆ, ಅಲ್ಲಿ ಸತ್ವ ಪದವು, ಜ್ಞಾನಕ್ಕೆ ಯಥಾರ್ಥತೆಯನ್ನು ಒದಗಿಸುವದುತ್ತದೆ. ಅಂದರೆ ಯಥಾರ್ಥಜ್ಞಾನ ಎಂದರ್ಥ.

"सुखस्य दु:ख सम्बन्धो दोष:। तस्य निर्दुष्टत्वे अभिहिते दु:ख असंभिन्नत्वं लभ्यते।" ಅಂದರೆ ದುಃಖವು ಸುಖದ ದೋಷವಾಗಿರುತ್ತದೆ, ಆದ್ದರಿಂದ, ಅಲ್ಲಿ ಸತ್ವ ಪದವು, ಸುಖಕ್ಕೆ ದುಃಖದ ಅಸಂಬಂಧತ್ವವನ್ನು ಒದಗಿಸುತ್ತದೆ. ಅಂದರೆ ದುಃಖ ಸಂಬಂಧವಿಲ್ಲದ ಸುಖ ಎಂದರ್ಥ.

"शक्ते: प्रतिबन्धो दोष:। तस्य निर्दुष्टत्वे अभिहिते अप्रतिबद्धत्वं लभ्यते।", ಅಂದರೆ प्रतिबन्धत्वವು ಶಕ್ತಿಯ ದೋಷವಾಗಿರುತ್ತದೆ. ಅದರಂತೆ ಸತ್ವ ಪದವು शक्ति ಗೆ (प्रतिबन्धत्वದ) ಎದುರಾಳಿಯ ಅಭಾವತೆಯನ್ನು ಅಂದರೆ अप्रतिबन्धत्व ವನ್ನು ಸೂಚಿಸುತ್ತದೆ. ಅಂದರೆ ಎದುರಾಳಿ ಇಲ್ಲದ शक्ति ಎಂದರ್ಥ.

ಇಂತಹ ಜ್ಞಾನ, ಸುಖ ಶಕ್ತಿಗಳ पयोनिधि ಅಂದರೆ ಕ್ಷೀರಸಮುದ್ರ ನಂತಿರುವ ಶ್ರೀನೃಸಿಂಹ ದೇವರು ಎಂದರ್ಥ. पयोनिधि ವೆಂದರೂ, ಒಂದು ರಿತಿಯಲ್ಲಿ ಪರಿಮಿತಿಯನ್ನು

ಹೇಳಿದಂತಾಯಿತಲ್ಲ, ಎಂಬ ಶಂಕೆಯನ್ನು ದೂರಮಾಡಲು, ಶ್ರೀಮದಾಚಾರ್ಯರು अमित ಎಂಬ ವಿಶೇಷಣವನ್ನು ಬಳಿಸಿದ್ದಾರೆ. अमित ಎಂದರೆ ಯಾವದೆ ಪರಿಮಿತಿಗೆ ಒಳಗಾಗದ ಎಂದರ್ಥ. ಇಲ್ಲಿ ಒಟ್ಟರಲ್ಲಿ ಹೀಗೆ ಹೇಳಿದಂತಾಯಿತು: ಯಾವುದೇ ಪರಿಮಿತಿಗೆ ವಳಗಾಗದ ಯಥಾರ್ಥ ಜ್ಞಾನ, ದುಃಖ ಸಂಬಂಧವಿಲ್ಲದ ಸುಖ, ಹಾಗೂ ಎದುರಾಳಿ ಇಲ್ಲದ ಶಕ್ತಿ, ಇವುಗಳ ಪಯೋನಿಧಿಯಂತಿರುವ ಶ್ರೀನೃಸಿಂಹದೇವರು ಉತ್ಕೃಷ್ಟರಾಗಿದ್ದಾರೆ.

ಈ ವರೇಗಿನ ವಿವೇಚನೆಯಿಂದ, ಮಂಗಲಾಚರಣ ಶ್ಲೊಕದ ಅರ್ಥವು ಕೆಳಗಿನಂತೆ ಆಗುತ್ತದೆ:

**ಅಖಿಲ ಅಜ್ಞಾನಮತ ಎಂಬ ಘೋರ ಕತ್ತಲೆಗೆ ಸೂರ್ಯನಂತಿರುವ ಹಾಗು ಯಾವುದೇ ಪರಿಮಿತಿಗೆ ವಳಗಾಗದ ಯಥಾರ್ಥ ಜ್ಞಾನ, ದುಃಖ ಸಂಬಂಧವಿಲ್ಲದ ಸುಖ ಮತ್ತು ಎದುರಾಳಿ ಇಲ್ಲದ ಶಕ್ತಿ, ಇವುಗಳ ಪಯೋನಿಧಿಯಂತಿರುವ ಶ್ರೀನ್ಯಾಸಿಂಹದೇವರು ಉತ್ಕೃಷ್ಟರಾಗಿದ್ದಾರೆ.**

## टीका

**द्विविधः खलु पुरुषार्थः अनिष्टनिवृत्तिः इष्ट प्राप्तिश्च। तत्र अखिलेति मायावादादि दुर्मतप्रसंजित मिथ्याज्ञानादि अनिष्टनिवर्तकत्वेन नरसिंहस्तुतिः विहिता। अमितेति सम्यग् ज्ञानादि समस्त इष्ट सम्पादन समर्थत्वेन इति।**

ಇನ್ನೊಂದು ರೀತಿಯಿಂದಲೂ ಅಂದರೆ "तं यथा यथोपासते तदेव भवति" इति, ಶೃತಿ ಉಕ್ತಿಗೆ ಅನುಗುಣವಾಗಿಯೂ ಶ್ರೀಮದಾಚಾರ್ಯರ ಮಂಗಲಾಚರಣ ಶ್ಲೋಕವನ್ನು ವಿಶ್ಲೇಶಿಸಬಹುದು, ಅದು ಹೀಗಿದೆ:

ಪುರುಷಾರ್ಥವು ಎರಡು ತರಹದಾಗಿರುತ್ತದೆ, अनिष्ट निवृत्ति ಮತ್ತು इष्टप्राप्ति ಎಂದು. ಅದರಂತೆ ಈ ಮಂಗಲಾಚರಣದಲ್ಲಿ, मायावाद ಎಂಬ ದುರ್ಮತ ಪ್ರತಿಪಾದಿಸುತ್ತಿರುವ मिथ्या ಜ್ಞಾನಾದಿಗಳ ಅನಿಷ್ಟ ನಿವರ್ತನೆಗೋಸ್ಕರ, अखिल अज्ञानमतध्वान्तदिवाकरः ಎಂಬ ವಿಶೇಷಣಗಳಿಂದ ಶ್ರೀನೃಸಿಂಹದೆವರ ಸ್ತುತಿಯಾಗಿರುತ್ತದೆ. ಹಾಗು अमित सज्ज्ञानसुखशक्तिपयोनिधिः ಎಂಬ ವಿಶೇಷಣಗಳಿಂದ ಸಮ್ಯಗ್ ಜ್ಞಾನರೂಪ ಇಷ್ಟಪ್ರಾಪ್ತಿಯನ್ನು ಪಡೆಯಲು ಶ್ರೀನೃಸಿಂಹದೇವರನ್ನು ಸ್ತುತಿಸಲಾಗಿದೆ.

## ೪. ಪರಮತವು ದೋಷಪೂರ್ಣ ಎಂದು ಪ್ರತಿಪಾದಿಸುವ ದೂಷಣ ಅನುಮಾನ

## ೪.೧ ಪ್ರಸ್ತಾವನೆ

ಈ ಪರಿಚ್ಛೇದದಲ್ಲಿ, ಪರಮತ ದೋಷಪೂರ್ಣ ಎಂದು ತೋರಿಸಲು ಶ್ರೀಮದಾಚಾರ್ಯರು ಪ್ರಯೋಗಿಸಿದ ದೂಷಣ ಅನುಮಾನದ ಹಿನ್ನೆಲೆಯನ್ನು ವರ್ಣಿಸುತ್ತಾರೆ.

### टीका

**अखिल अज्ञान्मतं ध्वान्तसमं इत्येतत् असहमान आह- जीवब्रह्मणो: एकत्वं हि श्रुतितन्मीमांसाभि: तात्पर्यत: प्रतिपाद्यते। न च एतत् चैतन्य अतिरिक्तस्य अखिलस्य अज्ञानकल्पिततया विना उपपद्यते। तत् कथं एवं उच्यते इति।**

ಶ್ರೀಮದಾಚಾರ್ಯರು ತಮ್ಮ ಮಂಗಲಾಚರಣ ಶ್ಲೋಕದಲ್ಲಿ, ಎಲ್ಲವೂ ಚೈತ್ಯನ್ನಮಯ ಅದರ ಹೊರತಾಗಿ ಇರುವುದೆಲ್ಲ ಅಜ್ಞಾನ ಕಲ್ಪಿತ ಎಂದು ಹೇಳುವ ಮತವನ್ನು, ಘೋರ ಕತ್ತಲೆಗೆ ಹೋಲಿಸಿದ್ದಾರೆ. ಅದಕ್ಕೆ ಪರಮತದವರು ತಮ್ಮ ಅಸಹಮಾನತೆಯನ್ನು ಹೀಗೆ ಸೂಚಿಸುತ್ತಾರೆ: ಜೀವ ಬ್ರಹ್ಮ ಐಕ್ಯವನ್ನು ಪ್ರತಿಪಾದಿಸುವದೇ ವೇದಾದಿಶಾಸ್ತ್ರಗಳ ವಿಷಯವಾಗಿರುತ್ತದೆ. ಇನ್ನು ಜೀವ ಬ್ರಹ್ಮ ಐಕ್ಯವನ್ನು ಪ್ರತಿಪದಿಸುವದಾದರೆ, ಚೈತನ್ಯ ಅತಿರಿಕ್ತವಾದುದೆಲ್ಲ ಅಜ್ಞಾನ ಕಲ್ಪಿತ ಎಂದು ಪ್ರತಿಪಾದಿಸದೆ, ಜೀವ ಬ್ರಹ್ಮ ಐಕ್ಯವನ್ನು ಪ್ರಸ್ಥಾಪಿಸಲು ಸಾಧ್ಯವಿಲ್ಲ. ಹೀಗಿರುವಾಗ ಎಲ್ಲವೂ ಚೈತನ್ಯಮಯ ಅದರ ಹೊರತಾಗಿ ಇರುವುದೆಲ್ಲ ಅಜ್ಞಾನ ಕಲ್ಪಿತ ಎಂಬ ಮತವನ್ನು ಹೇಗೆ ಘೋರಕತ್ತಲೆಗೆ ಸಮ ಎಂದು ಹೇಳುತ್ತೀರಿ?

### ಟಿಪ್ಪಣಿಗಳವಿಶೇಷ ವಿವರಣೆ

॥ न च एतत् चैतन्य अतिरिक्तस्य अखिलस्य अज्ञानकल्पिततया विना उपपद्यत इति॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರ ಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ:

- सर्वस्य सत्यत्वे, सर्वज्ञत्व असर्वज्ञत्वादि विरुद्धधर्माणां अपि सत्यत्वेन ऐक्य अनुपपत्ते:। ಅಂದರೆ, ಎಲ್ಲವೂ ಸತ್ಯವಾದರೆ, सर्वज्ञत्व, असर्वज्ञत्वादि ವಿರುದ್ಧಧರ್ಮಗಳಿಗೂ ಸತ್ಯತ್ವ ಉಂಟಾಗುವದರಿಂದ, ಅವುಗಳಲ್ಲಿ ಐಕ್ಯವನ್ನು ಹೇಳುವದು ಸರಿ ಎನಿಸುವದಿಲ್ಲ.
- यद्वा, सर्वस्य सत्यत्वे जीवब्रह्मैक्य शब्दोपलक्षित सजातीय विजातीय, स्वगत नानात्वराहित्यस्य अनुपपत्ते: इति भाव:।, ಅಂದರೆ, ಅಥವಾ ಎಲ್ಲವೂ ಸತ್ಯವಾದರೆ जीवब्रह्मैक्य ಶಬ್ದೋಪಲಕ್ಷಿತ ವಿಜಾತಿ, ಸಜಾತಿ, ಸ್ವಗತ ಹಾಗೂ ನಾನಾಬಗೆಯತ್ವವನ್ನು ಅಲ್ಲಗೆಳೆಯುವದು

ಸರಿ ಎನಿಸುವದಿಲ್ಲ.

• अज्ञान परिकल्पिततत्वरुप मिथ्यात्व अभावे च ईश्वरनिष्ठ सर्वज्ञादे: जीवनिष्ठ दु:खादे: च सत्यत्व आपत्या, विरुद्धधर्मादिकरणत्वेन, जल–अनलवत जीवेश्वर्यो: भेद एव स्यात इति भाव:। ಅಂದರೆ, ಅಜ್ಞಾನಕಲ್ಪಿತತ್ವರೂಪ, ಮಿಥ್ಯಾತ್ವ ಇಲ್ಲವೆಂದಾಗ, ईश्वरनिष्ठ ಸರ್ವಜ್ಞಾದಿಗಳಿಗೆ, जीवनिष्ठ ದುಃಖಾದಿಗಳಿಗೆ ಸತ್ಯತ್ವ ಉಂಟಾಗಿ, विरुद्धधर्मादिकरणत्व ದಿಂದ ನೀರು-ಬೆಂಕಿ ಯಂತೆ, ಜೀವ-ಈಶ್ವರ ರಲ್ಲಿ, ಭೇದವನ್ನೇ ಹೇಳಿದಂತಾಗುತ್ತದೆ. ಹೀಗಿದ್ದಾಗ, ಶ್ರೀಮದಾಚಾರ್ಯರು ತಮ್ಮ ಮಂಗಲಾಚರಣದಲ್ಲಿ, ಅಖಿಲ ಅಜ್ಞಾನ ಮತವನ್ನು ಘೋರಕತ್ತಲೆಗೆ ಹೇಗೆ ಹೋಲಿಸುತ್ತಾರೆ?

## टीका

**मैवम्। स्यात् एतत् एवं, यदि जीवब्रह्मणो: ऐक्यप्रतिपादकतवं वेदतन्मीमांसयो: उपपन्नं स्यात्। न च एतत् अस्ति। तत्परतया व्याख्याने वेदादे: अनारम्भणीयत्व प्रसंगात्।**

ಇದಕ್ಕೆ ಸಮಾಧಾನ ಹೀಗಿರುತ್ತದೆ: ನಿಜ, ಒಂದು ವೇಳೆ ವೇದಾದಿಶಾಸ್ತ್ರಗಳ ವಿಷಯ ಜೀವ ಬ್ರಹ್ಮ ಐಕ್ಯವನ್ನೇ ಪ್ರತಿಪಾದಿಸುವದೇ ಆದರೆ ತಮ್ಮ ಶಂಕೆ ಸರಿಯಾಗಿದೆ. ಆದರೆ ವೇದಾದಿಶಾಸ್ತ್ರಗಳು ಐಕ್ಯವನ್ನು ಪ್ರತಿಪಾದಿಸುವದೇ ಇಲ್ಲ. ಏಕೆಂದರೆ ವೇದಾದಿಶಾಸ್ತ್ರಗಳು, ಐಕ್ಯವನ್ನು ಪ್ರತಿಪಾದಿಸಿದಲ್ಲಿ, ಅವುಗಳಿಗೆ ಅನಾರಂಭಣೀಯತ್ವ ಉಂಟಾಗುತ್ತದೆ. ಅಂದರೆ ವೇದಾದಿಶಾಸ್ತ್ರಗಳು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವೆನಿಸಲಾರವು. ಇದನ್ನೆ ಮುಂದೆ ಶ್ರೀಮದಾಚಾರ್ಯರು, ಈ ಪ್ರಕರಣದಲ್ಲಿ ಪ್ರದಿಪಾದಿಸಲಿದ್ದಾರೆ.

### *೪.೨ ಪೂರ್ವಪೀಠಿಕೆ*

ಈ ಪರಿಚ್ಛೇದದಲ್ಲಿ, ಅನುಮಾನಗಳ ಬಗ್ಗೆ ಕೆಲವೊಂದು ಮೂಲಭೂತ ವೀಷಯಗಳನ್ನು ವಿವರಿಸಲಾಗುವದು. ಅವುಗಳ ಜ್ಞಾನ, ಈ ಪ್ರಕರಣದಲ್ಲಿ, ಶ್ರೀಮದಾಚಾರ್ಯರು ಪ್ರಯೋಗಿಸಿದ ದೂಷಣ ಅನುಮಾನವನ್ನು ತಿಳಿಯಲು ಅನುಕೂಲವಾಗುವದು.

### ೪.೨.೧ ಅನುಮಾನದ ಲಕ್ಷಣ

ಶ್ರೀಮದಾಚಾರ್ಯರು, ತಮ್ಮ ಪ್ರಮಾಣ ಲಕ್ಷಣ ಗ್ರಂಥದಲ್ಲಿ "निर्दोष उपपति: अनुमानम्" ಎಂದು अनुमानದ ಲಕ್ಷಣವನ್ನು ಹೇಳಿದ್ದಾರೆ. अनुमान ಎಂದರೆ ನಿರ್ದುಷ್ಟವಾದ ಉಪಪತ್ತಿ ಅಥವಾ

ಯುಕ್ತಿ. ಶ್ರೀ ಟೀಕಾಕೃತ್ಪಾದರು, ತಮ್ಮ ಪ್ರಮಾಣ लक्षण टीका ದಲ್ಲಿ, उपपत्ति ಯ ಲಕ್ಷಣವನ್ನು "उपपत्तिः इति लिङ्गं उच्यते" ಎಂದು ಹೇಳಿ " साहचर्यबलेन अर्थगमकं लिङ्गं" ಎಂದು लिङ्ग ಪದದ ಅರ್ಥವನ್ನು ವಿವರಿಸಿದ್ದಾರೆ. ಅಂದರೆ ಸಾಹಚರ್ಯಬಲದಿಂದ ತಿಳುವಳಿಕೆಯನ್ನು ಪ್ರಾಪ್ತಮಾಡಿಕೊಡುವದು ಲಿಂಗ ಎಂದರ್ಥ.

अनुमान ಎಂದರೆ, "निर्दोषं साहचर्यबलेन अर्थगमकम् अनुमानम्". ಅಂದರೆ ಅನುಮಿತಿಗೆ ಕಾರಣವಾದ ವ್ಯಾಪ್ತಿವಿಶಿಷ್ಟ ಸಹಿತ ನಿರ್ದುಷ್ಟ ಜ್ಞಾನ, ಅನುಮಾನ ಎಂದು ಹೇಳಿದಂತಾಯಿತು.

ಉದಾಹರಣೆಗೆ: पर्वतो वह्निमान् धूमवत्वात्। ಅಂದರೆ ಪರ್ವತವು ಬೆಂಕಿವುಳ್ಳದ್ದು, (ಪರ್ವತದಲ್ಲಿ) ಹೊಗೆ ಇರುವದರಿಂದ. ಇಲ್ಲಿ, ಹೊಗೆ ಇದ್ದಲ್ಲಿ ಬೆಂಕಿ ಇರುತ್ತದೆ ಎಂಬ ಬೆಂಕಿ ಮತ್ತು ಹೊಗೆಯಲ್ಲಿಯ ಸಾಹಚರ್ಯಬಲವು ಪರ್ವತದಲ್ಲಿಯ ಬೆಂಕಿಯ ಜ್ಞಾನವನ್ನು ಮಾಡಿಕೊಡುತ್ತದೆ. ಸಾಹಚರ್ಯ ಸಂಬಂಧವನ್ನು ವ್ಯಾಪ್ತಿ (व्याप्ति) ಎಂತಲೂ ಕರೆಯುತ್ತಾರೆ.

### ೪.೨.೨ ಅನುಮಾನದ ಅವಯವಗಳು

ನೈಯಾಯಿಕರು ಯಾವದೆ ಅನುಮಾನದಿಂದ ಜ್ಞಾನವನ್ನು ಸಾಧಿಸಬೇಕದರೆ, ಅನುಮಾನಕ್ಕೆ ಐದು ಅವಯವಗಳನ್ನು ಹೇಳುತ್ತಾರೆ: प्रतिज्ञा, हेतु, उदाहरण, उपनय, ಮತ್ತು निगमन ಎಂದು.

**<u>प्रतिज्ञा</u>**

पक्ष ದಲ್ಲಿ ಯಾವ साध्यधर्म ವನ್ನು ಸಾಧಿಸಲಾಗುವದೊ, ಅದನ್ನು ತಿಳಿಸುವ ವಾಕ್ಯ प्रतिज्ञा ಎಂದೆನಿಸುವದು. ಇದನ್ನು ಪಾರಿಭಾಷಿಕ ಭಾಷೆಯಲ್ಲಿ ಹೀಗೆ ಹೇಳಬಹುದು "प्रतिपादनाय पक्षवचनम् प्रतिज्ञा।"

ಉದಾ: "पर्वतो वह्निमान् धूमवत्वात् महानसवत्" ಅಂದರೆ, "ಪರ್ವತವು ಅಗ್ನಿವುಳ್ಳದ್ದು, ಹೊಗೆ ಇರುವದರಿಂದ, ಅಡುಗೆಮನೆಯಂತೆ" ಎಂಬ ಅನುಮಾನ ದಲ್ಲಿ, "पर्वतो वह्निमान्" ಅಂದರೆ "ಪರ್ವತವು ಅಗ್ನಿವುಳ್ಳದ್ದು" ಇದು प्रतिज्ञा. ಇಲ್ಲಿ, ಪರ್ವತದಲ್ಲಿ ಅಗ್ನಿಯನ್ನು ಸಾಧಿಸಲಾಗುವದು. ಆದ್ದರಿಂದ, ಪರ್ವತವು पक्ष ಹಾಗೂ ಅಗ್ನಿಯು साध्यधर्म.

पक्ष ಹಾಗೂ साध्यधर्म ಗಳ ಪಾರಿಭಾಷಿಕ ವ್ಯಾಖ್ಯೆ ಹೀಗಿರುತ್ತದೆ:

साध्यधर्मविशिष्टः पक्षः। वा साध्य धर्मवान् धर्मि पक्षः। ಅಂದರೆ, ಸಾಧ್ಯಧರ್ಮದಿಂದ ಕೂಡಿದ ಧರ್ಮಿಗೆ ಪಕ್ಷ ಎನ್ನುವರು.

यत् प्रतीति लिङ्गेन जनयितव्या स साध्यधर्मः। ಅಂದರೆ, ಯಾವುದನ್ನು ಹೇತು ವಿನಿಂದ ಪಕ್ಷದಲ್ಲಿ ಸಾಧಿಸಲಾಗುವದೊ ಅದು ಸಾಧ್ಯಧರ್ಮ ಎನಿಸುವದು. ನಾವು ತೆಗೆದುಕೊಂಡ

ಉದಾಹರಣೆಯಲ್ಲಿ, "ಹೊಗೆ ಇರುವದರಿಂದ (धूमवत्वात्). ಹೇತು ಎನಿಸುವದು.

**हेतुः**

ಸಾಹಚರ್ಯಬಲದಿಂದ (ವ್ಯಾಪ್ತಿಯಿಂದ) ಸಾಧ್ಯಧರ್ಮದ ಜ್ಞಾನವನ್ನು ಉಂಟುಮಾಡುವ ಧರ್ಮ ಹೇತು ಎಂದೆನಿಸುವದು. ಅದನ್ನೆ ಪಾರಿಭಾಷಿಕ ವ್ಯಾಖ್ಯೆಯಲ್ಲಿ ಹೀಗೆ ಇರುತ್ತದೆಃ

साधनत्वं अभिव्यंजक विभक्त्यन्तं लिंग वचनं हेतु:। वा लिंगस्य वचनं हेतु: साधनत्वप्रकाशकम्।

ಅಂದರೆ, ಸಾಧನತ್ವ ಪ್ರಕಾಶಕ ವ್ಯಾಪ್ತಿಯ ಲಿಂಗ ವಚನ ಹೇತು.

ನಾವು ತೆಗೆದುಕೊಂಡ ಉದಾಹರಣೆಯಲ್ಲಿ "धूमवत्वात् (ಹೊಗೆ ಇರುವದರಿಂದ)" ಹೇತು ಆಗಿರುತ್ತದೆ.

**उदाहरण:**

ಸಮ್ಯಕ್ ವ್ಯಾಪ್ತಿ ಪ್ರದರ್ಶನ ಪೂರ್ವಕ ದೃಷ್ಟಾಂತ ವಚನವು उदाहरण ಎನಿಸುವದು. ದೃಷ್ಟಾಂತ ಎಂದರೆ ವ್ಯಾಪ್ತಿಯನ್ನು ಗ್ರಹಿಸತಕ್ಕ ಸ್ಥಳ. ಅಂದರೆ ಸಾಧ್ಯ ಹಾಗೂ ಹೇತು ಗಳಿಗಿರುವ ವ್ಯಾಪ್ತಿಯನ್ನು ತಿಳಿದುಕೊಳ್ಳಲು ಸಹಾಯಕವಾದ ಆಶ್ರಯ. ಇದರ ಪರಿಭಾಷಿಕ ವಾಖ್ಯೆ ಹೀಗಿರುತ್ತದೆಃ

व्याप्तिदर्शन पुरस्सरं सम्यग् दृष्टान्त अभिधानं उदाहरणम्। ಮತ್ತು निदर्शनम् दृष्टान्त:।

ಉದಾಃ यत्र यत्र धूमः तत्र तत्र वह्निः, यथा महानसम्, ಅಂದರೆ ಎಲ್ಲಿ ಎಲ್ಲಿ ಧೂಮವಿದೆಯೊ, ಅಲ್ಲಿ ಅಲ್ಲಿ ವಹ್ನಿ ಇದೆಃ ಅಡುಗೆಮನೆಯಂತೆ.

**उपनय:**

पक्ष ದಲ್ಲಿ ಹೇತು ವಿನ ವ್ಯಾಪ್ತಿ ಪ್ರದರ್ಶಕ ವಚನವೇ उपनय. ಇದರ ಪರಿಭಾಷಿಕ ವ್ಯಾಖ್ಯೆ ಹೀಗಿರುತ್ತದೆಃ

दृष्टान्त उपमानेन लिंगस्य पक्षे उपसंहार: उपनय:। वा दृष्टान्त अपेक्षया पक्षे हेतोर्व्याप्ति प्रदर्शकम् वचनम् स्यात् उपनय:।

ಉದಾಃ तथा च अयं धूमवान् पर्वत:। ಅಂದರೆ ಈ ಪರ್ವತವು ಧೂಮವುಳ್ಳದ್ದಾಗಿದೆ.

उपनय ವಾಕ್ಯವನ್ನು ಹೇತು ವಾಕ್ಯದಿಂದಲೇ ತಿಳಿಯಬಹುದಾಗಿದೆ. ಆದ್ದರಿಂದ ಕೆಲವರು, उपनय ವನ್ನು ಪ್ರತ್ಯೇಕವಾಗಿ ಅನುಮಾನದ ಅವಯವ ಎಂದು ಮಾನಿಸುವದಿಲ್ಲ.

**निगमन:**

ಹೇತು ಪೂರ್ವಕ पक्ष ದಲ್ಲಿ साध्य ವನ್ನು ಉಪಸಂಹರಿಸುವದಕ್ಕೆ, निगमन ಎನುತ್ತಾರೆ. ಅಂದರೆ, ಹೇತು ಪೂರ್ವಕ, पक्षवचन ವನ್ನು ಹೇಳುವದು निगमन. ಇದರ ಪಾರಿಭಾಷಿಕ ವ್ಯಾಖ್ಯೆ ಹೀಗಿರುತ್ತದೆ.

हेतुपुरस्सरं पक्षे साध्यो उपसंहारो निगमनम्। वा हेतुपूर्वं पुन: पक्षवचनम् निगमनम् मतम्।

ಉದಾಃ तस्मात् पर्वतो वह्निमान् एव् इति। ಅಂದರೆ, ಆದ್ದರಿಂದ ಪರ್ವತವು ವಹ್ನಿವುಳ್ಳದ್ದಾಗಿರುತ್ತದೆ.

प्रतिज्ञा वाक्य ದಿಂದ निगमन ತಿಳಿಯಬಹುದಾಗಿದೆ. ಆದ್ದರಿಂದ ಕೆಲವರು, निगमन ವನ್ನು ಪ್ರತ್ಯೇಕವಾಗಿ ಅನುಮಾನದ ಅವಯವ ಎಂದು ಮಾನಿಸುವದಿಲ್ಲ.

### ೪.೨.೩ ಅನುಮಾನದ ಅವಯವ ನಿಯಮದ ನಿರಾಕರಣೆ

ಶ್ರೀಮದಾಚಾರ್ಯರು, ಅನುಮಾನದ ಜ್ಞಾನವನ್ನು ಸಾಧಿಸಲು, ಅನುಮಾನಕ್ಕೆ ಇಷ್ಟಿಷ್ಟೆ ಅವಯವಗಳ ಅಗತ್ಯತೆಯ ನಿಯಮವನ್ನು ಒಪ್ಪುವದಿಲ್ಲ. ಇದನ್ನು ಅವರು ಹೀಗೆ ಪ್ರತಿಪಾದಿಸುತ್ತಾರೆ.

ಯಾವುದೆ ಅನುಮಾನವು ಸಾಧ್ಯಮತ್ತು ಹೇತುಗಳಲ್ಲಿಯ ವ್ಯಾಪ್ತಿಯ ಜ್ಞಾನವಿಲ್ಲದೆ ಪ್ರಮಾಣವೆನಿಸಲಾರದು. ಆದ್ದರಿಂದ ಅನುಮಾನದ ಜ್ಞಾನ ಉಂಟಾಗಲು, ಹೇತು ಸಾಧ್ಯ ಹಾಗೂ ಅವುಗಳಲ್ಲಿಯ ವ್ಯಾಪ್ತಿ ಜ್ಞಾನ ಆವಶ್ಯಕ. ಇದಕ್ಕೆ ಇಷ್ಟೆ ಅವಯವಗಳು ಬೇಕು ಎಂಬ ನಿರ್ಬಂಧನೆ ಬೇಕಾಗಿಲ್ಲ. ಇದನ್ನೆ ಕೆಳಗಿನ ಬ್ರಹ್ಮತರ್ಕದಲ್ಲಿಯ ಉಕ್ತಿ ಹೀಗೆ ಪ್ರತಿ ಪಾದಿಸುತ್ತದೆ.

युक्ति प्रतिज्ञारूपा च हेतुदृष्टन्तरूपिका।
तथोपनयरूपा च परानिगमनात्मिक।
पृथक् पृथक् प्रमाणत्वं याति युक्ति तयैव तु॥ इति ब्रह्मतर्के.

ಈ ವಿಷಯವನ್ನು ಶ್ರೀಮದಾಚಾರ್ಯರು ತಮ್ಮ "ಪ್ರಮಾಣ ಲಕ್ಷಣ" ಹಾಗೂ "ವಿಷ್ಣುತತ್ವವಿನಿರ್ಣಯ" ಗ್ರಂಥಗಳಲ್ಲಿ, ಬ್ರಹ್ಮತರ್ಕದಲ್ಲಿಯ ಪ್ರಮಾಣಗಳೊಂದಿಗೆ ವಿಶೇಷವಾಗಿ ಪ್ರಸ್ಥಾಪಿಸಿದ್ದಾರೆ.

ಈ ಪ್ರಕರಣದಲ್ಲಿ, ಕೂಡ ವೇದಾದಿಶಾಸ್ತ್ರಗಳಿಗೆ ಪರಪಕ್ಷದವರು ಪ್ರತಿಪಾದಿಸುವ ವಿಷಯಾದಿಗಳನ್ನು ನಿರಾಕರಿಸಲು, ಪಂಚ ಅವಯವ ಅನುಮಾನವನ್ನು ಪ್ರಯೋಗಿಸದೆ, ತ್ರಯವಯವ (ಅಂದರೆ, ಪ್ರತಿಜ್ಞಾ, ಹೇತು, ಮತ್ತು ಉದಾಹರಣೆ ಗಳಿಂದ ಕೂಡುದ್ದು) ಅನುಮಾನವನ್ನೆ ಶ್ರೀಮದಾಚಾರ್ಯರು ಪ್ರಯೋಗಿಸಿದ್ದಾರೆ.

ಅದರಂತೆಯೆ ಶ್ರೀಮದಾಚಾರ್ಯರು ತಮ್ಮ ಪ್ರಪಂಚ ಮಿಥ್ಯಾತ್ವ ಅನುಮಾನ ಖಂಡನ, ಪ್ರಕರಣ ಗ್ರಂಥದಲ್ಲಿ, ಪರಪಕ್ಷದವರು ಪ್ರಪಂಚಮಿಥ್ಯಾತ್ವವನ್ನು ಸಾಧಿಸಲು ಪ್ರತಿಪಾದಿಸುವ, ಪಂಚ ಅವಯವ ಅನುಮಾನವನ್ನುಅನುವಾದ ಮಾಡಿ ಖಂಡಿಸದೆ, ಕೇವಲ, ತ್ರವಯವ ಅನುವಾದ ಮಾಡಿ ಖಂಡಿಸಿದ್ದಾರೆ. ಅಂದರೆ ಅಲ್ಲಿ, ಉಪನಯ ಮತ್ತು ನಿಗಮನ ವಾಕ್ಯಗಳ ಅನುವಾದ ಮಾಡಲಿಲ್ಲ. ಏಕೆಂದರೆ, ಈಗಾಗಲೆ ಮೇಲೆ ನಮೂದಿಸಿದಂತೆ, ಉಪನಯ ವಾಕ್ಯವನ್ನು, ಹೇತು ವಾಕ್ಯದಿಂದ ಹಾಗೂ ನಿಗಮನವನ್ನು ಪ್ರತಿಜ್ಞಾ ವಾಕ್ಯದಿಂದಲೆ

ತಿಳಿಯಬಹುದಾಗಿದೆ. ಅದರಂತೆ, ಹೇತು ವಾಕ್ಯ ಹಾಗೂ ಪ್ರತಿಜ್ಞಾ ಖಂಡಿಸಿದಾಗ, ಉಪನಯ, ನಿಗಮನಗಳಲ್ಲಿ ಖಂಡಿಸುವಂತಹದ್ದು ಏನೂ ವಿಶೇಷತೆ ಇರುವದಿಲ್ಲ.

### ೪.೨.೪ ಅನುಮಾನದ ಪ್ರಕಾರಗಳು

ಟೀಕಾಕೃತ್ಪಾದರು, ತಮ್ಮ ಪ್ರಮಾಣ ಲಕ್ಷಣ टीका ದಲ್ಲಿ, ಅನುಮಾನದ ಪ್ರಕಾರಗಳನ್ನು ಹೀಗೆ ಹೆಳುತ್ತಾರೆಃ द्विविधं हि अनुमानं स्वपक्षसाधनम्, परपक्षदूषणं च। ಅಂದರೆ ಅನುಮಾನಗಳು ಎರಡು ಪ್ರಕಾರದ್ದಾಗಿವೆಃ स्वपक्षसाधन ಹಾಗೂ परपक्षदूषण ಎಂದು.

**स्वपक्षसाधन अनुमानं;**

ಈ ಅನುಮಾನವು, सिद्धिः साध्यवत्तानिश्चयः। ಅಂದರೆ, ಸಿದ್ಧಿಯನ್ನು ಸಾಧಿಸುವ ನಿಶ್ಚಾಯಕ ಸಾಧನದಿಂದ ಕೂಡಿರುತ್ತದೆ. ಇನ್ನೊಂದುರೀತಿಯಿಂದ ಹೇಳುವದಾದರೆ ಇಲ್ಲಿ ಸಿದ್ಧಿಜನಕ ವಾಗಿರುತ್ತದೆ. ಉದಾಃ पर्वतो वन्हिमान् धूमवत्वात्।, ಇಲ್ಲಿ धूमः साधनम्।, ಅಂದರೆ धूम ಅಂದರೆ ಹೊಗೆ, ಅಗ್ನಿಯನ್ನು ಸಾಧಿಸುವ ಸಾಧಕ ವಾಗಿರುತ್ತದೆ.

**परपक्षदूषण अनुमानं:**

ಇದು ಎರಡು ಪ್ರಕಾರದ್ದಾಗಿರುತ್ತದೆ.

- ಮೊದಲನೆಯದು, ಆಪಾದನೆಯನ್ನು ಮಾಡಿ ಅದನ್ನು ಸಾಧಿಸುವದು. ಉದಾಃ न अयं निरग्निकः अनिर्धूमत्वात्। ಅಂದರೆ, ಇದು ನಿರ್ಗ್ನಿಕವಲ್ಲ ಏಕೆಂದರೆ, ನಿರ್ಧೂಮವಾಗಿರುವದಿಲ್ಲ. ಇಲ್ಲಿ न निरग्निकः ಇದು ಆಪಾದನೆಯಾಗಿದ್ದು ಅದನ್ನು ಸಾಧಿಸಲು, अनिर्धूमत्वात् ಎಂದು ಹೇಳಲಾಗಿದೆ.

- ಎರಡನೆಯದು, अनिष्ट प्रसंगरूपेण, तत्र दूषण अनुमाने तर्कस्य अंतर्भावः। ಅಂದರೆ, ಆಪಾದಕ ಹೇಳಿ, ಅನಿಷ್ಟ ಪ್ರಸಂಗ ಉದ್ಭಾವನೆಯಿಂದ, ತರ್ಕದ ಅಂತರ್ಭಾವ ಮಾಡಿ, ಆಪಾದನವನ್ನು ಹೇಳುವದು. ಈ ಪ್ರಕಾರದ ದೂಷಣ ಅನುಮನವು, ಆಪಾದಕ ಹಾಗೂ ಆಪಾದ್ಯವನ್ನೊಳಗೊಂಡಿರುತ್ತದೆ. ಅದರಂತೆ, ಈ ದೂಷಣ ಅನುಮಾನದ ವ್ಯಾಖ್ಯೆಯನ್ನು ಹೀಗೂ ಹೇಳಬಹುದುಃ "बाधक प्रमाण उपन्यासरूप युक्तिभिः खंडनम्।" इति. ಆದ್ದರಿಂದ, ಈತರಹದ, ಅನುಮಾನಕ್ಕೆ अपसिद्धान्त (ಪೂರ್ವಾಚಾರ್ಯರಿಂದ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು) ಮತ್ತು असिद्धि ದೋಷಗಳು ದೋಷವೆನಿಸುವದಿಲ್ಲ. ಉದಾಃ पर्वतो वन्हिमान् धूमवत्वात् ಎಂಬ ಅನುಮಾನದಲ್ಲಿ, धूम ಹಾಗೂ वन्हि ಗಳಲ್ಲಿಯ ವ್ಯಾಪ್ತಿ ಸಂಬಧದಿಂದ, पर्वतो वन्हिमान् ಎಂದು ಸಿದ್ದಮಾಡಲಾಗಿದೆ. ಯಾವನೊ, पर्वतः

धूमवत्वाऽपि, निरग्निकत्व अंगीकार्यः, ಅಂದರೆ, ಪರ್ವತವು ಧೂಮವುಳ್ಳದ್ದಾಗಿರಲಿ, ನಾವು ನಿರಗ್ನಿಕತ್ವವನ್ನು ಅಂಗೀಕರಿಸುತ್ತೆವೆ. ಇದಕ್ಕೆ ಉತ್ತರವಾಗಿ, ಇಲ್ಲಿ दूषण अनुमान ವನ್ನು ಹೀಗೆ ಪ್ರಯೋಗಿಸಬೇಕು: निरग्निकत्व अंगीकारे निर्धूमत्व अभ्युपगमः। ಅಂದರೆ, ತಾವು ನಿರ್ಗಿಕತ್ವವನ್ನು ಅಂಗೀಕರಿಸಿದರೆ, ನಿರ್ಧೂಮತ್ವವನ್ನು ಒಪ್ಪಬೇಕು. ಇಲ್ಲಿ निरग्निकत्व, आपादक ವಾಗಿದ್ದು, निर्धूमत्व, ಆಪಾದ್ಯ ವಾಗಿರುತ್ತದೆ. ಹಾಗೂ, ಧೂಮತ್ವವನ್ನು ಒಪ್ಪಿ, ಅಗ್ನಿತ್ವವನ್ನು ಒಪ್ಪದ ಪುರುಷನಿಗೆ ಇದು ಅನಿಷ್ಟ ಪ್ರಸಂಗವೂ ಆಗಿರುತ್ತದೆ.

ಶ್ರೀಮದಾಚಾರ್ಯರು, ಈ ಪ್ರಕರಣದಲ್ಲಿ, ಈ ಎರಡನೆ ಪ್ರಕಾರದ ದೂಷಣ ಅನುಮಾನದ ವನ್ನು ಪ್ರಯೋಗಿಸಿದ್ದಾರೆ.

ದೂಷಣ ಅನುಮಾನದ ದ ಬಗ್ಗೇ ಹೆಚ್ಚಿನ ವಿವರಣೆಯನ್ನು, ಪಡೆಯುವ ಇಚ್ಛೆವುಳ್ಳ ಓದುಗರು ಟೀಕಾಕೃತ್ಪಾದರ, "प्रमाण लक्षण टीका" ಗ್ರಂಥದಲ್ಲಿ, ಕಾಣಬಹುದು.

## *೪.೩ ದೂಷಣ ಅನುಮಾನ*

### टीका

### तत् कथम् इति, तत्र आह-

ವೇದಾದಿಶಾಸ್ತ್ರಗಳು, ಜೀವಬ್ರಹ್ಮ ಐಕ್ಯ ಪ್ರತಪಾದಿಸಿದಲ್ಲಿ, ಅವುಗಳಿಗೆ ಅನಾರಂಭಣಿಯತ್ವ ಹೇಗೆ ಉಂಟಾಗುತ್ತದೆ? ಅದಕ್ಕೆ ಶ್ರೀಮದಾಚಾರ್ಯರು ಈ ಕೆಳಗಿನ ದೂಷಣ ಅನುಮಾನದಿಂದ ಅನಾರಂಭಣಿಯತ್ವ ವನ್ನು ಪ್ರಸ್ಥಾಪಿಸುತ್ತಾರೆ.

### मायावाखण्डनम्

### विमतं अनारम्भणीयं, अन्यथाप्रतिपादकत्वात्। यदित्थं तत्तथा, यथा सम्प्रतिपन्नम्।

ಈ ಪರಪಕ್ಷದೂಷಣ ಅನುಮಾನದ ತ್ರಯವಯವಗಳು ಹೀಗಿರುತ್ತವೆ:

**प्रतिज्ञा:**

विमतम् अनारम्भणीयं।

विमतः ಎಂದರೆ ವಿವಾದಾಸ್ಪದ ವಿಷಯಾದಿಗಳಿಂದ ಕೂಡಿದ ವೇದಾದಿಶಾಸ್ತ್ರಗಳು, ಪರಪಕ್ಷದವರು ಹೇಳುವಂತೆ, ಜೀವ ಬ್ರಹ್ಮಐಕ್ಯವನ್ನು ಪ್ರತಿಪಾದಿಸಿದರೆ ಎಂದರ್ಥ. ವೇದಾದಿಶಾಸ್ತ್ರಗಳ ವಿವಾದಾಸ್ಪದವಾದ (ನಮ್ಮ ಹಾಗೂ ಪರಪಕ್ಷದವರ

ಭಿನ್ನಾಭಿಪ್ರಾಯಗಳಾದ) ವಿಷಯಾದಿಗಳನ್ನು ಈಗಾಗಲೆ ಹೇಳಲಾಗಿದೆ.

अनारम्भणीयं: ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಾಗಲಾರದು.

**हेतु ಅಥವಾ हेतुवाक्य:**

अन्यथाप्रतिपादकत्वात् ।

ಯಾವುದು ಪ್ರಾಮಾಣಿಕವಲ್ಲವೊ ಅದನ್ನು ಪ್ರತಿಪಾದಿಸುತ್ತದೆ ಎಂದರ್ಥ.

**उदाहरण:**
यत् इत्थं तत् तथा। यथा सम्प्रतिपन्नम्।
यत् इत्थं तत् तथा। ಈ ವಾಕ್ಯವು ಸಾಧ್ಯ ಮತ್ತು ಹೇತುವಿನಲ್ಲಿಯ ವ್ಯಾಪ್ತಿ ಸಂಬಂಧವನ್ನು ಪ್ರದರ್ಶಿಸುತ್ತದೆ. ಅಂದರೆ,

यत् इत्थं ಯಾವ ಶಾಸ್ತ್ರವು ಪ್ರಾಮಾಣಿಕವಲ್ಲದ ವಿಷಯವನ್ನು ಪ್ರತಿಪಾದಿಸುತ್ತದೊ, तत् तथा ಅದು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವೆನಿಸಲಾರದು ಎಂದರ್ಥ.

यथा सम्प्रतिपन्नम्। ಅಂದರೆ, ಎರಡೂ ಪಕ್ಷಗಳಿಗೆ ಸಮ್ಮತವಾದ ಬೌದ್ಧಾದಿ ಶಾಸ್ತ್ರಗಳು, ಅಥವಾ ಚಾರ್ವಾಕ್ ಶಾಸ್ತ್ರಗಳು ಎಂದರ್ಥ.

ಈ ಅನುಮಾನದಲ್ಲಿ, अन्यथाप्रतिपादकत्वात्, ಹಾಗೂ ವೇದಾದಿ ಶಾಸ್ತ್ರಗಳು ಅದ್ವೈತ್ವನ್ನು ಪ್ರತಿಪಾದಿಸುವದು, ಇವು आपादक ಗಳಾಗಿವೆ ಹಾಗೂ, अनारम्भणीयत्व् आपाद्य ಆಗಿರುತ್ತದೆ. ಇವುಗಳ ವಿಸ್ತಾರದಿಂದ ವಿವೆಚನೆ ಮುಂದಿನ ಪರಿಚ್ಛೇದದಲ್ಲಿ ಮಾಡಲಾಗಿದೆ.

ಇವರೆಗಿನ ವಿವೇಚನೆಯಿಂದ, ಶ್ರೀಮದಾಚಾರ್ಯರು ಪ್ರತಿಪಾದಿಸಿದ ಅನುಮಾನದ ಅರ್ಥ ಹೀಗಾಗುತ್ತದೆ;

**ವಿವಾದಸ್ಪದ ವೇದಾದಿಶಾಸ್ತ್ರಗಳು, ಜೀವಬ್ರಹ್ಮ ಐಕ್ಯವನ್ನು ಪ್ರತಿಪಾದಿಸಿದರೆ, ಅಯಥಾರ್ಥ ಪ್ರತಿಪಾದಕಗಳಾಗುವದರಿಂದ, ಅವುಗಳಿಗೆ ಅನಾರಂಭಣೀಯತ್ವ (ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವೆನಿಸಲ್ಪಡುವ) ಉಂಟಾಗುತ್ತದೆ, ಯಾವ ಶಾಸ್ತ್ರವು ಅಯಥಾರ್ಥವಾದ ವಿಷಯವನ್ನು ಪ್ರತಿಪಾದಿಸುತ್ತದೊ, ಅದು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವೆನಿಸಲಾರದು. ಉದಾಹರಣೆಗೆ ವಾದಿಪ್ರತಿವಾದಿಗಳು ಒಪ್ಪುಕೊಂಡಂಥ, ಬೌದ್ಧಾದಿ ಶಾಸ್ತ್ರಗಳು.**

## ४.३.१ ಅನುಮಾನ ದಲಕೃತ್ಯ

**विमतम् ಪದದ ವಿಮರ್ಶೆ:**

ಇಲ್ಲಿ ದೂಷಣ ಅನುಮಾನದಲ್ಲಿಯ ಮಿಮತಮ್ ಪದದ ದಲಕೃತ್ಯ ಮಾಡಲಾಗುವದು.

## टीका

**विमतं आरंभणीयत्व-अनारंभ्णीयत्वाभ्यां विमति विषयिभूत श्रुतितन्मीमांसाशास्त्रम्। "शास्त्रम् अनारंभणीयं" इत्येव उक्ते बौद्धादिशास्त्राणां अनारम्भणीयत्वस्य परेण अभ्युपगतत्वात् इष्ट आपादनमं एतत् स्यात्। तर्हि वेदादित्वेव उच्यताम्। मैवम्। विमतिग्रहणेन निराश्रयत्वादि दोषपरिहारस्यापि सूचितत्वात्।**

विमतम् ಎಂದರೆ आरंभणीयत्व (ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಾದದ್ದು) ಹಾಗೂ अनारंभणीयत्व (ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಲ್ಲದ್ದು) ವನ್ನು ಹೊಂದುವಂತಹ ವಿವಾದಾಸ್ಪದ ವಿಷಯಭೂತಗಳಿಂದ ಕೂಡಿದ ವೇದಾದಿಶಾಸ್ತ್ರಗಳು.

विमतम् ಹೊರತಾಗಿ शास्त्रम् ಎಂಬ ಪದವನ್ನು ಬಳಿಸಿ शास्त्रम् अनारंभणीयं ಎಂದು ಹೇಳಿದ್ದರೆ, बौद्धादि ಶಾಸ್ತ್ರಗಳನ್ನು ಈಗಾಗಲೆ ಪರಪಕ್ಷದವರು अनारंभणीय ಎಂದು ಒಪ್ಪಿಕೊಂಡಿದ್ದರಿಂದ, ಅವರಿಗೆ ಇಷ್ಟವಾದುದನ್ನೆ ಆಪಾದಿಸಿದಂತಾಗುತಿತ್ತು. ಆದ್ದರಿಂದ ಇಲ್ಲಿ विमतम् ಎಂಬ ಶಬ್ದ ಪ್ರಯೋಗ ಮಾಡಲಾಗಿದೆ.

ಹಾಗಾದರೆ विमतम् ಬದಲಾಗಿ वेदादिशास्त्रम् ಎಂದು ಹೇಳಬಹುದಲ್ಲ, वेदादिशास्त्रम् अनारंभणीयम् ಎಂದು ಪ್ರಯೋಗಿಸ ಬಹುದಲ್ಲ? ಎಂದರೆ. ಇಲ್ಲಿ विमतं ಪದ ಪ್ರಯೋಗದಿಂದ, निराश्रयत्व, सिद्धसाधनता, ಹಾಗೂ अप्रसिद्धविशेषण ದೋಷಗಳ ಪರಿಹಾರವನ್ನು ಸೂಚಿಸಲಾಗಿದೆ.

**ಟಿಪ್ಪಣಿಗಳವಿಶೇಷ ವಿವರಣೆ**

**॥ निराश्रयत्वादि दोषपरिहारस्यापि सूचितत्वात् इति ॥**

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥವ್ಯಾಖ್ಯೆಯಲ್ಲಿ ಹೀಗೆ ವಿವರಿಸುತ್ತಾರೆ:

निराश्रयत्व: ಯಾವ ಅನುಮಾನದ ಪಕ್ಷವು ಅಸತ್ ಅಥವಾ ಇಲ್ಲದಿರುವಾಗ. ಅದು. ಸಾಧ್ಯಕ್ಕೆ ಅಥವಾ ಹೇತುವಿಗೆ, ಆಶ್ರಯವೆನಿಸಲಾರದು.

ಪರಪಕ್ಷದವರು, निराश्रयत्व ಎಂಬ ದೋಷವನ್ನು ಹೇಳಬಹುದು ಎಕೆಂದರೆ ಅವರ ಮತದಂತೆ, ಚೈತನ್ಯ ವ್ಯತಿರಿಕ್ತ ವಾದುದೆಲ್ಲ ಅಜ್ಞಾನ ಕಲ್ಪಿತ. वेदादिशास्त्रम् ಎಂದು ಹೇಳಿದ್ದರೆ, ನಿರಾಶ್ರಯತ್ವವನ್ನು ಹೀಗಿ ಶಂಕಿಸಬಹುದಾಗಿತ್ತು:

"यदि वेदादिकमेव न स्यात् तर्हि आरम्भणीयत्व अनारम्भणीयत्वाभ्यां विमतिः किम् आश्रया स्यात्, किम् धर्मिणि स्यात्, कुत्र स्यात्" इति।

ಅಂದರೆ, ವೇದಾದಿ ಶಾಸ್ತ್ರಗಳೇ ಇಲ್ಲದಾಗ आरम्भणीयत्व ಹಾಗೂ अनारम्भणीयत्व ಗಳಲ್ಲಿಯ ವಿವಾದವು ಹೇಗೆ ಉಂಟಾಗಲು ಸಾಧ್ಯ?, ಯಾವ, ಧರ್ಮಿ ಅಥವಾ ಪಕ್ಷದಲ್ಲಿ ವಿವಾದ ಉಂಟಾಗುತ್ತದೆ?

सिद्धसाधनता ಅಂದರೆ, ಸಿದ್ಧವಾದ ವಿಷಯವನ್ನೇ ಪಕ್ಷದಲ್ಲಿ ಸಾಧಿಸುವದು. ಅದು ಅನುಮಾನದ ಒಂದು ದೋಷ. ಇದರ ಬಗ್ಗೆ ವಿವೇಚನೆಯನ್ನು, ಈ ಪ್ರಕರಣದಲ್ಲಿ ಇನ್ನೂ ಕೆಲೆವೆಡೆ ಮಾಡಲಾಗಿದೆ.

अप्रसिद्धविशेषण ಅಂದರೆ, ಪಕ್ಷದಲ್ಲಿ, ಅಪ್ರಸಿದ್ಧವಾದ ಧರ್ಮವನ್ನು ಸಾಧಿಸುವದು. ಉದಾಃ ಶಶವಿಶಾಣಾದಿಗಳನ್ನು ಸಾಧಿಸುವದು.

सिद्धसाधनता ಮತ್ತು अप्रसिद्धविशेषण ದೋಷಗಳನ್ನು ಹೀಗೆ ಶಂಕಿಸಬಹುದಾಗಿತ್ತು:

"यदि अनारम्भणीयत्वं सिध्दं, अप्रसिद्धं वा स्यात् तर्हि आरम्भणीयत्व अनारम्भणीयत्वाभ्यां कथं विमतिः स्यात्। एकस्या कोटेः सिद्धत्वात् अप्रसिद्धत्वात् च इत्यर्थः" इति।

ಅಂದರೆ, अनारम्भणीयत्व ಈಗಾಗಲೆ ಸಿದ್ಧವಾಗಿದ್ದರೆ ಅಥವಾ ಅದು ಅಪ್ರಸಿದ್ಧ ಧರ್ಮ ವಾಗಿದ್ದರೆ, आरम्भणीयत्व ಮತ್ತು अनारम्भणीयत्व ಗಳಲ್ಲಿ ವಿಮತಿ ಉಂಟಾಗುತ್ತಿರಲಿಲ್ಲವಲ್ಲವೆ.

**<u>यथा सम्प्रतिपन्नम् ದ ವಿಮರ್ಶೆ:</u>**

ಇಲ್ಲಿ ದೂಷಣ ಅನುಮಾನದಲ್ಲಿಯ ಯಥಾ ಸಂಪ್ರತಿಪನ್ನಮ್ ಎಂಬ ದೃಷ್ಟಾಂತವಾಕ್ಯದ ದಲಕೃತ್ಯ ಮಾಡಲಾಗುವದು

## टीका

**एवम् आपाद्य वैकल्यादि दोषपरिहार सूचनाय "यथा सम्प्रतिपन्नम्" इतुक्तम्। अन्यथा " यथा बौद्धादिशास्त्रम्" इति ब्रूयात्।**

ಅದೇರೀತಿಯಾಗಿ ಆಪಾದ್ಯ ವೈಕಲ್ಯಾದಿ ದೋಷಗಳ ಪರಿಹಾರನ್ನು ಸೂಚಿಸಲು "यथा सम्प्रतिपन्नम्" ಎಂದು ಅನ್ನಲಾಗಿದೆ. ಅನ್ಯಥಾ यथा बौद्धादिशास्त्रम् ಎಂದು ಹೇಳಬಹುದಾಗಿತ್ತು.

**<u>ಟಿಪ್ಪಣಿಗಳವಿಶೇಷ ವಿವರಣೆ</u>**

## ॥ आपाद्य वैकल्यादि इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥ ವಾಖ್ಯೆಯಲ್ಲಿ ಹೀಗೆ ವಿವೆರಿಸುತ್ತಾರೆ:

ಇಲ್ಲಿ, यथा सम्प्रतिपन्नम् ಬದಲಾಗಿ यथा बौद्धादिशास्त्रम् ಎಂದು ಹೇಳಬಹುದಾಗಿತ್ತಲ್ಲ? ಎಂದರೆ, ಇಲ್ಲಿ यथा सम्प्रतिपन्नम् ಹೇಳಿದ್ದರಿಂದ, ವಾದಿಪ್ರತಿವಾದಿಗಳಿಗೆ ತಟಸ್ಥರಾದವರು दृष्टान्त ದಲ್ಲಿ ಎತ್ತಬಹುದಾದ, आपाद्य वैकल्यादि ದೋಷಗಳ ಶಂಕೆಯ ಪರಿಹಾರವನ್ನು ಸೂಚಿಸಲಾಗಿದೆ. ಇಲ್ಲಿ आदि ಪದದಿಂದ, आश्रयहीनत्व ವನ್ನೂ ಗ್ರಹಿಸಲಾಗಿದೆ.

## ॥ सूचनाय इति ॥

ಇದನ್ನು ಶ್ರೀಶ್ರೀನಿವಾಸತೀರ್ಥರು ತಮ್ಮ ದುರ್ಗಮಾರ್ಥ ವಾಖ್ಯೆಯಲ್ಲಿ ಹೀಗೆ ವಿವೆರಿಸುತ್ತಾರೆ:

ಅಂದರೆ, यथा बौद्धादिशास्त्रम् ಎಂದು ಹೇಳಿದ್ದರೆ, ತಟಸ್ಥರಾದವರು,

- "वक्ष्यमाणरीत्या आपाद्यं अनारम्भणीयत्वं बौद्धशास्त्रे न स्यात तदा केन धर्मेण सम्प्रतिपत्तिः स्यात् ", ಅಂದರೆ ತಾವು ಹೇಳುವರೀತಿಯಂತೆ आपाद्य ವಾದ अनारम्भणीयत्व ವು बौद्धशास्त्रದಲ್ಲಿ ಇರುವದಿಲ್ಲ, ಹಾಗಿರುವಾಗ ಯಾವ ಧರ್ಮದಿಂದ ಸಂಪ್ರತಿಪತ್ತಿ ಎಂದರೆ ವಾದಿಪ್ರತಿವಾದಿಗಳಲ್ಲಿ ಪರಸ್ಪರ ಒಪ್ಪುಗೆ ಉಂಟಾಗುತ್ತದೆ? ಎಂದು ಹೇಳಿ, आपाद्य विकलत्व ವನ್ನು ಎತ್ತಿತೊರಿಸುತ್ತಿದ್ದರು.
- अथवा "वक्ष्यमाणरीत्या आपादकं अन्यथाप्रतिपादकत्वं बौद्धशास्त्रे न स्यात् तदा केन धर्मेण सम्प्रतिपत्तिः स्यात् " ಅಂದರೆ आपादक ವಾದ अन्यथाप्रतिपादकत्वं ವು बौद्धशास्त्रದಲ್ಲಿ ಇರುವದಿಲ್ಲ, ಹಾಗಿರುವಾಗ ಯಾವ ಧರ್ಮದಿಂದ ಸಂಪ್ರತಿಪತ್ತಿ ಎಂದರೆ ವಾದಿಪ್ರತಿವಾದಿಗಳಲ್ಲಿ ಪರಸ್ಪರ ಒಪ್ಪುಗೆ ಉಂಟಾಗುತ್ತದೆ? ಎಂದು ಹೇಳಿ, आपादक विकलत्व ವನ್ನು ಎತ್ತಿತೋರಿಸುತ್ತಿದ್ದರು.
- "यदि बौद्धादिशास्त्रमेव न स्यात् तर्हि आवयोः अनारम्भणीयत्वेन सम्प्रतिपत्तिःकुत्र स्यात्" इति। ಅಂದರೆ ಬೌದ್ಧಾದಿ ಶಾಸ್ತ್ರಗಳೇ ಇಲ್ಲವಾದಾಗ ವಾದಿಪ್ರತಿವಾದಿಗಳ ಮಧ್ಯೆ ಅನರಂಭಣೀಯತ್ವದಿಂದ ಪರಸ್ಪರ ಒಪ್ಪುಗೆ ಎಲ್ಲಿ ಉಂಟಾಗುತಿತ್ತು?

ಈ ದೋಷಗಳ ನಿರಾಕರಣೆಯನ್ನು "यथा सम्प्रतिपन्नम्" ದಿಂದ ಮಾಡಲಾಗಿದೆ.

ಇದರಿಂದ ಆಪಾದ್ಯವೈಕಲ್ಯಾದಿ ದೋಷಗಳ ಪರಿಹಾರ ಹೇಗೆ ಆಗುತ್ತದೆ ಎಂಬುದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

- यदि दृष्टान्त आपाद्येन आपादकेन वा विकलः स्यात तदा संप्रतिपन्नं न स्यात। अस्ति च इयम्। अतो न आपाद्य वैकल्यादि इति।

  ಅಂದರೆ, दृष्टान्त ವು आपाद्येन विकल, (ಆಪಾದ್ಯದಿಂದ ಇಲ್ಲದೆ ಇರೊಣ) ಅಥವಾ

आपादकेन विकल (ಆಪಾದಕದಿಂದ ಇಲ್ಲದೆ ಇರೊಣ) ವಾಗಿದ್ದಲ್ಲಿ, संप्रतिपत्ति (ವಾದಿಪ್ರತಿವಾದಿಗಳಲ್ಲಿ ಪರಸ್ಪರ ಒಪ್ಪುಗೆ) ಉಂಟಾಗುತ್ತಿರಲಿಲ್ಲ. ಆದರೆ ಇಲ್ಲಿ संप्रतिपत्ति ಇದೆ. ಆದ್ದರಿಂದ ಇಲ್ಲಿ ಆಪಾದ್ಯವೈಕಲ್ಯಾದಿ ದೋಷಗಳಿಗೆ ಆಸ್ಪದವಿಲ್ಲ. ಹಾಗೂ ವಾದಿಪ್ರತಿವಾದಿಗಳು ಪರಸ್ಪರ ಒಪ್ಪಿದ ವಿಷಯಾದ್ದರಿಂದ ತಟಸ್ಥರು, आपाद्य वैकल्यादि ದೋಷಗಳನ್ನು ಎತ್ತುವಂತಿಲ್ಲ.

- यदि दृष्टान्तमेव न स्यात् तर्हि आवयोः अनारम्भणीयत्वेन सम्प्रतिपत्तिः न स्यात् इति। अस्ति च इयम्। अतो न आश्रयहीनत्व इति। ದೃಷ್ಟಾಂತವೇ ಇಲ್ಲವೆಂದಾಗ ವಾದಿಪ್ರತಿವಾದಿಗಲ ಮಧ್ಯೆ ಅನಾರಂಬಣೀಯತ್ವದಿಂದ ಪರಸ್ಪರ ಒಪ್ಪುಗೆ ಇರಿತ್ತಿರಲಿಲ್ಲ. ಆದರೆ, ಅನರಂಭಣೀಯತ್ವದಲ್ಲಿ ಒಪ್ಪಿಗೆ ಇದೆ. ಆದ್ದರಿಂದ ಇಲ್ಲಿ ಆಶ್ರಯಹೀನತ್ವ ದೋಷ ಇರುವದಿಲ್ಲ. ಇದನ್ನು ಕೂಡ यथा सम्प्रतिपन्नम् ಎಂದು ಹೇಳಿದ್ದರಿಂದ ನಿರಾಕರಿಸಲಾಗಿದೆ.

**<u>अनारम्भणीयत्व ಪದದ ಅರ್ಥ ವಿಶ್ಲೇಷಣೆ:</u>**

ಇಲ್ಲಿ ದೂಷಣ ಅನುಮಾನದಲ್ಲಿಯ ಅನರಂಭಣೀಯತ್ವ ಎಂಬ ಪದದ ದಲಕೃತ್ಯ ಮಾಡಲಾಗುವದು.

## टीका

**ननु अनारम्भणीयत्वं नाम अप्रणेतव्यत्वं वा? अश्रोतव्यत्वादिकं वा? आद्ये तु इष्टापादानम्। वेदस्य अप्रणेतव्यत्वात्। न द्वितीयः। बौद्धादिशास्त्र श्रवणस्यापि दर्शनात्। मैवम्। प्रेक्षावत् उपादेयत्व अभावस्य विवक्षितत्वात्।**

अनारम्भणीयत्व ಅಂದರೆ ಏನರ್ಥ? अप्रणेतव्यत्व ಎಂದರೆ अपौरुषेयत्व ವಾದದ್ದು ಎಂದೊ? अश्रोतव्यत्व ಎಂದರೆ श्रवण ಕ್ಕೆ ಯೋಗ್ಯವಲ್ಲ ಎಂತಲೊ? ಮೊದಲನೆಯದು ಹೇಳುವದಾದರೆ, ನಮಗೂ ಒಪ್ಪಿಗೆಯಾದ ವಿಷಯವಾಗಿರುತ್ತದೆ, ನಾವು ವೇದಗಳು अपौरुषेय ವೆಂದು ಒಪ್ಪಿಕೊಂಡಿದ್ದೆವೆ. ಇನ್ನು ಎರಡನೆಯದು ಹೇಳುವದು ಸರಿಯಲ್ಲ, ಶ್ರವಣಕ್ಕೆ ಯೋಗ್ಯವಲ್ಲದ बौद्धादिशास्त्र ಗಳನ್ನು ಶ್ರವಣಮಾಡುವದನ್ನು ಲೋಕದಲ್ಲಿ ಕಾಣಬಹುದಾಗಿದೆ. ಅದರಂತೆ, दृष्टान्त ಕ್ಕೆ आपाद्य विकल ಎಂಬ ದೋಷವೂ ಬರುತ್ತದೆ.

ಅದು ಹಾಗಿರುವದಿಲ್ಲ. ಬೌದ್ಧಾದಿಗಳ ತತ್ವವಿಷಯದಲ್ಲಿ, ಜ್ಞಾನಿಗಳು ಸ್ವೀಕಾರಾರ್ಹದ್ದು ಏನು ಇರುವದಿಲ್ಲವೆಂದು ಉಭಯವಾದಿ ಸಿದ್ಧವಾಗಿರುವದರಿಂದ ಇಲ್ಲಿ ಜ್ಞಾನಿಗಳಿಗೆ

ಅನುಪಾದೆಯತ್ವಲಕ್ಷಣ अनारम्भणीयत्व, ವಿವಕ್ಷಿತವಾಗಿರುತ್ತದೆ.

**दूषण अनुमानद ಬಗ್ಗೆ ವಿಮರ್ಶಣೆ:**

ಇಲ್ಲಿ ದೂಷಣ ಅನುಮಾನದಲ್ಲಿಯ ಆಪಾದಕ ಆಪಾದ್ಯ ವಿಷಯಗಳ ಬಗ್ಗೆ ವಿಮರ್ಶಿಸಲಾಗುವದು.

## टीका

**स्यात् इति प्रतिज्ञावाक्यशेषः। तथा च "यदि वेदादिकं जीवब्रह्मणोः ऐक्यप्रतिपादकं स्यात् तदा अनारम्भनीयम् प्रसज्येत्" इत्युक्तं भवति।**

ಇಲ್ಲಿ विमतम् अनारम्भणीयम् ಎಂಬ ಪ್ರತಿಜ್ಞಾವಾಕ್ಯಕ್ಕೆ स्यात् ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅದರಂತೆ, ಒಂದು ವೇಳೆವೇದಾದಿಶಾಸ್ತ್ರಗಳು, ಜೀವಬ್ರಹ್ಮ ಐಕ್ಯ ಪ್ರತಿಪಾದಿಸಿದರೆ, ಅವುಗಳಿಗೆ ಅನಾರಂಭಣೀಯತ್ವಉಂಟಾಗುತ್ತದೆ. ಅಂದರೆ ಅವುಗಳು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಾಗಲಾರವು.

### ಟಿಪ್ಪಣಿಗಳವಿಶೇಷ ವಿವರಣೆ

**॥ स्यात् इति॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರ ಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

ಇಲ್ಲಿ विमतम् अनारम्भणीयम् ಎಂಬ प्रतिज्ञावाक्य ದಿಂದ ವೇದಾಂತ ಮೀಮಾಂಸಾ ಶಾಸ್ತ್ರವನ್ನು ಪಕ್ಷೀಕರಿಸಿ, अनारम्भाणीयत्व ಸಾಧಿಸಿದರೆ, अपसिद्धान्त, प्रमाण बाधक ದೋಷಗಳ ಶಂಕೆ ಬರಬಹುದು, ಅದಕ್ಕೆ विमतम् अनारम्भणीयम् ಎಂಬ ಪ್ರತಿಜ್ಞಾ ವಾಕ್ಯಕ್ಕೆ स्यात् ಎಂಬ ಪದವನ್ನು ಸೇರಿಸಿ ಅರ್ಥ ಹೇಳಬೇಕು.

**॥तथा च इति॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರ ಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

ಹೀಗೆ ಮಾಡಿದಲ್ಲಿ, ದೂಷಣ ಅನುಮಾನಹೇಳಿದಂತಾಗಿ, ಅನಾರಂಭಣೀಯತ್ವವು ಆಪಾದ್ಯ ಆಗುವದರಿಂದ ಮೇಲೆ ಹೇಳಿದ ಅಪಸಿದ್ಧಾಂತಾದಿ ದೋಷಗಳಿಗೆ ಎಡೆ ಇರುವದಿಲ್ಲಾ. ಆದರೂ, ಆಚಾರ್ಯರಿಂದ ಇಲ್ಲಿ ಆಪಾದಕ ಹೇಳಲ್ಪಡದಿದ್ದರಿಂದ ನ್ಯೂನತ್ವ ಎಂಬ ದೋಷವನ್ನು ಬರುತ್ತದಲ್ಲ ಎಂದರೆ, "न हि ब्रह्मात्मैक्यस्य याथार्थ्य तत्पक्षे" ಎಂಬ ತಮ್ಮ ಮುಂದಿನ ವಾಕ್ಯದಲ್ಲಿ ಜೀವಬ್ರಹ್ಮ ಐಕ್ಯವನ್ನು ಅಯಥಾರ್ಥ ಎಂದು ಹೇಳುವ

ಶ್ರೀಮದಾಚಾರ್ಯರಿಂದ, "यदि वेदादिकं जीवब्रह्मणो: ऐक्य प्रतिपादकम् स्यात्" इति, ಎಂಬ ಆಪಾದಕವು ಇಲ್ಲಿ ಸೂಚಿತವಾಗಿರುತ್ತದೆ. ಆದ್ದರಿಂದ ಇಲ್ಲಿ ನ್ಯೂನತ್ವ ಎಂಬ ದೋಷಕ್ಕೆ ಸ್ಥಾನವಿರುವದಿಲ್ಲ. ಹೀಗೆ ಶ್ರೀಮದಾಚಾರ್ಯರಿಂದ ಸೂಚಿಸಲ್ಪಟ್ಟ ಆಪಾದಕದ ಅಧ್ಯಾಹಾರಪೂರ್ವಕ ತರ್ಕ ಸ್ವರೂಪವನ್ನು ಇಲ್ಲಿ ಟೀಕಾಕೃತ್ಪಾದರು ವಿವರಿಸುತ್ತಿದ್ದಾರೆ,

ಇಲ್ಲಿ ಒಟ್ಟರಲ್ಲಿ ಮೇಲಿನ ಪ್ರತಿಜ್ಞಾವಾಕ್ಯವಾದ विमतम् अनारम्भणीयम् ವನ್ನು ಹೀಗೆ ಹೇಳಬೇಕೆಂದಂತಾಯಿತು:

यदि वेदादिकं जीवब्रह्मणो:ऐक्यप्रतिपादकम् स्यात् तदा अनारम्भणीयत्वं प्रसज्येत।

ಅಂದರೆ, ವೇದಾದಿಶಾಸ್ತ್ರಗಳು, ಜೀವಬ್ರಹ್ಮ ಐಕ್ಯ ಪ್ರತಿಪಾದಿಸಿದರೆ, ಅವುಗಳಿಗೆ अनारंभणीयत्व ಉಂಟಗುತ್ತದೆ. ಅಂದರೆ ಅವುಗಳು ಜ್ಞಾನಿಗಳ ಅಧ್ಯಯನಕ್ಕೆ ಯೋಗ್ಯವಾಗಲಾರವು.

## टीका

**आपादकमेव अन्यथाप्रतिपादकत्वात् इत्यनेन हेतुवाक्येन विव्रियत इति अदोष:। तच्च उत्तरत्र प्रदर्शयिष्याम:।**

ಈಗಾಗಲೆ, ಆಪಾದಕ ಅಧ್ಯಾಹೃತಪೂರ್ವಕ ಪ್ರತಿಜ್ಞಾವಾಕ್ಯ ಹೇಳಲಾಯಿತು. ಅದರಿಂದ "अन्यथाप्रतिपादकत्वात्" ಎಂಬುದನ್ನು ಮತ್ತೆ ಹೇಳುವದು वैयर्थ्य ವೆನಿಸುವದಿಲ್ಲವೆ? ಎಂದರೆ, ಇಲ್ಲಿ ಅಧ್ಯಾಹೃತ ಆಪಾದಕವನ್ನೇ "अन्यथाप्रतिपादकत्वात्" ಎಂಬ ಹೇತುವಾಕ್ಯದಿಂದ ವಿವರಿಸಿದ್ದರಿಂದ, ಅದು ಅನುಮಾನದ ಘಟಕದ ಅರ್ಥವಿವಾರಣೆಯಾಗುವದರಿಂದ, ಯಾವದೆ ದೋಷಕ್ಕೆ ಆಸ್ಪದ ಇರುವದಿಲ್ಲ. ಇದನ್ನೆ ಮುಂದೆ ಗ್ರಂಥದಲ್ಲಿ ಪ್ರದರ್ಶಿಸಲಾಗಿದೆ.

### ಟಿಪ್ಪಣಿಗಳವಿಶೇಷ ವಿವರಣೆ

**आपादक ವನ್ನೇ ವಿವರಿಸುವ "अन्यथाप्रतिपादकत्वात्" ಎಂಬ हेतु ವಾಕ್ಯದ ವಿಮರ್ಶಣೆ:**

**॥ आपादकमेव इति ॥**

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರ ಮಂಜರಿಯಲ್ಲಿ ಹೀಗೆ ವಿವರಿಸುತ್ತಾರೆ

ಈಗಾಗಲೆ ನೋಡಿದಂತೆ, ದೂಷಣ ಅನುಮಾನದ, ಪ್ರತಿಜ್ಞಾ ವಾಕ್ಯವು ಈ ಕೆಳಗಿನಂತೆ ಇರುತ್ತದೆ:

यदि वेदादिकं जीवब्रह्मणो: ऐक्यप्रतिपादकम् स्यात्, तदा अनारम्भणीयत्वं प्रसज्येत् इति।

ಇಲ್ಲಿ, ಪ್ರತಿಜ್ಞಾ ವಾಕ್ಯದಲ್ಲಿಯೆ ಆಪಾದಕ ಅಧ್ಯಾಹೃತ ಆಗಿರುವದರಿಂದ, "अन्यथाप्रतिपादकत्वात्" ಎಂಬ ಹೇತು ವಾಕ್ಯದಿಂದ ಮತ್ತೆ ಆಪಾದಕ ಹೇಳುವದರಿಂದ वैयर्थ्य ಎಂಬ ದೋಷ ಉಂಟಾಗುತ್ತದಲ್ಲವೆ?

ಇದಕ್ಕೆ ಸಮಾಧಾನ ಹೀಗಿರುತ್ತದೆ. ವೇದಾದಿಶಾಶಾಸ್ತ್ರಗಳು ಕೇವಲ ಐಕ್ಯಪ್ರತಿಪಾದಕಗಳಾದ ಮಾತ್ರಕ್ಕೆ, ಅವುಗಳಿಗೆ ಅನಾರಂಭಣೀಯತ್ವವನ್ನು ಆಪಾದಿಸಲು ಶಕ್ಯವಿಲ್ಲ,
ಭೇದಪ್ರತಿಪಾದಕತ್ವದಂತೆ ಆಗ ಕೂಡ ಅವುಗಳು ಆರಂಭಣೀಯ ಆಗಬಹುದು. ಆದ್ದರಿಂದ ಐಕ್ಯಪ್ರತಿಪಾದಕತ್ವ ಆಪಾದನೆ ಅಪ್ರಯೊಜಕವಾಗಬಹುದು. ಅದರ ಪರಿಹಾರಕ್ಕೆ ಹೇತು ವಾಕ್ಯದಿಂದ ಅದನ್ನು ಮತ್ತೆ ಸ್ಪಷ್ಟಪಡಿಸಿದ್ದಾರೆ.

ಅದು ಹೀಗಿರುತ್ತದೆ. ಕೇವಲ ಐಕ್ಯಪ್ರತಿಪಾದಕತ್ವದಿಂದ ವೇದಾದಿಶಾಸ್ತ್ರಗಳಿಗೆ ಅನಾರಂಭಣೀಯತ್ವವನ್ನು ಹೇಳಲು ಬರುವದಿಲ್ಲ, ಪರಂತು ವೇದಾದಶಾಸ್ತ್ರಗಳು ಐಕ್ಯಪ್ರತಿಪಾದಕತ್ವಗಳಾದರೆ, ಪರಪಕ್ಷದವರು (ತಾವು) ಪ್ರತಿಪಾದಿಸುವ ನ್ಯಾಯದಂತೆ, ಐಕ್ಯ ಅಸತ್ಯ ಎನಿಸುವದರಿಂದ, ಅದನ್ನು ಪ್ರತಿಪಾದಿಸುವ ಶಾಸ್ತ್ರಗಳು ಅನ್ಯಥಾಪ್ರತಿಪಾದಕಗಳಾಗಿ, ಅನಾರಂಭಣೀಯತ್ವವನ್ನು ಹೊಂದುತ್ತವೆ. ಅಂದರೆ ವೇದಾದಿಶಾಸ್ತ್ರಗಳು ಅನ್ಯಥಾಪ್ರತಿಪಾದಕಗಳಾಗುವುದರಿಂದ ಅನಾರಂಭಣೀಯಗಳಾಗುತ್ತವೆ ಎಂದರ್ಥ. ಆದ್ದರಿಂದ अन्यथाप्रतिपादकत्वात् ಎಂಬ ಹೇತುವಾಕ್ಯವು ಅಪ್ರಯೋಜಕ ವಾಗುವದಿಲ್ಲಾ. ಹಾಗೂ ಭೇದಪ್ರತಿಪಾದಕತ್ವದಂತೆ अभेदप्रतिपाद्कत्व, ಅಭೇದಪ್ರತಿಪಾದಕತ್ವ ಯಥಾರ್ಥ ಪ್ರತಿಪಾದಕವನ್ನು ಹೊಂದುವದಿಲ್ಲ.

ಆದ್ದರಿಂದ ವೇದಾದಿ ಶಾಸ್ತ್ರಗಳು ಬೌದ್ಧಾದಿ ಶಾಸ್ತ್ರಗಳಂತೆ ಅನ್ಯಥಾ ಪ್ರತಿಪಾದಕಗಳಾಗುವದರಿಂದ ಅನಾರಂಭಣೀಯತ್ವವನ್ನು ಹೊಂದುತ್ತವೆ.

ಆದ್ದರಿಂದ ಇಲ್ಲಿ ದೂಷಣ ಅನುಮಾನದ ದಲ್ಲಿಯೇ (प्रतिज्ञा ವಾಕ್ಯದಲ್ಲಿಯೇ) ಐಕ್ಯಪ್ರತಿಪಾದಕ ಲಕ್ಷಣ ಆಪಾದಕವನ್ನು ಆಪಾದಿಸಿ ಆಪಾದನದ ಸಮರ್ಥತ್ವರುಪ अन्यथाप्रतिपादकत्वात् ಎಂಬ ಹೇತು ವಾಕ್ಯದಿಂದ ವಿವರಿಸಲಾಗಿದೆ. ಆದ್ದರಿಂದ ಹೇತು ವಾಕ್ಯಕ್ಕೆ वैयर्थ्य ದೋಷ ಬರುವದಿಲ್ಲ.

## टीका

**अथवा वेदतन्मीमांसादिकम् ऐक्यपरतया व्याकुर्वन् मायावादि प्रणीतं शास्त्रमेव पक्षीकृत्य तस्य अनारम्भणीयत्वं, वेदादेः तत्परत्व निरासाय साध्यते।**

ಅಥವಾ, ಇಲ್ಲಿ ಇನ್ನೊಂದು ರೀತಿಯಿಂದಲೂ अन्यथाप्रतिपादकत्वात् ದ वैयर्थ्य ದೋಷವನ್ನು ನಿವಾರಿಸುತ್ತಾರೆ.

ಈಗಾಗಲೆ ನೊಡಿದಂತೆ, " वेदादिकं ऐक्यपरं चेत् अनारंभणीयम् स्यात्" ಎಂದು ಆಪಾದಕ ನ್ನೊಳಗೊಂಡ ಆಪಾದನೆಯಿಂದ ವೇದಾದಿಶಾಸ್ತ್ರಗಳಿಗೆ ಪರಾಭಿಪ್ರೆತ ವಿಷಯಾದಿಗಳ ನಿರಾಕರಣೆ ಸಿದ್ಧವಾಗುತ್ತದೆನೋ ನಿಜ, ಆದರೆ ಮಾಯಾವಾದಿ ಶಾಸ್ತ್ರಕ್ಕೆ ಅನಾರಂಭಣೀಯತ್ವ

ಸಾಧಿಸಿದಂತಾಗುವದಿಲ್ಲ.

ಆದ್ದರಿಂದ, ಶ್ರೀಮದಾಚಾರ್ಯರು, ವೇದಾದಿಶಾಸ್ತ್ರಗಳನ್ನು ಐಕ್ಯ ಪರವಾಗಿ ವ್ಯಾಖ್ಯಾನಿಸುವ, ಮಾಯಾವಾದಿ ಶಾಸ್ತ್ರವನ್ನೇ ಪಕ್ಷೀಕರಿಸಿ, ಅನಾರಂಭಣೀಯತ್ವವನ್ನು अन्यथाप्रतिपादकत्वात् ಎಂಬ ಹೇತುವಾಕ್ಯದಿಂದ ಸಾಧಿಸಿ, ವೇದಾದಿಗಳು ಐಕ್ಯಪರತ್ವವಾಗಿರುವದಿಲ್ಲ ಎಂದು ಸಾಧಿಸುತ್ತಾರೆ.

ಹೀಗೆ ಶ್ರೀಮದಾಚಾರ್ಯರು ತಾವು ಪ್ರತಿಪಾದಿಸಿದ ದೂಷಣ ಅನುಮಾನದಿಂದಲೇ, अन्यथाप्रतिपादकत्वात् ಎಂಬ ಹೇತು ವಾಕ್ಯದಿಂದ ವೇದಾದಿಶಾಸ್ತ್ರಗಳು ಐಕ್ಯಪರತ್ವವಾಗಿರುವದಿಲ್ಲ ಎಂದು ಸಾಧಿಸಲು ಉಪಯೋಗಿಸಿದ್ದಾರೆ, ಅದರಂತೆ ವೇದಾದಿಶಾಸ್ತ್ರಗಳು ಐಕ್ಯಪರತ್ವ ವಲ್ಲ ಎಂದು ಸಾಧಿಸಲು, ಇದು साधक अनुमानವೂ ಕೂಡ ಹೌದು.

### *೪.೪ ವೇದಾದಿಶಾಸ್ತ್ರಗಳಿಗೆ ಅಯತಾರ್ಥಪ್ರತಿಪಾದಕತ್ವದ ಮೂಲಕ ಅನ್ಯಥಾ ಪ್ರತಿಪಾದಕತ್ವ*

## टीका

**कथं अन्यथाप्रतिपादकत्वं विमतस्य शास्त्रस्य इत्यत आह-**

ವಿವಾದಾಸ್ಪದವಾದ ವೇದಾದಿಶಾಸ್ತ್ರಗಳು ಐಕ್ಯವನ್ನು ಪ್ರತಿಪಾದಿಸಿದರೆ, ಅವುಗಳು ಹೇಗೆ अन्यथाप्रतिपादक ಗಳಾಗುತ್ತವೆ? ವೇದಾದಿಗಳು ಐಕ್ಯಪರತ್ವವಾದ ಮಾತ್ರಕ್ಕೆ ಅವುಗಳಿಗೆ अन्यथाप्रतिपादकत्व ಸಿದ್ಧವಾಗುವದಿಲ್ಲ ಅಲ್ಲವೆ, ಆದ್ದರಿಂದ ಹೇತುವಿಗೆ स्वरूप असिद्धि ಎಂಬ ದೋಷ ಕೂಡಾ ಉಂಟಾಗುತ್ತದೆ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ,

**मायावाखण्डनम्**

**न हि ब्रह्मात्मैक्यस्य याथार्थ्यं तत्पक्षे।**

**ಜೀವಬ್ರಹ್ಮೈಕ್ಯವು ಮಾಯಾವಾದದಲ್ಲಿ ಯಥಾರ್ಥವಾಗಲು ಸಾಧ್ಯವಿಲ್ಲ**

## टीका

**अन्यथाप्रतिपादकत्वं हि अयथार्थ प्रतिपादकत्वं। ब्रह्मात्मनो: एकत्वं च**

**शास्त्रविषयतया परस्य अभिमतम्। न तत् परमार्थभूतम्, अतः अन्यथाप्रतिपादकत्वं सिद्धम।**

ಅನ್ಯಥಾಪ್ರತಿಪಾದಕ ಎಂದರೆ ಅಯಥಾರ್ಥವಾದುದನ್ನು ಪ್ರತಿಪಾದಿಸುವದು ಎಂದರ್ಥ. ಬ್ರಹ್ಮಜೀವರ ಐಕ್ಯವನ್ನು ಪ್ರತಿಪಾದಿಸುವದೇ ಶಾಸ್ತ್ರಗಳ ವಿಷಯವಾಗಿರುತ್ತದೆ ಎಂದು ಪರಮತದವರ ಅಭಿಮತವಾಗಿರುತ್ತದೆ. ಆದರೆ ಅದು ಪರಮಾರ್ಥಭೂತದ್ದು ಎಂದೆನಿಸಲು ಸಾಧ್ಯವಿಲ್ಲ. ಆದ್ದರಿಂದ ವೇದಾದಿಶಾಸ್ತ್ರಗಳು ಅನ್ಯಥಾಪ್ರತಿಪಾದಕಗಳಾದವು ಎಂದು ಸಿದ್ಧವಾಯಿತು.

**<u>ಟಿಪ್ಪಣಿಗಳವಿಶೇಷ ವಿವರಣೆ</u>**

**॥अन्यथाप्रतिपादकत्वं हि अयथार्थ प्रतिपादकत्वं इति॥**

ಇಲ್ಲಿ ಅನ್ಯಥಾಪ್ರತಿಪಾದಕತ್ವವನ್ನು, ಯಥಾರ್ಥವಾದುದಲ್ಲದ್ದನ್ನು ಪ್ರತಿಪಾದಿಸುವದು, ಅಥವಾ ಅಸತ್ಯವಾದುದನ್ನು, ಅಪ್ರಾಮಾಣಿಕ ವಾದುದನ್ನು ಪ್ರತಿಪಾದಿಸುವದು, ಎಂಬ ಹಿನ್ನೆಲೆಯಲ್ಲಿ ಅರ್ಥಮಾಡಲಾಗಿದೆ. ಅನ್ಯಥಾ ಪ್ರತಿಪಾದಕತ್ವವೇಂದರೆ ಅಯಥಾರ್ಥ ಪ್ರತಿಪಾದಕತ್ವ ಎಂದರೆ ಪಾರ್ಮಾರ್ಥಿಕ ಸತ್ಯವಲ್ಲದ್ದು ಅಂದರೆ ತ್ರೈಕಾಲಿಕಸತ್ಯವಲ್ಲದ್ದು ಎಂದರ್ಥ, ಅಸತ್ಯವಾದುದನ್ನು ಅಥವಾ ಅಪ್ರಾಮಾಣಿಕವಾದುದನ್ನು ಪ್ರತಿಪಾದಿಸುವದು ಎಂದರ್ಥವಾಯಿತು.

**॥ब्रह्मात्मनोः एकत्वं च शास्त्रविषयतया परस्य अभिमतम्॥**

ಜೀವಬ್ರಹ್ಮ ಐಕ್ಯವನ್ನು ಪ್ರತಿಪಾದಿಸುವದೇ ವೇದಾದಿಶಾಸ್ತ್ರಗಳ ವಿಷಯ ಅಥವಾ ತಾತ್ಪರ್ಯವೆಂದು ಪರಪಕ್ಷದವರ ಅಭಿಮತವಾಗಿರುತ್ತದೆ.

**॥ न तत् परमार्थभूतम् ॥**

ಆದರೆ ಅವರ ಮತದಂತೆ ಜೀವಬ್ರಹ್ಮ ಐಕ್ಯವು ಪರಮಾರ್ಥಭೂತವಾದದ್ದು ಎಂದಾಗಲು ಸಾಧ್ಯವಿಲ್ಲ. ಏಕೆಂದರೆ ಪರಪಕ್ಷದವರಂತೆ ಬ್ರಹ್ಮ ಒಂದೆ ಪಾರಮರ್ಥಿಕ ಸತ್ಯ ಉಳಿದದ್ದೆಲ್ಲ ಮಿಥ್ಯಾ. ಯಾವುದು ಪರಮಾರ್ಥವಲ್ಲವೊ ಅದು ಅಯಥಾರ್ಥ. ಜೀವಬ್ರಹ್ಮ ಐಕ್ಯವನ್ನು ಪ್ರತಿಪಾದಿಸುವದೇ ವೇದಾದಿಶಾಸ್ತ್ರಗಳ ಗುರಿ ಎಂದು ಪರಪಕ್ಷದವರ ಮತವಾಗಿರುತ್ತದೆ, ಅಂದರೆ ವೇದಾದಿಶಾಸ್ತ್ರಗಳು अयथार्थ ಪ್ರತಪಾದಿಸಿದಂತಾಯಿತು.

**॥अतः अन्यथाप्रतिपादकत्वं सिद्धम् ॥**

ಹೀಗೆ ವೇದಾದಿಶಾಸ್ತ್ರಗಳಿಗೆ, ಪರಪಕ್ಷದವರ ನ್ಯಾಯದಿಂದಲೇ ಅನ್ಯಥಾಪ್ರತಿಪಾದಕತ್ವವು ಸಿದ್ಧವಾಗುತ್ತದೆ.

ಇದನ್ನು ಮತ್ತಿಷ್ಟು ಸ್ಪಷ್ಟವಾಗಿ ಹೀಗೆ ಹೇಳಬಹುದು. ನಮ್ಮ ಮತದಂತೆ ಜೀವಬ್ರಹ್ಮ ಭೇದವು ಸತ್ಯವಾಗಿದೆ, ಪಾರಮಾರ್ಥಿಕ ಸತ್ಯವಾಗಿದೆ. ಆದರೆ ಪರಪಕ್ಷದಲ್ಲಿ ಜೀವಬ್ರಹ್ಮ ಐಕ್ಯವು ಪಾರಮಾರ್ಥಿಕ ಸತ್ಯವಾಗಲು ಸಾಧ್ಯವಿಲ್ಲ, ಏಕೆಂದರೆ ಅವರ ಪಕ್ಷದಲ್ಲಿ ಬ್ರಹ್ಮ ಒಂದೆ ಸತ್ಯ, ಉಳಿದಿದ್ದೆಲ್ಲ ಪಾರಮಾರ್ಥಿಕ ಸತ್ಯವಲ್ಲ. ಅವರ ಪಕ್ಷದ ಸಿದ್ಧಾಂತದಂತೆಯೆ, ವೇದಾದಿಶಾಸ್ತ್ರಗಳು, ಜೀವಬ್ರಹ್ಮ ಐಕ್ಯವನ್ನು ಪ್ರತಿಪಾದಿಸಿದರೆ, ಪಾರಮಾರ್ಥಿಕ ಸತ್ಯವಲ್ಲದ ವಿಷಯವನ್ನು ಪ್ರತಿಪಾದಿಸಿದಂತಾಗುವದರಿಂದ, ಅಯಥಾರ್ಥ ಪ್ರತಿಪಾದಕಗಳಾಗುತ್ತವೆ, ಹಾಗಾಗಿ ಅವುಗಳು ಅನ್ಯಥಾಪ್ರತಿಪಾದಕತ್ವಗಳಾಗುತ್ತವೆ. ಆದ್ದರಿಂದ ಅವುಗಳಿಗೆ ಅನಾರಂಭಣೀಯತ್ವ ಉಂಟಾಗುತ್ತದೆ.

### ४.४.१ "न हि ब्रह्मात्मैक्यस्य याथार्थं तत्पक्षे" ವಾಕ್ಯದ ವಿಮರ್ಷೆ

ಹಿಂದೆ ಹೇಳಿದ "तत् च उत्तरत्र प्रदर्शयिष्याम:" ಎಂಬುದನ್ನು ಟೀಕಾಕೃತ್ಪಾದರು ಇಲ್ಲಿ ವಿವರಿಸುತ್ತಿದ್ದಾರೆ.
"विमतं" ಅನುಮಾನದ ದಲಕೃತ್ಯ ಮಾಡುವಾಗಲೇ, अन्यथाप्रतिपादकत्वात् ಎಂಬ ಹೇತುವಾಕ್ಯದ वैयर्थ्य ಶಂಕೆಯನ್ನು ಪರಿಹರಿಸಬೇಕಿತ್ತಾದರೂ, " न हि ब्रह्मात्मैक्यस्य" ಮುಂತಾದ ಶ್ರೀಮದಾಚಾರ್ಯರ ವಾಕ್ಯಾರ್ಥವನ್ನು ಶ್ರೋತೃಗಳು ತಿಳಿಯದೆ, ಅದನ್ನು ಪ್ರತಿಪಾದಿಸಲು ಅಶಕ್ಯವಾಗಿತ್ತು, ಆದ್ದರಿಂದ ಅದರ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

## टीका

**ननु "यदि अद्वैतपरं शास्त्रं स्यात्, तदा अनारम्भणीयं प्रसज्येत" इति प्रसंगोक्तौ आपादकस्य उक्तत्वात्, पुनः हेतु अभिधानं व्यर्थं स्यात। न च एतदेव आपादक अभिधानं इति वाच्यम्। तथा सति अन्यथाप्रतिपाद्कत्वात् इत्यस्य ब्रह्मात्मैक्य प्रतिपादकत्वात् इत्यर्थः स्यात्। तथा च दृष्टान्त अनुपपत्तिः। "न हि ब्रह्मात्मैक्यस्य" इति उपपादन अनुपयोगः असंगत्वं च इति।**

ಒಂದು ವೇಳೆ ವೇದಾದಿಶಾಸ್ತ್ರಗಳು ಅದ್ವೈತಪರವಾದರೆ ಆಗ ಅವುಗಳಿಗೆ ಅನಾರಂಭಣೀಯತ್ವ ಉಂಟಾಗುತ್ತದೆ, ಎಂಬ ಪ್ರಸಂಗೋಕ್ತಿಯಲ್ಲಿಯೆ ಆಪಾದಕವನ್ನು ಹೇಳಿದ್ದರಿಂದ ಪುನಃ ಹೇತುವಿನ ಅಭಿಧಾನವು ವ್ಯರ್ಥವೆನಿಸುವದು. ಮತ್ತು ಇದನ್ನೆ ಅಂದರೆ

ಹೇತುವಿನ ಅಭಿಧಾನವೇ ಆಪಾದಕದ ಅಭಿಧಾನವೆಂದು ಹೇಳಕೂಡದು. ಹಾಗೇನಾದರು ಆದರೆ ಅನ್ಯಥಾಪ್ರತಿಪಾದಕತ್ವ ಎಂದರೆ ಬ್ರಹ್ಮತ್ಮೈಕ್ಯದ ಪ್ರತಿಪಾದನೆ ಎಂದರ್ಥವಾಗುತ್ತದೆ. ಅದರಂತೆ ದೃಷ್ಟಾಂತವು ಯುಕ್ತವೆನಿಸಲಾರದು. ಮತ್ತು "न हि ब्रह्मात्मैक्यसय" ಎಂಬ ಮುಂದಿನ ಶ್ರೀಮದಾಚಾರ್ಯರ ಪ್ರತಿಪಾದನೆಯು, ಉಪಯೋಗವಿಲ್ಲದ್ದು ಮತ್ತು ಅಸಂಗತವು ಆಗುತ್ತದೆ.

<u>**ಟಿಪ್ಪಣಿಗಳವಿಶೇಷ ವಿವರಣೆ**</u>

**॥ननु इति॥**

"यदि अद्वैतपरं शास्त्रं स्यात् तदा अनारंभणीयं प्रसज्येत" ಎಂಬ ಪ್ರಸಂಗೋಕ್ತಿಯಿಂದ ಆಪಾದಕ ಹೇಳಿದಂತಾಗುವದರಿಂದ, ಪುನಃ ಹೇತುವಿನಿಂದ अन्यथाप्रतिपादकत्वात् ಎಂಬ ಆಪಾದಕವನ್ನು ಹೇಳುವದು ವ್ಯರ್ಥವೆನಿಸುತ್ತದೆ.

**॥ न च इति॥**

अन्यथाप्रतिपादकत्वात् ವನ್ನೇ ಆಪಾದಕ, ಅಭಿಧಾನವೆಂದು ಹೇಳಲಾಗುವದಿಲ್ಲ.

**॥तथा सति इति॥**

ಹಾಗೇನಾದರು, "अन्यथाप्रतिपादकत्वात" ವನ್ನು ಆಪಾದಕ ಅಭಿಧಾನವೆಂದು ತೆಗೆದುಕೊಂಡರೆ ಆ ಪದದಿಂದ ಬಜೀವಬ್ರಹ್ಮ ಐಕ್ಯವನ್ನೇ ಪ್ರತಿಪಾದಿಸಿದಂತಾಗುತ್ತದೆ.

**॥तथा च इति॥**

ಹಾಗೆಯೇ यथा सम्प्रतिपन्नम् ಎಂದು ಹೇಳುವ दृष्टान्त (ಉದಾಹರಣೆ) ಕೂಡ ಸರಿ ಎನಿಸುವದಿಲ್ಲ. ಏಕೆಂದರೆ ಬೌದ್ಧಾದಿ ಶಾಸ್ತ್ರಗಳು ब्रह्मात्मैक्य ವನ್ನು ಪ್ರತಿಪಾದಿಸುವದಿಲ್ಲ ತಾನೆ.

**॥"न हि ब्रह्मात्मैक्यस्य" इति उपपादन अनुपयोग: असंगत्वं च इति॥**

ಹೀಗಾಗಿ "न हि ब्रह्मात्मैक्यस्य...." ಎಂಬ ವಾಕ್ಯವು ಉಪಯೋಗವಿಲ್ಲದ್ದು ಮತ್ತು ಅಸಂಗತವೆನಿಸುತ್ತದೆ.

ವೇದಾದಿಶಾಸ್ತ್ರಗಳು ಐಕ್ಯಪರತ್ವ ಮಾತ್ರದಿಂದ ಅವುಗಳಿಗೆ ಅನಾರಂಭಣೀಯತ್ವ ವನ್ನು ಆಪಾದಿಸುವದಾದರೆ, ಐಕ್ಯವು ಸತ್ಯವಾದರೂ ಅದಕ್ಕೆ ಏನೂ ಹಾನಿಯಾಗದಿರುವದರಿಂದ, ಐಕ್ಯ ಅಯಥಾರ್ಥ ಪ್ರತಿಪಾದನೆಗೆ ಆಪಾದಕ ಸಿದ್ಧಿಸುವದಲ್ಲಿ, ಉಪಯೋಗವಿಲ್ಲದ್ದಾಗಿರುತ್ತದೆ. ಐಕ್ಯಪರತ್ವ ಮತ್ತು ಅನಾರಂಭಣೀಯತ್ವ ಗಳಲ್ಲಿ प्रयोज्य–प्रयोजक ಭಾವದ ಅಭಾವತೆಯಿಂದ, ಅದರಿಂದ ಅನಾರಂಭಣೀಯತ್ವ ವನ್ನು ಆಪಾದಿಸುವದು, ಅಸಂಗತ, ಅಸಂಬದ್ಧ ಹಾಗೂ ಯುಕ್ತಿ ವಿರುದ್ಧವಾಗಿರುತ್ತದೆ.

ಇಲ್ಲಿ च ಶಬ್ದವು दृष्टन्त अनुपपत्ति ಎಂಬ ದೋಷವನ್ನು ಕೂಡ ಸಮುಚಯಿಸುತ್ತದೆ.

## टीका

**मैवम। अभिप्रायसद्भावात्। तथा हि- "यदि अद्वैतमेव शास्त्रार्थः स्यात् तदा शास्त्रं अनारंभणीयं स्यात्" इत्युक्ते निमित्तनैमित्तिक भावस्य अस्फुटत्वात्, कथं इति आशंकायां , अन्यथाप्रतिपाद्कत्वात् इति उक्तम्। "यदि शास्त्रार्थः अद्वैतं स्यात् तदा शास्त्रं अन्यथाप्रितिपादकं स्यात्। ततश्च अनारभणीयं प्रसज्येत।**

ಅದು ಹಾಗಿರುವದಿಲ್ಲ. ಇಲ್ಲಿ ಅಭಿಪ್ರಾಯ ಹೀಗಿರುತ್ತದೆ:

ವೇದಾದಿಶಾಸ್ತ್ರಗಳ, ಅದ್ವೈತವೇ ಶಾಸ್ತ್ರಾರ್ಥವಾದಲ್ಲಿ, ಅಥವಾ ಅವುಗಳು ಅದ್ವೈತವನ್ನೇ ಪ್ರತಿಪಾದಿಸಿದಲ್ಲಿ, ಆಗ ಅವುಗಳಿಗೆ ಅನಾರಂಭಣೀಯತ್ವಉಂಟಾಗುತ್ತದೆ ಎಂದು ಹೇಳಿ, ಅದು ಹೇಗೆ? ಎಂಬ ಭಾವ, ಅಸ್ಫುಟವಾಗಿರುವದರಿಂದ, ಅದು ಹೇಗೆ? ಎಂಬ ಶಂಕೆಯನ್ನು ನಿವಾರಿಸಲು "अन्यथाप्रतिपादकत्वात्" ಎಂಬ ಹೇತು ವಾಕ್ಯ ಇಡಲಾಗಿದೆ. ಒಂದು ವೇಳೆ ಶಾಸ್ತ್ರಾರ್ಥವು ಅದ್ವೈತಪರವಾದರೆ ಆಗ ಶಾಸ್ತ್ರವು ಅನ್ಯಥಾಪ್ರತಿಪಾದಕವಾಗುತ್ತದೆ. ಆದ್ದರಿಂದ ಅದಕ್ಕೆ ಅನಾರಂಭಣೀಯ ಉಂಟಾಗಬೇಕಾಗುತ್ತದೆ.

### ಟಿಪ್ಪಣಿಗಳವಿಶೇಷ ವಿವರಣೆ

ಇನ್ನಷ್ಟು ಸ್ಪಷ್ಟವಾಗಿ ವಿವರಿಸುವದಾದರೆ, "यदि अद्वैतपरं शास्त्रं स्यात् तदा अनारंभणीयं प्रसज्येत" ಪ್ರಸಂಗೊಕ್ತಿಯಲ್ಲಿ ಆಪಾದಕದ ಪ್ರಸ್ತಾವನೆ ಇದ್ದರೂ, ಅದರ प्रयोज्य प्रयोजक ಭಾವ ಸ್ಫುಟವಾಗಿರುವದಿಲ್ಲ. ಅದು ಹೀಗಿರುತ್ತದೆ:

अद्वैतस्य शास्त्रार्थत्वं निमित्तकं प्रयोजकं, अनारंभणीयत्वं नैमित्तिकम् प्रयोज्यम्। तत् भावस्य अस्फुटत्वात् इति। ಈ ಶಂಕೆಯನ್ನು "अन्यथाप्रतिपादकत्वात्" ಎಂಬ ಹೇತು ವಾಕ್ಯದಿಂದ ನಿವಾರಿಸಲಾಗಿದೆ.

ಇದೆಲ್ಲ ವಿವೇಚನೆಯಿಂದ ಶ್ರೀಮದಾಚಾರ್ಯರ "विमतं अनारम्भणीयं अन्यथाप्रतिपादकत्वात्।" ವಾಕ್ಯದ ತಾತ್ಪರ್ಯವು ಹೀಗಿರುತ್ತದೆ:

यदि शास्त्रार्थः अद्वैतं स्यात्, तदा शास्त्रम् अन्यथाप्रतिपादकं स्यात् । ततश्च अनारम्भणीयम् प्रसज्येत् इति।

ಅಂದರೆ, ವೇದಾದಿಶಾಸ್ತ್ರಗಳು अद्वैत ಪರವಾದಲ್ಲಿ, ಶಾಸ್ತ್ರಗಳು अन्यथाप्रतिपादक

ಗಳಾಗುವದರಿಂದ, ಅವುಗಳಿಗೆ अनारम्भणीयत्व ಉಂಟಾಗುತ್ತದೆ.

## टीका

**अद्वैतस्यैव शस्त्रार्थत्वे, शास्त्रस्य अयथार्थ प्रतिपादकत्वं कथं इत्यतो, न हि ब्रह्मात्मैक्यस्य इति अभिहितम्। तत्र उपपत्तिः "तत्पक्षे" इति।**

ಇನ್ನು ಅದ್ವೈತವೇ ಶಾಸ್ತ್ರಾರ್ಥವಾದರೆ, ಶಾಸ್ತ್ರವು ಅಯಥಾರ್ಥ ಪ್ರತಿಪಾದಕತ್ವ ಹೇಗೆ ಆಗುತ್ತದೆ?. ಅದನ್ನೆ ವಿವರಿಸಲು ಶ್ರೀಮದಾಚರ್ಯರ "न हि ब्रह्मात्मैक्यस्य याथार्थं तत्पक्षे" ಎಂಬ ವಾಕ್ಯ ಹೊರಟಿರುತ್ತದೆ. ಇದನ್ನು ಆ ವಾಕ್ಯದಲ್ಲಿಯ तत्पक्षे ಎಂಬ ಪದದಿಂದ ತಿಳಿಯಬಹುದಾಗಿದೆ. ಇಲ್ಲಿ तत्पक्षे ಎಂದರೆ ऐक्यपक्षे ಎಂದರ್ಥ.

## टीका

**ऐक्यमेव शास्त्रार्थश्चेत् ब्रह्मातिरिक्तं सर्वं अपरमार्थभूतं स्यात्। ऐक्यं च ब्रह्मव्यतिरिक्तत्वात् अपरमार्थभूतम्। तत्प्रतिपादकं च शास्त्रं कथं अन्यथाप्रतिपादकं न भवेत् इति।**

ಜೀವಬ್ರಹ್ಮ ಐಕ್ಯವೇ ಶಾಸ್ತ್ರಾರ್ಥವಾದರೆ ಬ್ರಹ್ಮಕ್ಕಿಂತ ಅತಿರಿಕ್ತವಾದುದೆಲ್ಲ ಅಪರಮಾರ್ಥವಾಗುತ್ತದೆ. ಮತ್ತು ಐಕ್ಯವು ಬ್ರಹ್ಮವ್ಯತಿರಿಕ್ತವಾಗುವದರಿಂದ ಅಪರಮಾರ್ಥಭೂತವಾಗುತ್ತದೆ. ಮತ್ತು ಅದನ್ನು ಪ್ರತಿಪಾದಿಸುವ ಶಾಸ್ತ್ರವು ಹೇಗೆ ಅನ್ಯಥಾಪ್ರತಿಪಾದಕವಾಗುವದಿಲ್ಲ?

### ಟಿಪ್ಪಣಿಗಳವಿಶೇಷ ವಿವರಣೆ

**॥ऐक्यमेव शास्त्रार्थश्चेत् इति॥**

ಜೀವಬ್ರಹ್ಮ ಐಕ್ಯವೇ ಶಾಸ್ತ್ರಾರ್ಥವಾದರೆ, ಬ್ರಹ್ಮಅತಿರಿಕ್ತವಾದುದ್ದೆಲ್ಲ ಅಪರ್ಮಾರ್ಥಭೂತ ಆಗುತ್ತದೆ. ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

- जीवब्रह्म ऐक्यस्य कर्तृत्व,भोक्तृत्व, प्रमातृत्वादि विरुद्धधर्म मिथ्यात्वं विना अनुपपत्तेः, प्रमातृत्वादि मिथ्यात्वस्य च प्रमेयादि मिथ्यात्वेन विना अनुपपत्तेः, ऐक्य निर्वाहार्थं ब्रह्मव्यतिरिक्तं सर्वं अपरमार्थभूतं वक्तव्यं इत्यर्थः।

ಅಂದರೆ ಜೀವಬ್ರಹ್ಮ ಐಕ್ಯವನ್ನು, कर्तृत्व,भोक्तृत्व,प्रमातृत्व ಮುಂತಾದ ಜೀವಬ್ರಹ್ಮ ರಲ್ಲಿಯ

ವಿರುದ್ಧಧರ್ಮಗಳನ್ನು ಮಿಥ್ಯಾ ಎಂದು ಒಪ್ಪದೆ, ಪ್ರತಿಪಾದಿಸಲು ಸಾಧ್ಯವಿಲ್ಲ. ಪ್ರಮಾತೃತ್ವಾದಿಗಳ ಮಿಥ್ಯಾತ್ವವನ್ನು , ಪ್ರಮೇಯಾದಿಗಳು ಮಿಥ್ಯಾ ಎಂತೆನ್ನದೆ ಪ್ರತಿಪಾದಿಸಲು ಸಾಧ್ಯವಿಲ್ಲ. ಆದ್ದರಿಂದ ಜೀವಬ್ರಹ್ಮ ಐಕ್ಯವನ್ನು, ನಿರ್ವಾಹಿಸಲು ಬ್ರಹ್ಮ ವ್ಯತಿರಿಕ್ತವಾದುದೆಲ್ಲವನ್ನು ಅಪರಮಾರ್ಥಭೂತವಾದದ್ದು ಎಂದು ಹೇಳಬೇಕು

• यद्वा, सर्वस्य परमार्थत्वे सर्वज्ञत्व–असर्वज्ञात्वादि विरुद्धधर्माणां अपि परमार्थत्व आपत्या ऐक्य अनुपपत्तेः, ऐक्य निर्वाहार्थं ब्रह्मव्यतिरिक्त सर्वं अपरमार्थभूतं वक्तव्यं इत्यर्थः।

ಅಥವಾ ಎಲ್ಲವು ಪರಮಾರ್ಥತ್ವವಾದರೆ, सर्वज्ञत्व–असर्वज्ञात्वादि ವಿರುದ್ಧಧರ್ಮಗಳಿಗೆಲ್ಲ ಪರಮಾರ್ಥತ್ವ ಉಂಟಾಗುವದರಿಂದ, ಅವುಗಳಲ್ಲಿ ಐಕ್ಯವನ್ನು ಹೇಳುವದು ಉಚಿತವೆನಿಸುವದಿಲ್ಲ. ಆದ್ದರಿಂದಲೂ, ಐಕ್ಯವನ್ನು ನಿರ್ವಾಹಿಸಲು ಬ್ರಹ್ಮ ವ್ಯತಿರಿಕ್ತವಾದುದೆಲ್ಲವನ್ನು ಅಪರಮಾರ್ಥಭೂತವಾದದ್ದು ಎಂದು ಹೇಳಬೇಕು, ಎಂದರ್ಥ.

• यद्वा, परेण ब्रह्मात्मैक्य शब्दोपलक्षितस्य सजातीय–विजातीय–स्वगत–नानात्वरहित्यस्य ऐक्यस्य शास्त्रार्थत्वेन अंगीकारात्, तस्य च ब्रह्मव्यतिरिक्त सर्वमिथ्यात्वं विना अनुपपत्तेः, तत् निर्वाहार्थं ब्रह्मव्यतिरिक्तं सर्वं अपर्मार्थभूतं वाच्यं इत्यर्थः।

ಅಥವಾ, ಪರಪಕ್ಷದವರು, ब्रह्मात्मैक्य ಶಬ್ದ ಉಪಲಕ್ಷಿತ, सजातीय–विजातीय-स्वगत–नानात्वरहित ವಾದ ಐಕ್ಯವು ಶಾಸ್ತ್ರಾರ್ಥವಾಗಿರುತ್ತದೆ ಎಂದು ಅಂಗೀಕರಿಸಿರುತ್ತಾರೆ. ಇದನ್ನು, ಬ್ರಹ್ಮವ್ಯತಿರಿಕ್ತವಾದದ್ದೆಲ್ಲ ಮಿಥ್ಯಾ ಎಂದು ಪರಿಗಣಿಸದೆ, ಪ್ರಸ್ಥಾಪಿಸಲು ಸಾಧ್ಯವಿಲ್ಲ. ಆದ್ದರಿಂದ ಜೀವಬ್ರಹ್ಮ ಐಕ್ಯವನ್ನು ವನ್ನು ನಿರ್ವಹಿಸಲು, ಬ್ರಹ್ಮವ್ಯತಿರಿಕ್ತವಾದುದೆಲ್ಲ ಅಪರಮಾರ್ಥಭೂತವಾದದ್ದು ಎಂದು ಹೇಳಬೇಕು ಎಂದರ್ಥ.

**॥ऐक्यं च इति॥**

ಮೆಲಿನ ವಿವೆಚನೆಯಂತೆ, ಜೀವಬ್ರಹ್ಮ ಐಕ್ಯವು ಬ್ರಹ್ಮವ್ಯತಿರಿಕ್ತವಾಗುವದರಿಂದ, ಅದು ಅಪರಮಾರ್ಥಭೂತವಾಗುತ್ತದೆ.

**॥तत्प्रतिपादकं च इति॥**

ವೇದಾದಿ ಶಾಸ್ತ್ರಗಳು ಜೀವಬ್ರಹ್ಮ ಐಕ್ಯವನ್ನು ಪ್ರತಿಪಾದಿಸಿದಲ್ಲಿ, ಅಪರಮಾರ್ಥಭೂತವಾದುದನ್ನು ಪ್ರತಿಪಾದಿಸಿದಂತಾಗುತ್ತದೆ. ಆದ್ದರಿಂದ ಅವುಗಳು ಅನ್ಯಥಾ ಪ್ರತಿಪಾದಕಗಳಲ್ಲ ಎಂದು ಹೇಗೆ ಹೇಳುವದು?

### ४.४.२ ಜೀವಬ್ರಹ್ಮ ಸ್ವರೂಪದ ಪರಾಮರ್ಶೆ

### ४.४.२.१ ಜೀವಬ್ರಹ್ಮ ಐಕ್ಯವು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಾಗಿ ಪಾರಮಾರ್ಥಿಕ

ಸತ್ಯವಾಗಿದೆ ಎಂಬ ಪಕ್ಷದ ವಿಮರ್ಶೆ:

## टीका

**अथ ब्रह्मात्मैक्यं तत् स्वरूप अतिरिक्तमपि परमार्थसत् अंगीक्रियते, तदा तेनैव द्वैतापत्तेः, अद्वैतपरं शास्त्रं इत्यस्य हानिः स्यात् इति आह-**

ಜೀವಬ್ರಹ್ಮ ಐಕ್ಯವು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಾದರೂ ಅದನ್ನು ಪಾರಮಾರ್ಥಿಕ ಸತ್ಯ ಎಂದು ಅಂಗೀಕರಿಸಿದರೆ ಆಗ ಅದರಿಂದಲೇ ದ್ವೈತ ಸಿದ್ಧವಾದಂತಾಗಿ, ಅದ್ವೈತಪರ ಶಾಸ್ತ್ರದ ಹಾನಿಯಾಗುತ್ತದೆ. ಅದಕ್ಕಾಗಿ ಶ್ರೀಮದಾಚಾರ್ಯರು ಹೀಗೆ ಹೇಳತ್ತಾರೆ:

### ಟಿಪ್ಪಣಿಗಳವಿಶೇಷ ವಿವರಣೆ

**॥अथ ब्रह्मात्मैक्यं इति॥**

ಜೀವಬ್ರಹ್ಮ ಐಕ್ಯವು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಾದರೂ ಪಾರಮಾರ್ಥಿಕವಾಗಿ ಸತ್ಯವಾಗಿದೆ ಎಂದು ಅಂಗೀಕರಿಸುತ್ತೆವೆ ಎಂದರೆ?

**॥तदा तेनैव द्वैतापत्तेः इति॥**

ಆಗ, ಹಾಗೆ ಹೇಳುವದರಿಂದಲೇ ಬ್ರಹ್ಮವ್ಯತಿರಿಕ್ತವಾದ ಎರಡನೆಯ ಸತ್ಯವಸ್ತು ಇದೆಯಂತಾಗಿ, ದ್ವೈತ ಮತ ಸಿದ್ಧವಾಗುವದರಿಂದ, ಅದ್ವೈತಪರ ಪರ ಶಾಸ್ತ್ರಾರ್ಥದ ಹಾನಿಯಾಗುತ್ತದೆ. ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

- यदि ब्रह्मात्मैक्यं स्वरूपातिरिक्तमपि परमार्थसत् स्यात्, अत एव दृष्यत्व–जडत्व–परिच्छिन्नत्वादिकं परमार्थसत् स्यात्, तेनैव द्वारेण समानन्यायतया दृष्यत्वादिमान् दुःखादिविरुद्धधर्मोऽपि सन् स्यात्, इति जीवब्रहमणोः द्वैतापत्तेः, तत् अद्वैतपरं शास्त्रं इत्यस्य हानिः स्यात् इत्यर्थः।

ಅಂದರೆ, ಜೀವಬ್ರಹ್ಮ ಐಕ್ಯವು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಾದರೂ ಪಾರಮಾರ್ಥಿಕ ಸತ್ಯವಾದಲ್ಲಿ, ದೃಶ್ಯತ್ವ ಎಂದರೆ ಇಂದ್ರಿಯ ಅನುಭವಗೋಚರವಾದದ್ದು, ಜಡತ್ವ ಎಂದರೆ ಜಡವಾದದ್ದು, ಪರಿಚ್ಛಿನ್ನತ್ವ ಅಂದರೆ ಅವಧಿಯನ್ನು ಹೊಂದಿದ್ದು ಪರಮಾರ್ಥಿಕ ಸತ್ಯವಾಗಿ, ಅದರಿಂದಲೇ ಸಮಾನನ್ಯಾಯವನ್ನನುಸರಿಸಿ ದೃಶ್ಯತ್ವ ಮುಂತಾದವುಗಳಂತೆ, ದುಃಖಾದಿ ವಿರುದ್ಧಧರ್ಮಗಳೂ ಸತ್ಯವಾಗುವದರಿಂದ, ಜೀವಬ್ರಹ್ಮರಲ್ಲಿ ದ್ವೈತ ಉಂಟಾದಂತಾಗಿ, ಅದ್ವೈತ ಶಾಸ್ತ್ರದ ಹಾನಿಯಾಗುತ್ತದೆ ಎಂಬ ಭಾವವಿರುತ್ತದೆ.

• अथवा यदि ब्रह्मात्मैक्य शब्दोपलक्षितं सजातीय–विजातीय–स्वगत नानात्वराहित्यं ब्रह्मस्वरूप अतिरिक्तमपि परमार्थसत् स्यात्, तदा तेनैव द्वितीयेन सद्वितीयत्व आपत्तेः त्रिविधनानात्वराहित्यपरं शास्त्रं इत्यस्य हानिः स्यात् इत्यर्थः।

ಅಥವಾ ಬ್ರಹ್ಮಾತ್ಮೈಕ್ಯ ಶಬ್ದ ಉಪಲಕ್ಷಿತ, ಸಜಾತೀಯ ವಿಜಾತೀಯ ಸ್ವಗತ ನಾನಾತ್ವ ರಹಿತ ದಿಂದ ಕೂಡಿದ ಜೀವಬ್ರಹ್ಮ ಐಕ್ಯವು, ಬ್ರಹ್ಮಸ್ವರೂಪ ಕ್ಕಿಂತ ಅತಿರಿಕ್ತವಿದ್ದರೂ ಪಾರಮಾರ್ಥಿಕ ಸತ್ಯವಾದರೆ, ಆಗ ಅದರಿಂದಲೇ ಎರಡನೆಯ ವಸ್ತು ಸತ್ಯವಾಗುವದರಿಂದ ತ್ರಿವಿಧನಾನಾತ್ವ ರಹಿತ ಪರ ಶಾಸ್ತ್ರದ ಹಾನಿ ಯಾಗುತ್ತದೆ ಎಂಬ ಭಾವ ವಿರುತ್ತದೆ.

## मायावाखण्डनम्
## अद्वैत हानेः स्वरूपातिरेके।

**ಜೀವಬ್ರಹ್ಮಐಕ್ಯ ಯಾಥಾರ್ಥ ವಾಗಿದ್ದು ಆತ್ಮಸ್ವರೂಪಕ್ಕಿಂತ ಬೇರೆ ಎಂದು ಅಂಗೀಕರಿಸಿದಲ್ಲಿ, ಅದ್ವೈತದ ಹಾನಿಯಾಗುತ್ತದೆ.**

## टीका

**ब्रह्मात्मैक्यस्य इति वर्तते। याथार्थ्ये सति इति शेषः।**

ಅಂದರೆ, ಜೀವಬ್ರಹ್ಮ ಐಕ್ಯ ಬ್ರಹ್ಮ ಸ್ವರೂಪಕ್ಕಿಂತ ಬೇರೆಯಾಗಿ ಇದ್ದರೆ. ಇಲ್ಲಿ ಶ್ರೀಮದಾಚಾರ್ಯರ ಮೂಲವಾಕ್ಯಕ್ಕೆ याथार्थे सति ಎಂಬ ಪದಗಳನ್ನು ಸೇರಿಸಿ ಅರ್ಥಮಾಡಬೇಕು.

### ಟಿಪ್ಪಣಿಗಳವಿಶೇಷ ವಿವರಣೆ

**॥ याथार्थ्ये सति इति शेषः इति ॥**

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಇಲ್ಲಿ ಕೇವಲ ಸ್ವರೂಪಕ್ಕಿಂತ ಅತಿರೇಕ ಮಾತ್ರದಿಂದ ದಿಂದ,ಅದ್ವೈತ ಹಾನಿಯಾಗುತ್ತದೆಎಂದು ಆಪಾದಿಸಲು ಶಕ್ಯವಾಗುವದಿಲ್ಲ. ಸ್ವರೂಪಕ್ಕಿಂತ ಅತಿರೇಕವಾಗಿ ಮಿಥ್ಯಾ ಇದ್ದಲ್ಲಿ ಅದ್ವೈತ ಹಾನಿಯ ಅಭಾವತೆ ಇರುತ್ತದೆ. ಆದ್ದರಿಂದ "याथार्थ्ये सति" ಎಂಬ ಪದಗಳನ್ನು ಜೋಡಿಸಿ ಅರ್ಥ ಮಾಡಬೇಕು. ಅಂದರೆ ಸ್ವರೂಪಕ್ಕಿಂತ ಅತಿರೇಕವಾಗಿ ಅದು ಯಾಥಾರ್ಥ ವಾಗಿರಬೇಕು ಎಂದರ್ಥ.

ಜೀವಬ್ರಹ್ಮ ಐಕ್ಯ ಅಥವಾ ಅದ್ವೈತವು ಬ್ರಹ್ಮ ಸ್ವರೂಪಕ್ಕಿಂತ ವ್ಯತಿರಿಕ್ತವಿದ್ದು ಯಾಥಾರ್ಥವಾಗಿದ್ದರೂ ಅದ್ವೈತದ ಹಾನಿಯಾಗುವದಿಲ್ಲ. (अभावानां प्रामाणिकत्वेऽपि सत्

अद्वैत अव्याकोपात्।) ಅದು ದ್ವೈತದ ಅಭಾವರೂಪವಾಗಿರುತ್ತದೆ, ಎಂದು ನಮ್ಮ ಅಭಿಪ್ರಾಯ. ಹಾಗೆ ತಾವು ಹೇಳುವದಾದರೆ, ಅನ್ಯೋನ್ಯ ಅಭಾವರೂಪ ಭೇದವನ್ನು ಕೂಡ ಸತ್ಯವೆಂದು ಅಂಗೀಕರಿಸಬೇಕಾಗುತ್ತದೆ. ಮತ್ತು "एकमेव अद्वितीयम्" ಎಂಬಲ್ಲಿ ದ್ವಿತೀಯಮಾತ್ರನಿಷೆಧ ಹೇಳುವದು ಸರಿ ಎನಿಸುವದಿಲ್ಲ. ಅಲ್ಲಿ ಭಾವರೂಪ ದ್ವಿತೀಯ ನಿಷೇಧಪರತ್ವ ಹೇಳುವದಾದರೆ ಅಭಾವರೂಪ ದ್ವಿತೀಯ ನಿಷೇಧಪರತ್ವಏಕೆ ಹೇಳಬಾರದು?

ಮತ್ತು ಸತ್ಯವಾದ ಅಭಾವ, ಬ್ರಹ್ಮವ್ಯತಿರಿಕ್ತ ಆಗುವದರಿಂದ ಅಲ್ಲಿ दृश्यत्वादि ಉಂಟಾಗುವದರಿಂದ (ಬ್ರಹ್ಮ ವ್ಯತಿರಿಕ್ತವಾದುದೆಲ್ಲ , दृश्यत्व ಎಂದರೆ ಇಂದ್ರಿಯ ಅನುಭವಗೋಚರವಾದದ್ದು ಎಂದು ಪರಪಕ್ಷದ್ವರ ಮತವಾಗಿರುತ್ತದೆ) ಮಿಥ್ಯಾತ್ವಸಾಧಕ ದೃಶ್ಯತ್ವಾದಿ ಹೇತುಗಳಿಗೆ ಅಲ್ಲಿ ವ್ಯಭಿಚಾರ ಎಂಬ ದೋಷ ಉಂಟಾಗುತ್ತದೆ. ಆದ್ದರಿಂದ, ತಮ್ಮ ಅಭಿಪ್ರಾಯದಂತೆ, ಅದ್ವೈತದ ಹಾನಿಯಾಗುವದಿಲ್ಲ ಎಂಬುದನ್ನು ತಳ್ಳಿಹಾಕಿದಂತಾಯಿತು.

**೪.೪.೨.೨ ಅದ್ವೈತವು ಪಾರಮಾರ್ಥಿಕ ಸತ್ಯವಾಗಿ ಬ್ರಹ್ಮ ಸ್ವರೂಪಕ್ಕಿಂತ ಅತಿರಿಕ್ತವಲ್ಲ ಎಂಬ ಪಕ್ಷದ ವಿಮರ್ಶೆ:**

## टीका

**स्यादेतत्, ऐक्यं परमार्थसत् एव। किं तु ब्रह्मस्वरूप अनतिरिक्तमेव। यथा आह- "तत् च अद्वैतम्, 'ब्रह्मैव इदं सर्वम्' इति श्रुत्यर्थेन सहैक्यमापन्नं हि ब्रह्मैव स्यात्" इति। तथा च कथं तत् प्रतिपादकं शास्त्रं अयथार्थ प्रतिपादकं स्यात् इत्यत आह-**

ಅದ್ವೈತವು ಪಾರ್ಮಾರ್ಥಿಕ ಸತ್ಯವಾಗಿ, ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಿದ್ದಲ್ಲಿ, अद्वैतद ಹಾನಿಯಾಗುತ್ತದೆ ನಿಜ, ಆದರೆ ಅದು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವಲ್ಲ,"ब्रह्मैव इदं सर्वम्", ಈ ಶ್ರುತ್ಯರ್ಥದಿಂದ, ಬ್ರಹ್ಮಸ್ವರೂಪ ಸಹ ಐಕ್ಯವನ್ನು ಹೊಂದುವದು, ಬ್ರಹ್ಮವೇ ಆಗುತ್ತದೆ ಎಂದು ತಿಳಿದುಬರುತ್ತದೆ. ಹಾಗಿರುವಾಗ ಅದ್ವೈತವನ್ನು ಪ್ರತಿಪಾದಿಸುವ ಶಾಸ್ತ್ರವು ಅಯಥಾರ್ಥ ಪ್ರತಿಪಾದಕ ಹೇಗೆ ಆಗುತ್ತದೆ? ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ

**ಟಿಪ್ಪಣಿಗಳವಿಶೇಷ ವಿವರಣೆ**

## ॥ यथा आह इति ॥

ಇದನ್ನು ಶ್ರೀವ್ಯಾಸತೀರ್ಥರು ತಮ್ಮ ಮಂದಾರ ಮಂಜಿರಿಯಲ್ಲಿ ಹೀಗೆ ವಿವರಿಸುತ್ತಾರೆ

ಇನ್ನು "ब्रह्मैव इदं सर्वं" ಶೃತ್ಯರ್ಥಭೂತದಲ್ಲಿಯ ಸರ್ವಂ ಎಂದರೆ ಎಲ್ಲವೂ ಬ್ರಹ್ಮಮಾತ್ರ ಲಕ್ಷಣವುಳ್ಳದ್ದು ಎಂದು ತಿಳಿದುಬರುತ್ತದೆ. ಅದರಂತೆ ಯಾವದು ಅದ್ವೈತವು ಅದು ಬ್ರಹ್ಮವೇ ಎಂದು ಹೇಳಬೇಕು. ಅದ್ವೈತವು ಬ್ರಹ್ಮ ಅತಿರಿಕ್ತ ಎಂದು ಹೇಳಿದರೆ, ಎಲ್ಲವೂ ಬ್ರಹ್ಮಮಾತ್ರ ಲಕ್ಷಣವುಳ್ಳದ್ದು ಎಂದು ಹೇಳುವದು ಸರಿ ಎನಿಸುವದಿಲ್ಲ.

ಅಥವಾ, तत् च अद्वैतं ब्रह्मैव स्यात् ಅಂದರೆ ಅದ್ವೈತವು ಬ್ರಹ್ಮವೇ ಆಗಿರುತ್ತದೆ ಎಂದು ಹೇಳಬೇಕು. ಏಕೆಂದರೆ, ನಾವು (ಪರಪಕ್ಷದವರು) ಹೇಳಿದ ಪ್ರಮೇಯವು, "ब्रह्मैव इदं सर्वं" ಶೃತ್ಯರ್ಥದ ಸಹ ಅನುಗುಣವಾಗಿರುತ್ತದೆ. ನಾವು ಬ್ರಹ್ಮಾತ್ಮೈಕ್ಯವವನ್ನು ಬ್ರಹ್ಮವೇ ಎಂದು ಹೇಳುತ್ತೆವೆ, ಶ್ರುತಿಯು ಸರ್ವಂ ಎಂದರೆ ಎಲ್ಲವೂ ಬ್ರಹ್ಮಮಯ ಎಂದು ಪ್ರತಿಪಾದಿಸುತ್ತದೆ. ಈ ಸರ್ವಂ ದಲ್ಲಿ ಬ್ರಹ್ಮಾತ್ಮೈಕ್ಯವು ಬರುತ್ತದೆ. ಹೀಗಾಗಿ ಬ್ರಹ್ಮಾತ್ಮೈಕ್ಯವು ಕೂಡ ಬ್ರಹ್ಮವೇ ಆಯಿತು. ಹೀಗೆ ನಾವು ಹೇಳುವ ಪ್ರಮೆಯವು ಶ್ರುತಿ ಹೇಳುವ ಪ್ರಮೇಯವು ಒಂದೇ ಆಯಿತು ಹಾಗೂ ಶೃತಿ ಪ್ರತಿಪಾದಿಸುವ ಪ್ರಮೇಯಕ್ಕೆ ಅನುಕೂಲವಾಗಿ ಕೂಡ ಇರುತ್ತದೆ.

ಇಲ್ಲಿ ಶ್ರೀಸತ್ಯನಾಥರು ಒಂದು ಸೂಕ್ಷ್ಮವಾದ ವಿಚಾರವನ್ನ ಶ್ರೊತ್ರುಗಳ ಗಮನಕ್ಕೆ ತರುತ್ತಾರೆ. ಅದು ಹೀಗಿರುತ್ತದೆ:

ಇಲ್ಲಿ ""ब्रह्मैव इदं सर्वं" ಎಂಬ ಶೃತಿವಾಕ್ಯವು ब्रह्म–अद्वैत ಬೊಧಕವಾಗಿರುತ್ತದೆ. ಶೃತಿವಾಕ್ಯದಲ್ಲಿಯ ಸರ್ವ ಶಬ್ದದಿಂದ ಯಾವದೆಲ್ಲವು ಗೃಹಿತವಾಗಿದೆಯೋ ಅದೆಲ್ಲ ಬ್ರಹೈಕ್ಯ ಎಂದು ಶೃತ್ಯರ್ಥವಾಗಿರುತ್ತದೆ. ಘಟಾದಿ ಗಳು ಸರ್ವ ಶಬ್ದದ ಗೃಹೀತಾದಿಗಳಲ್ಲಿ ಸಮಾವೇಶವಾಗಿರುವದಿಲ್ಲ, ಅದರಂತೆ ಅವುಗಳು, ಜ್ಞಾನಾನಂದಾದಿಗಳಂತೆ ಬ್ರಹೈಕ್ಯವಾಗುವದಿಲ್ಲ." ಎಂದು ಪರಪಕ್ಷದವರು ತಮ್ಮವಾದವನ್ನ ಪ್ರತಿಪಾದಿಸುತ್ತಾರೆ. ಇದರಿಂದಲೇ, ಬ್ರಹ್ಮಾತ್ಮೈಕ್ಯಪರವಾಗಿ "ब्रह्मैव इदं सर्वं" ಶ್ರುತಿಯನ್ನು ಉದಾಹರಿಸುವದು ಅಯುಕ್ತವಾಗಿರುತ್ತದೆ. ಅನ್ಯಥಾ ಘಟಾದಿ ಗಳಿಗೂ ಕೂಡ ಬ್ರಹ್ಮಾತ್ಮೈಕ್ಯ ಹೇಳಬೇಕಾಗುವದು. ಇದನ್ನು ಶ್ರೊತ್ರುಗಳು ತಿಳಿಯತಕ್ಕದ್ದು ಎಂಬ ಭಾವ.

## मायावाखण्डनम्
## अनतिरेके स्वप्रकाशत्वात् आत्मनः सिद्धसाधनता।

ಜೀವಬ್ರಹ್ಮಾಐಕ್ಯವು ಆತ್ಮಸ್ವರೂಪವೇ ಆದರೆ, ಆತ್ಮನು ಸ್ವಪ್ರಕಾಶನಾದುದರಿಂದ, ಐಕ್ಯವು ಅನುಭವಸಿದ್ಧವಾಗಬೇಕು. ಅದರಂತೆ, ಶಾಸ್ತ್ರವು ತಿಳಿದಿದ್ದನ್ನೇ ಬೊಧಿಸುವದರಿಂದ, ಶಾಸ್ತ್ರಕ್ಕೆ

ಸಿದ್ಧಸಾಧನತಾ ದೋಷ ಬರುತ್ತದೆ.

## टीका

**शास्त्रस्य इति शेषः। यदि अद्वैतं ब्रह्मस्वरूप अनतिरिक्तं स्यात्, तदा शास्त्रस्य सिद्धार्थबोधकत्वं प्रसज्येत। बोध्यस्य आत्मनः ब्रह्मस्वरूपत्वात्। तस्य च स्वप्रकाशत्वात् नित्यसिद्धत्वात्। अतः सिद्धसाधनता परिहाराय ऐक्यस्य स्वरूप् अतिरेके अंगीक्रियमाणे अन्यथाप्रतिपादकत्वमेव इति।**

ಇಲ್ಲಿ शास्त्रस्य ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು. ಅದ್ವೈತವು ಬ್ರಹ್ಮ ಸ್ವರೂಪವೇ ಆದಲ್ಲಿ, ಆಗ ವೇದಾದಿ ಶಾಸ್ತ್ರಗಳಿಗೆ ಸಿದ್ಧಾರ್ಥಬೋಧಕತ್ವ ಎಂಬ ದೋಷ ಬರುತ್ತದೆ. ಬೋಧಕನಾದ ನಾದ ಆತ್ಮನು ಬ್ರಹ್ಮ ಸ್ವರೂಪನಾದುದರಿಂದ, ಹಾಗೂ ಬ್ರಹ್ಮನು ಸ್ವಪ್ರಕಾಶನಾದುದರಿಂದ, ಅದ್ವೈತವು ನಿತ್ಯ ಸಿದ್ಧವಾಗಬೇಕು.

ಆದ್ದರಿಂದ ಸಿದ್ಧಸಾಧನತಾ ದೋಷದ ಪರಿಹಾರಕ್ಕಾಗಿ ಜೀವ ಬ್ರಹ್ಮ ಐಕ್ಯವನ್ನು ಬ್ರಹ್ಮ ಸ್ವರೂಪಕ್ಕಿಂತ ಅತಿರೇಕವೆಂದು ಅಂಗೀಕರಿಸಬೇಕು. ಅದರಂತೆ ಬ್ರಹ್ಮ ಐಕ್ಯವನ್ನು ಪ್ರತಿಪಾದಿಸುವ ಶಾಸ್ತ್ರಗಳು ಅನ್ಯಥಾಪ್ರತಿಪಾದಕಗಳೇ ಆಗುತ್ತವೆ.

### ಟಿಪ್ಪಣಿಗಳವಿಶೇಷ ವಿವರಣೆ

**॥शास्त्रस्य इति शेषःइति॥**

ಇಲ್ಲಿ शास्त्रस्य ಎಂಬ ಪದವನ್ನು ಸೇರಿಸಿ ಅರ್ಥಮಾಡಬೇಕು.

**॥यदि अद्वैतं इति॥**

अद्वैतವು ब्रह्म ಸ್ವರೂಪವೇ ಆದಲ್ಲಿ, ಆಗ ವೇದಾದಿ ಶಾಸ್ತ್ರಗಳಿಗೆ सिद्धार्थबोधकत्व ಎಂಬ ದೋಷ ಬರುತ್ತದೆ. सिद्धार्थबोधकत्व ಎಂದರೆ, ಸಿದ್ಧವಾದುದನ್ನೆ ಬೊಧಿಸುವದು ಎಂದರ್ಥ. ಇದು ಒಂದು ದೋಷದಲ್ಲಿ ಪರಿಗಣಿಸಲಾಗುತ್ತದೆ ಏಕೆಂದರೆ, ಸಿದ್ಧವಾದುದನ್ನು ಯಾರು ಬೊಧಿಸುವದಿಲ್ಲ. ಅದು ವ್ಯರ್ಥವಾದ ಬೊಧನೆ ಆಗುತ್ತದೆ.

**॥बोध्यस्य इति॥ ॥नित्यसिद्धत्वात् इति॥**

ಬೋಧಕನಾದ ಆತ್ಮನು ಬ್ರಹ್ಮಸ್ವರೂಪನಾದುದರಿಂದ, ಹಾಗೂ ಬ್ರಹ್ಮನು ಸ್ವಪ್ರಕಾಶನಾದುದರಿಂದ, ಅದ್ವೈತವು ನಿತ್ಯ ಸಿದ್ಧವಾಗಬೇಕು. ಅಂದರೆ "माम् अहं जानामि" ಎಂದು ಸಾಕ್ಷಿಪ್ರತ್ಯಕ್ಷ್ಯದಿಂದ ಎಂದರ್ಥ.

ಇದನ್ನೆ ಸ್ವಲ್ಪ ವಿಸ್ತಾರದಿಂದ ಹೀಗೆ ವಿವರಿಸಬಹುದು:

ಅದ್ವೈತವು ಸ್ವಪ್ರಕಾಶ ಬ್ರಹ್ಮ ಸ್ವರೂಪಕ್ಕಿಂತ ಅತಿರಿಕ್ತವಿಲ್ಲದಿದ್ದರೂ, ವೇದಾದಿ ಶಾಸ್ತ್ರಗಳಿಗೆ सिद्धसाधनता ಅಂದರೆ ಸಿದ್ಧವಾದುದನ್ನೆ ಸಾಧಿಸುವದು, ಎಂಬ ದೋಷ ಹೇಗೆ ಬರುತ್ತದೆ?

ಸ್ವಪ್ರಕಾಶಭೂತ ಬ್ರಹ್ಮಸ್ವರೂಪ ಬ್ರಹ್ಮ ಪ್ರತಿ ಪ್ರಕಾಶಮಾನವಾಗಿದ್ದು, ಜಿಜ್ಞಾಸು ಜೀವ ಹಾಗೂ ಶಾಸ್ತ್ರದಿಂದ ಬೊಧಿಸಲ್ಪಡುವ ಜೀವನ ಪ್ರತಿ ಅಪ್ರಕಾಶಮಾನವಾಗಿರುತ್ತದೆ. ಅನ್ಯಥಾ ತಮ್ಮ ಪಕ್ಷದಲ್ಲಿಯೂ ಬ್ರಹ್ಮನು ಸ್ವಪ್ರಕಾಶನಾದುದರಿಂದ, ಜಿಜ್ಞಾಸು ನಾದ ಜೀವನ ಪ್ರತಿ ಬ್ರಹ್ಮ ಪ್ರತಿಪಾದಿಸುವ ಶಾಸ್ತ್ರಕ್ಕೆ सिद्धसाधनत्व ಉಂಟಾಗುವದನ್ನು ತಪ್ಪಿಸಲು ಸಾಧ್ಯವಿಲ್ಲ ತಾನೆ.

ಇದರ ಸಮಾಧಾನ ಹೀಗಿರುತ್ತದೆ. ಇಲ್ಲಿ बोध्यस्य ಎಂದರೆ ಶಾಸ್ತ್ರದಿಂದ ಅನುಶಾಸನೀಯನಾದ, ಅಥವಾ ಶಾಸ್ತ್ರ ಶ್ರವಣಕ್ಕೆ ಅಧಿಕೃತನಾದ ಎಂದರ್ಥ. ಹಾಗೂ ತಮ್ಮ ಮತದಂತೆ ಜೀವನು ಬ್ರಹ್ಮಸ್ವರೂಪನಾದ್ದರಿಂದ, ಬ್ರಹ್ಮ ಪ್ರತಿ ಪ್ರಕಾಶಮಾನವಾದ ಐಕ್ಯವು, ಜೀವನ ಪ್ರತಿ ಕೂಡ ಪ್ರಕಾಶಮಾನವಾಗುತ್ತದೆ, ಹಾಗಾಗಿ सिद्धसाधनत्व ಉಂಟಾಗುತ್ತದೆ ಎಂಬ ಭಾವ ಇಲ್ಲಿರುತ್ತದೆ. ಆದರೆ ನಮ್ಮ ಪಕ್ಷದಲ್ಲಿ, ಜೀವನು ಸಕಾಶವಾಗಿ ಬಹ್ಮನಿಂದ ಭಿನ್ನನಾಗಿರುವನಾದ್ದರಿಂದ, ಈ ದೋಷಕ್ಕೆ ಆಸ್ಪದವಿರುವದಿಲ್ಲ.

ಮೇಲಿನ ವಿವೆಚನೆಯ ಸಂದರ್ಭದಲ್ಲಿಯೆ, ಶ್ರೀಮದಾಚಾರ್ಯರು, स्वप्रकाशत्वात् ब्रह्मण: ಎಂದು ಹೇಳದೆ स्वप्रकाशत्वात् आत्मन: ಎಂದು ಹೇಳಿದ್ದಾರೆ. ಇದು ब्रह्मण ಹಾಗೂ बोध्य जीव ರಲ್ಲಿಯ अभेद ವನ್ನು ಪ್ರತಿಪಾದಿಸುವಸಲುವಾಗಿ ಹೇಳಲಾಗಿದೆ ಎಂದು ತಿಳಿಯತಕ್ಕದ್ದು.

ಅಂತಹ अद्वैत ವನ್ನು ಶಾಸ್ತ್ರಗಳು ಪ್ರತಿಪಾದಿಸಿದಲ್ಲಿ, सिद्धसाधनता ಅವುಗಳಿಗೆ ಉಂಟಾಗುವದಿಲ್ಲ ಎಂದು ಹೇಗೆತಾನೆ ಹೇಳುವದು?

## ॥ अतः सिद्धसाधनता परिहाराय इति ॥

ಆದ್ದರಿಂದ ಶಾಸ್ತ್ರಕ್ಕೆ ಸಿದ್ಧಸಾಧನತಾ ದೋಷದಿಂದ ಮುಕ್ತಮಾಡಲು, ಐಕ್ಯವನ್ನು ಬ್ರಹ್ಮ ಸ್ವರೂಪಕ್ಕಿಂತ ಅತಿರೇಕವೆಂದೇ ಅಂಗೀಕರಿಸಬೇಕು. ಇನ್ನು, ಐಕ್ಯವು, ಬ್ರಹ್ಮ ಸ್ವರೂಪಕ್ಕಿಂತ ಅತಿರಿಕ್ತವಾಗಿ ಸತ್ಯವಾದರೆ ಅದ್ವೈತದಹಾನಿ ಪ್ರಸಂಗ ಉಂಟಾಗುತ್ತದೆ, ಆದ್ದರಿಂದ, ಐಕ್ಯವನ್ನು ಮಿಥ್ಯಾ ಎಂದೇ ಅಂಗೀಕರಿಸಬೇಕು. ಅದರಂತೆ, ಶಾಸ್ತ್ರಗಳು ಐಕ್ಯವನ್ನು ಪ್ರತಿಪಾದಿಸಿದಲ್ಲಿ, ಅಯಥಾರ್ಥ ಪ್ರತಿಪಾದಕಗಳಾಗುವದರಿಂದ ಅನ್ಯಥಾಪ್ರತಿಪಾದಕಗಳಾಗುತ್ತವೆ.

## टीका

**अयं च दोषः स्वमतरीत्यैव उक्त इति मन्तव्यं।"स्वविषय प्रकाशत्वं स्वप्रकाशत्वम्" इति स्वमते अंगीकारात्। पररीत्या तु स्वप्रकाशत्वात् आत्मनः, शास्त्रस्य अप्रतिपादकं स्यात्। "अवेद्यत्वं स्वप्रकाशत्वम्" इति अंगीकारात् इति, दूषणं द्रष्टव्यम्।**

ಮೇಲೆ ನಮೂದಿಸಿದ ಸಿದ್ಧಸಾಧನತಾ ದೋಷವನ್ನು, ನಮ್ಮ ಮತದ ಅನುಸಾರ ಹೇಳಲಾಗಿದೆ ಎಂದು ತಿಳಿಯತಕ್ಕದ್ದು. "स्वविषय प्रकाशत्वं स्वप्रकाशत्वम्", ಅಂದರೆ ಸ್ವವಿಷಯದಲ್ಲಿ ಪ್ರಕಾಶಮಾನವಾಗಿರುವದು ಸ್ವಪ್ರಕಾಶತ್ವಮ್ ಎಂದು ನಮ್ಮ ಮತದಲ್ಲಿ ಅಂಗೀಕರಿಸಲಾಗಿದೆ. ಪರಪಕ್ಷದವರ ರೀತಿಯಲ್ಲಿ स्वप्रकाशत्वात् आत्मनः ಎಂದರೆ ಶಾಸ್ತ್ರದಿಂದ ಅಪ್ರತಿಪಾದಿತವಾದದ್ದು ಅಂದರೆ ಪ್ರತಿಪಾದಿಸಲು ಅಶಕ್ಯವಾದದ್ದು ಎಂದರ್ಥ. ಪರಪಕ್ಶದವರು "अवेद्यत्वं स्वप्रकाशत्वं" ಎಂದು ಅಂಗೀಕರಿಸಿರುತ್ತಾರೆ. ಇದನ್ನು ಮುಂದೆ ಶ್ರೀಮದಾಚಾರ್ಯರು ದೂಷಿಸಿದ್ದನ್ನು ವೀಕ್ಶಿಸಬೇಕು.

### ಟಿಪ್ಪಣಿಗಳವಿಶೇಷ ವಿವರಣೆ

**॥ अयं च दोषः स्वमतरीत्यैव उक्त इति ॥**

ಮೇಲೆ ನಮೂದಿಸಿದ सिद्धसाधनता ದೋಷವನ್ನು, ನಮ್ಮ ಮತದ ಅನುಸಾರ ಹೇಳಲಾಗಿದೆ ಎಂದು ತಿಳಿಯತಕ್ಕದ್ದು. "स्वविषय प्रकाशत्वं स्वप्रकाशत्वम्" ಎಂದು ನಮ್ಮ ಮತದಲ್ಲಿ ಅಂಗೀಕರಿಸಲಾಗಿದೆ. ಪರಪಕ್ಷದವರು, ಈ ತರಹದ स्वप्रकाशत्व ವನ್ನು ಅಂಗೀಕರಿಸಲು ಸಾಧ್ಯವಿಲ್ಲ, ಎಕೆಂದರೆ, ಅವರು ಬ್ರಹ್ಮನಲ್ಲಿ, ಯಾವದೆ ತರಹದ ವಿಶೇಷಗುಣಗಳನ್ನು ಒಪ್ಪಿಕೊಂಡಿಲ್ಲ, ಅದರಂತೆ, ಅಲ್ಲಿ ಕರ್ತೃಕರ್ಮತ್ವವನ್ನು ಹೇಳುವದು ಅವರ ಸಿದ್ಧಾಂತದ ವಿರೋಧವಾಗಿರುತ್ತದೆ ಎಂಬ ಭಾವ.

ಇಲ್ಲಿ, ಶ್ರೀವ್ಯಾಸತೀರ್ಥರು, ಶ್ರೊತೃ ಗಳ ಗಮನಕ್ಕೆ ಒಂದು ವಿಶೇಶವಾದ ಸಂಗತಿಯನ್ನು ತರುತ್ತಾರೆ, ಅದು ಹೀಗಿರುತ್ತದೆ:

ಪರಪಕ್ಷದವರು ತಮ್ಮ ಗ್ರಂಥಗಳಲ್ಲಿ,

स्वप्रकाशमात्रस्य स्वतः सिद्धसम्भवेन इति,

स्वतः सिद्धतायामपि तत् उपपत्तेः इति,

विज्ञानमेव स्वप्रकाशस्वभावं प्रकाशत इति,
स्वभाव भेदादेव च स्वात्मनि व्यवहारं कुर्यात इति च
ಎಂದು ಅಲ್ಲಲ್ಲಿ ವಕ್ತವ್ಯವನ್ನು ಕೊಟ್ಟಿದ್ದರೂ, "स्वप्रकाशस्य आत्मनः स्वकर्म अभावेऽपि स्वजन्यव्यवहारविषयत्व योग्यत्वलक्षणा स्वतः सिद्धिः इष्यते" ಎಂದರೆ, "ಸ್ವಪ್ರಕಾಶನಾದ ಆತ್ಮನಿಗೆ ಸ್ವಕರ್ಮದ ಅಭಾವತೆ ಇದ್ದರೂ ಸ್ವಜನ್ಯ ವ್ಯವಹಾರವಿಷಯತ್ವ ಯೋಗ್ಯತಾಲಕ್ಷಣ ಸ್ವತಃ ಸಿದ್ಧಿಯನ್ನು ಹೊಂದುತ್ತದೆ", ಎಂದು ಹೇಳುತ್ತಾರೆ.
ಈತರಹದ आत्माभिन्न अद्वैत ಬೊಧಿಸುವ ಶಾಸ್ತ್ರಗಳಿಗೆ सिद्धसाधनत्व ವನ್ನು ಪರನ್ಯಾಯದಿಂದಲೇ ಪರಮತನಿರಾಕರಣಪರವಾಗಿ ವ್ಯಾಖ್ಯಾನಿಸಲು ಶಕ್ಯವಿದ್ದರೂ, ಇಲ್ಲಿ ಟೀಕಾಕೃತ್ಪಾದರು, ಸಂವಿತ್ (ಜ್ಞಾನ) ವಿಷಯತೆಯನ್ನು ಅನುಸರಿಸಿ, ಸ್ವಮತಾನುಸಾರ, सिद्ध ಶಬ್ದಾರ್ಥವನ್ನು ಹಿಡಿದು, सिद्धसाधनता ದೋಷವನ್ನು ಪ್ರತಿಪಾದಿಸಿದ್ದಾರೆ. ಪರರು, आत्मನಲ್ಲಿ ಸಂವಿತ್ (ಜ್ಞಾನ) ವಿಷಯಾದಿಗಳನ್ನು ಅಂಗೀಕರಿಸಿಲ್ಲಾದ್ದರಿಂದ, ಅಲ್ಲಿ ಪರನ್ಯಾಯದಂತೆ सिद्धसाधनता ಹೇಳಲು ಬರುವದಿಲ್ಲ ಎಂಬ ಭಾವ.

## ॥ "अवेद्यत्वं स्वप्रकाशत्वम्" इति अंगीकारात् इति ॥

ಪರಪಕ್ಷದವರು स्वप्रकाशत्वम् ವನ್ನು "अवेद्यत्वं स्वप्रकाशत्वम्"
ಎಂದು ಅಂಗೀಕರಿಸಿದ್ದಾರೆ. ಅಂದರೆ "ಯಾವುದನ್ನು ಯಾವುದರಿಂದಲೂ ತಿಳಿಯಲು ಸಾಧ್ಯವಿಲ್ಲವೋ ಅದು स्वप्रकाशत्व". ಅದರಂತೆ, आत्म ನು ವೇದಾದಿಶಾಸ್ತ್ರಗಳಿಂದ ಪ್ರತಿಪಾದಿಸಲ್ಪಡುವದಿಲ್ಲ. "स्फुरणरूपत्वमेव, न तु वेदान्तजनितवृत्तेः अपि विषयत्वं स्वप्रकाशत्वम्" ಎಂದು ಪರಪಕ್ಷದವರಿಂದ ಅಂಗೀಕರಿಸಿದ ಸಂಗತಿಯಾಗಿದೆ. ಅದರಂತೆ ವೇದಾದಿಶಾಸ್ತ್ರಗಳಿಗೆ अप्रतिपादकत्व ಎಂಬ ದೋಷ ಬರುತ್ತದೆ ಎಂದು ತಿಳಿಯಬೇಕು.
ಇಲ್ಲಿ ಶ್ರೀವ್ಯಾಸತೀರ್ಥರು, ಪರಪಕ್ಷದವರು स्वप्रकाशत्वम् ಬಗ್ಗೆ ಅಂಗೀಕರಿಸಿದ ವಿಷಯವನ್ನು, ವಿಶ್ಲೇಶಿಸಿ ಅದರಿಂದ ಶಾಸ್ತ್ರಗಳಿಗೆ ಹೇಗೆ अप्रतिपादकत्व ಉಂಟಾಗುತ್ತದೆ ಎಂಬುದನ್ನು ಮಂಡಿಸಿದ್ದಾರೆ. ಅದು ಹೀಗಿರುತ್ತದೆ:
ಪರಪಕ್ಷದವರು, चित्कर्मत्व अभावरूपमेव अवेद्यत्वं स्वप्रकाशत्वम्, ಎಂದು ಅಂಗೀಕರಿಸಿದ್ದಾರೆ ವಿನಹಾ वृत्तिव्याप्यत्व अभावरूप ಪರವಾಗಿ ಅಲ್ಲ. ಆದ್ದರಿಂದ आत्म ನ चित्कर्मत्व अभाव ಮಾತ್ರದಿಂದ ಶಾಸ್ತ್ರಕ್ಕೆ ಅವನ अप्रतिपादकत्व ವನ್ನು ಹೇಳಲಾಗುವದಿಲ್ಲ. ಶಾಸ್ತ್ರಜನಿತ वृत्तिव्याप्यत्व ಮಾತ್ರ ದಿಂದ ಶಾಸ್ತ್ರಕ್ಕೆ ಅವನ प्रतिपादकत्व ವು ಉಂಟಾಗಬಹುದು. ಪರಮತದವರ ಈ ಬಗೆಯ ನಿಲವು ಸರಿ ಎನಿಸಿದರೂ, चित्कर्मत्व अभावरूप ಪರ,

ಸ್ವಪ್ರಕಾಶತ್ವ ದ ಶಬ್ದಾರ್ಥವನ್ನು ಇಟ್ಟುಕೊಂಡರೆ, ಘಟಾದಿ ಗಳಿಗು ಕೂಡ ಚಿತ್ ವಿಷಯಗಳಲ್ಲಿ ಸುಖಾದಿಗಳಂತೆ, ज्ञातैक सत्त्व प्रसंग ಎಂದರೆ ತಿಳುವಿಕೆಯ ಸತ್ಯತ್ವ ಉಂಟಾಗುವದರಿಂದ, चित्कर्मत्व अभाव ವನ್ನು ಒಪ್ಪಬೇಕಾಗುವದರಿಂದ, ಅವುಗಳಿಗೂ स्वप्रकाशत्व ವನ್ನು ಹೇಳಬೇಕಾದ ಪ್ರಸಂಗವದಗುವದು.

ಹಾಗೂ, ಘಟಾದಿ ಗಳಿಂದ ಬೇರ್ಪಡಿಸಲ್ಪಟ್ಟ (अवच्छिन्न) ಚೈತನ್ಯಾವರಕ್, ಅಜ್ಞಾನನಿವೃತ್ತಿಗೋಸ್ಕರ, ವೃತ್ತಿಯ ಅಪೇಕ್ಷಿತವಾಗಿರುವದರಿಂದ, ಘಟಾದಿ ಗಳಲ್ಲಿ ज्ञातैकसत्त्वद ಅಭಾವತೆ ಇದೆ, ಎಂದು ಹೇಳಲಾಗುವದಿಲ್ಲ. ಹಾಗೆನಾದರು ಹೇಳಿದರೆ, ಸುಖಾದಿಗಳಿಗೂ ज्ञातैकसत्त्वद ಅಭಾವತೆಯ ಪ್ರಸಂಗ ಉದ್ಭವಿಸುವದು.

ಸುಖಾದಿಗಳಿಂದ ಬೇರ್ಪಡಿಸಲ್ಪಟ್ಟ (अवच्छिन्न) ಚೈತನ್ಯ, ಅಜ್ಞಾನದಿಂದ ಆವೃತನಾಗಿರುವದಿಲ್ಲ ಎನ್ನುತ್ತೆವೆ ಎಂದರೆ, ಕೆಳಗಿನ ಎರಡು ಪ್ರಶ್ನೆಗಳು ಉದ್ಭವಿಸುವವುಃ

- ಮೊದಲನೆಯದಾಗಿ, ಏಕೆ, ಅನಾವೃತ ಚೈತನ್ಯ ಪ್ರದೇಶದ ಬೇರ್ಪಡೆಯಿಂದ ಸುಖದುಃಖಾದಿಗಳು ಹುಟ್ಟುತ್ತವೆಯೋ?
- ಅಥವಾ, ಸುಖಾದಿಗಳ ಉತ್ಪತ್ತಿ ಆದನಂತರವೆ ಅವುಗಳ ಬೇರ್ಪಡೆಯಿಂದ ಚೈತನ್ಯವು ಅನಾವೃತ ಗೊಳ್ಳುತ್ತದೆಯೊ?

ಮೊದಲನೆಯದನ್ನು ಹೇಳುವದು ಸರಿಯಲ್ಲ. ಅನಿಯತದೇಶ ಅಂತಃಕರಣಸಂಬಂಧಿಗಳಾದ ಅನಂತಸುಖದುಃಖಾದಿಗಳ ನಿಯತೈಕ ಚೈತನ್ಯಪ್ರದೇಶ ಸಂಬಂಧದಿಂದ ಉತ್ಪತ್ತಿಯನ್ನು ಹೇಳುವದು ಸರಿಯಲ್ಲ. ಇನ್ನು, ಅನಿಯತ ಅನಂತಪ್ರದೇಶದ ಅನಾವೃತತ್ವದಿಂದ ಸುಖದುಃಖಾದಿಗಳ ಉತ್ಪತ್ತಿಯನ್ನು ಹೇಳುವದಾದರೆ, ಆ ಪ್ರದೇಶ ಸಂಬಂಧದಿಂದ ಉತ್ಪನ್ನ ಹೊಂದಿದ ಘಟಾದಿ ಗಳಿಗು ಕೂಡ ज्ञातैकसत्त्व ಉಂಟಾಗುವ ಪ್ರಸಂಗವದಗುತ್ತದೆ.

ಎರಡನೆಯದು ಕೂಡ ಸರಿ ಎನಿಸುವದಿಲ್ಲ. ಸುಖದುಃಖಾದಿಗಳವಿಷಯಗಳ ವೃತ್ತಿಯಿಂದಲೇ, ಚೈತನ್ಯ ಅಜ್ಞಾನ ನಿವರ್ತಕಭಾವದಿಂದ, ದುಃಖಾದಿಗಳ ಅಜ್ಞಾನ ಅನಿವರ್ತಕಭಾವದಿಂದ, ಅಜ್ಞಾನ ನಿವೃತ್ತಿಗೊಸ್ಕರ, ದುಃಖಾದಿವಿಷಯವೃತ್ತಿಗಳನ್ನು ಅಂಗೀಕರಿಸಿದ್ದರಿಂದ, ಘಟಾದಿ ಗಳಂತೆ, ದುಃಖಾದಿಗಳಿಗೆ ज्ञातैकसत्त्व ಅಭಾವತೆಯನ್ನು ಹೇಳಬೆಕಾಗುವದು.

ಆದ್ದರಿಂದ, "दु:खादिकं ज्ञातैकसत्, घटादिकं तु न" ಎಂಬ ವ್ಯವಸ್ಥೆಯು ಸಿದ್ಧಿಸುವಗೊಸ್ಕರ, ಘಟಾದಿ ಗಳಿಗೆ चित्कर्मत्व अभाव ತೆ ಯನ್ನು ಅವಶ್ಯವಾಗಿ ಹೇಳಬೇಕು. ಅದರಂತೆ ಪರಪಕ್ಷದವರು ಹೇಳುವಂತೆ चित्कर्मत्व अभावरूप ಪರ, स्वप्रकाशत्वद

ಶಬ್ದಾರ್ಥವನ್ನಿಟ್ಟುಕೊಂಡರೆ, घटादि ಗಳಿಗು ಕೂಡ स्वप्रकाशत्व ಉಂಟಾಗುತ್ತದೆ. ಅದರ ಪರಿಹಾರತೆಗಾಗಿ, वृत्तिव्याप्यत्व अभावः स्वप्रकाशत्वम्" ಎಂದು ಹೇಳಬೇಕು. ಅದರಂತೆ, ಶಾಸ್ತ್ರಗಳು, ಆತ್ಮನನ್ನು ಪ್ರತಿಪಾದಿಸಲಾರವು. ಆದ್ದರಿಂದ ಅವುಗಳಿಗೆ अप्रतिपादकत्व ಎಂಬ ಆಪಾದನೆ ವಿವಕ್ಷಿತವಾಗಿರುತ್ತದೆ.

**೪.೪.೨.3 ಸ್ವಪ್ರಕಾಶತ್ವದಿಂದ ಆತ್ಮಸ್ವರೂಪಸಿದ್ಧವಾದರೂ ಅದ್ವೈತದ ಸಿದ್ಧಿವಾಗಿರುವದಿಲ್ಲ ಎಂಬ ವಾದದ ವಿಮರ್ಶೆ:**

## टीका

**ननु स्वप्रकाशतया आत्मस्वरूपस्य सिद्धत्वेऽपि, अद्वैतादि विशेषाकारेण अनधिगतत्वात्, न शास्त्रस्य सिद्धसाधन्त्वादिकम्। यथा खलु भवतां गुणगुणिनोः अभेदेऽपि गुणिनः स्पर्शनेन उपलम्भे रूपस्य अनधिगतिः एवं इति। अत आह–**

ಆತ್ಮನ ಸ್ವಪ್ರಕಾಶತ್ವದಿಂದ ಆತ್ಮಸ್ವರೂಪ ಸಿದ್ಧವಾದರೂ ಅದ್ವೈತಾದಿವಿಶೇಷಾದಿಗಳು ತಿಳಿಯಲ್ಪಟ್ಟಿರುವದಿಲ್ಲ ಅಥವಾ ಸಿದ್ಧವಾಗಿರುವದಿಲ್ಲ. ಆದ್ದರಿಂದ ವೇದಾದಿಶಾಸ್ತ್ರಗಳಿಗೆ सिद्धसाधनतादि (सिद्धसाधनता, अप्रतिपाद्कता) ದೋಷಗಳನ್ನು ಹೇಳಲು ಬರುವದಿಲ್ಲ. ಉದಾಹರಣೆಗೆ ಹೇಳುವದಾದರೆ: ಹೇಗೆ, ಗುಣಗುಣಿಯಲ್ಲಿ ಅಭೇದವಿದ್ದರೂ, ಗುಣಿಯನ್ನು ಸ್ಪರ್ಷದಿಂದ ತಿಳಿಯಬಹುದಾದರೂ, ಗುಣವಾದ ರೂಪವನ್ನು ತಿಳಿಯಲಾಗುವದಿಲ್ಲವೋ ಅದರಂತೆ ಎಂಬ ಭಾವ. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ

**<u>ಟಿಪ್ಪಣಿಗಳವಿಶೇಷ ವಿವರಣೆ</u>**

॥गुणगुणिनोः इति॥

ಇಲ್ಲಿ गुणगुणिनोः ಎಂದರೆ यावद्द्रव्यभावि गुणगुणिनोः ಎಂದರ್ಥ. अयावद्द्रव्यभावि गुणगुणि ಗಳಲ್ಲಿಯ ಅತ್ಯಂತ ಅಭೇದ ಸಿದ್ಧಾಂತದಲ್ಲಿ ಅಂಗೀಕರಿಸಿರುವದಿಲ್ಲ. ಆದ್ದರಿಂದ, ಅವುಗಳನ್ನು ಉದಾಹರಿಸುವದು ಉಚಿತವೆನಿಸುವದಿಲ್ಲ.

**मायावाखण्डनम्**
**निर्विशेषत्वात् आत्मनः न अनधिगतो विशेषः।**

ಪರಪಕ್ಷದವರಂತೆ, ಆತ್ಮನು ನಿರ್ವಿಶೇಷನಾದ್ದರಿಂದ, ಆತ್ಮಸ್ವರೂಪವು ತಿಳಿಯಲ್ಪಟ್ಟಾಗ, ಅಲ್ಲಿ ತಿಳಿಯಲ್ಪಡದ ಯಾವ ವಿಶೇಷವು ಇರಲು ಸಾಧ್ಯವಿಲ್ಲ.

## टीका

स्यात् एवं घटोपलम्भेऽपि तद्रूप अनुपलब्धिः। यतो रूपं, घट अभिन्नमपि तद्विशेषतया अंगीक्रियते, न तु तन्मात्रम्। न च ऐक्यमपि आत्माभिन्नं तद्विशेषः। येन आत्मनि सिद्धेऽपि अनधिगतं इति युक्तम्। आत्मस्वरूपस्य निर्विशेषत्व अंगीकारात् इति। अथापि स्यात्।

ಅದ ಹೀಗಿರುತ್ತದೆಃ ಘಟವು ಉಪಲಬ್ಧವಿದ್ದರೂ, ಅದರ ರೂಪವು ಉಪಲಬ್ಧವಾಗಿರುವದಿಲ್ಲ. ಹೇಗೆ ಘಟದ ರೂಪವು ಘಟದಿಂದ ಅಭಿನ್ನವಾಗಿದ್ದರೂ ಅದನ್ನು ಘಟದ ವಿಶೇಷವೆಂದೆ ಅಂಗೀಕರಿಸುತ್ತೇವೆ ವಿನಹಾ ಘಟದ ರೂಪಮಾತ್ರವನ್ನಲ್ಲ. ಹಾಗೆಯೇ ಆತ್ಮನಕ್ಕಿಂತ ಭಿನ್ನವಾಗಿ ಐಕ್ಯದಲ್ಲಿ ಏನೂ ವಿಶೇಷತೆ ಇರುವದಿಲ್ಲ. ಇದರಿಂದ ಆತ್ಮನು ಸಿದ್ಧನಾದರೂ ಐಕ್ಯ ಸಿದ್ಧವಾಗದೆ ಅಂದರೆ ತಿಳಿಯದೆ ಇರಬಹುದು.

ಆದರೆ ತಾವು ಆತ್ಮಸ್ವರೂಪವನ್ನು ನಿರ್ವಿಶೇಷವಾದದ್ದು ಎಂದು ಅಂಗೀಕರಿಸಿದ್ದೀರಿ. ಅದರಂತೆ ಆತ್ಮಸ್ವರೂಪದಲ್ಲಿ ಅದ್ವೈತಾದಿವಿಶೇಷತೆಗಳು ಇರಲು ಸಾಧ್ಯವಿಲ್ಲ. ಹೀಗಾಗಿ ಅಲ್ಲಿ ವಿಶೇಷವಾಗಿ ತಿಳಿಯುವದು ಏನು ಇರುವದಿಲ್ಲ.

ಆದ್ದರಿಂದ ವೇದಾದಿ ಶಾಸ್ತ್ರಗಳಿಗೆ ಸಿದ್ಧಸಾಧನತಾದಿ ದೋಷಗಳಿಂದ ಮುಕ್ತ ಮಾಡಲು ಆಗುವದಿಲ್ಲ.

### ಟಿಪ್ಪಣಿಗಳವಿಶೇಷ ವಿವರಣೆ

॥ स्यात् एवं इति॥

ಘಟವು ಉಪಲಬ್ಧವಿದ್ದರೂ, ಅದರ ರೂಪವು ಉಪಲಬ್ಧವಾಗಿರುವದಿಲ್ಲ.

॥यतो इति॥

ಘಟದ ರೂಪವು ಘಟ ಜೊತೆ ಅಭಿನ್ನವಾಗಿಯೇ ಇರುತ್ತದೆ. ಕೇವಲ ಘಟದ ರೂಪವನ್ನು ಅಂಗೀಕರಿಸಲು ಶಕ್ಯವಿಲ್ಲ. ಘಟದ ರೂಪವು ಘಟದ ಜೊತೆ ಅಭಿನ್ನವಾಗಿದ್ದರೂ, ಇದು ಘಟದ ರೂಪ ಎಂದು ಅದನ್ನು ಭೇದ ಪ್ರತಿನಿಧಿರೂಪ ವಿಶೇಷ ಆಶ್ರಯಭೂತಧರ್ಮದ್ದು ಎಂದು ವಿಶೇಷವಾಗಿ ಅಂಗೀಕರಿಸುತ್ತೆವೆ.

॥ येन इति॥

ಹಾಗೆಯೇ ಆತ್ಮನಕ್ಕಿಂತ ಭಿನ್ನವಾಗಿ ಐಕ್ಯ ದಲ್ಲಿ ಏನೂ ವಿಶೇಷತೆ ಇರುವದಿಲ್ಲ. ಆದರೂ ಐಕ್ಯವನ್ನು ಆತ್ಮನಿಂದ ಅಭಿನ್ನವೆಂದು ವಿಶೇಷವಾಗಿ ಅಂಗೀಕರಿಸಬೇಕು. ಆದ್ದರಿಂದ ಆತ್ಮನು ಸಿದ್ಧವಾದರೂ ಐಕ್ಯಸಿದ್ಧವಾಗದೆ ಇರಬಹುದು.

॥ आत्मस्वरूपस्य इति॥

ಹೀಗೆ ತಾವು ಹೇಳುವದು ನಿಜ, ಆದರೆ ತಾವು ಆತ್ಮನಸ್ವರೂಪವನ್ನು ನಿರ್ವಿಶೇಷ ವಾದದ್ದು ಎಂದು ಅಂಗೀಕರಿಸಿರುವದರಿಂದ, ಆತ್ಮನಲ್ಲಿ ಏನು ವಿಶೇಷ ಗುಣಗಳು ಇರುವದಿಲ್ಲ. ಹೀಗಾಗಿ ಆತ್ಮನಲ್ಲಿ ಯಾವದೆ ಗುಣಗಳನ್ನು ವಿಶೇಷವಾಗಿ ಅಂಗೀಕರಿಸುವ ಪ್ರಶ್ನೆಯೆ ಉದ್ಭವಿಸುವದಿಲ್ಲ. ಅದರಂತೆ ಆತ್ಮಸ್ವರೂಪದಲ್ಲಿ ಅದ್ವೈತಾದಿವಿಶೇಷತೆಗಳು ಇರಲು ಸಾಧ್ಯವಿಲ್ಲ. ಹೀಗಾಗಿ ಅಲ್ಲಿ ವಿಶೇಷವಾಗಿ ತಿಳಿಯುವದು ಏನು ಇರುವದಿಲ್ಲ.

॥अथापि स्यात् इति॥

ಆದ್ದರಿಂದ ವೇದಾದಿ ಶಾಸ್ತ್ರಗಳಿಗೆ ಸಿದ್ಧಸಾಧನತಾದಿದೋಷಗಳಿಂದ ಮುಕ್ತ ಮಾಡಲು ಆಗುವದಿಲ್ಲ.

**೪.೪.೨.೪ ವೇದಾದಿಶಾಸ್ತ್ರಗಳು ಆವರಣಭೂತ ಅಜ್ಞಾನದ ನಾಶ ಮಾಡುತ್ತವೆ ಎಂಬುದರ ವಿಮರ್ಶೆ:**

## टीका

**भवेत् इदं शास्त्रस्य सिद्धसाधनत्वादि, यदि शास्त्रं साक्षात् अद्वैतं प्रतिपादयति इति ब्रूमः। न च एवम्। किं नाम? आवरणभूत अज्ञानमात्रं निवर्तयति इति। निवृत्ते तु आवरणे अद्वैतं स्वत एव सिद्धम्। तदुक्तं "सिद्धं तु निवर्तकत्वात्" इति। तत्र आह-**

ಆಗಲಿ ವೇದಾದಿಶಾಸ್ತ್ರಗಳಿಗೆ ಸಿದ್ಧಸಾಧನಾತಾದಿ ದೋಷಗಳಿರಲಿ ಯಾವಾಗ ಅವು ಸಾಕ್ಷಾತ್ತಾಗಿ ಅದ್ವೈತವನ್ನು ಪ್ರತಿಪಾದಿಸುತ್ತವೆ ಎಂದು ನಾವು ಹೇಳುತ್ತೇವೆ ಎಂದಾಗ. ನಾವು ಅವುಗಳು ಸಾಕ್ಷಾತ್ತಾಗಿ ಪ್ರತಿಪಾದಿಸುತ್ತವೆ ಎಂದು ಹೇಳುವದೇ ಇಲ್ಲ. ಮತ್ತೇನು ಹೇಳುತ್ತೀರಿ ಎಂದರೆ, ವೇದಾದಿ ಶಾಸ್ತ್ರಗಳು ಆವರಣಭೂತವಾದ ಅಜ್ಞಾನವನ್ನು ನಾಶಮಾಡುತ್ತವೆ. ಅಜ್ಞಾನದ ಆವರಣ ನಾಶವಾದಮೇಲೆ ಅದ್ವೈತವು ಸ್ವತಃ ಸಿದ್ಧಿಸುತ್ತದೆ ಎಂದೆನ್ನುತ್ತೇವೆ. ಅದಕ್ಕೇನೆ ಹೀಗೆ ಹೇಳಲಾಗಿದೆ "सिद्धं तु निवर्तकत्वात्" ಎಂದು. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ:

<u>ಟಿಪ್ಪಣಿಗಳವಿಶೇಷ ವಿವರಣೆ</u>

॥ भवेत् इदं इति॥

ಆಗಲಿ, ವೇದಾದಿಶಾಸ್ತ್ರಗಳಿಗೆ ಸಿದ್ಧಸಾಧನಾತಾದಿ ದೋಷಗಳಿರಲಿ, ಯಾವಾಗ ಅವು ಸಾಕ್ಷಾತ್ತಾಗಿ ಅದ್ವೈತವನ್ನು ಪ್ರತಿಪಾದಿಸಿದಲ್ಲಿ, ಎಂದು ಹೇಳುತ್ತೆವೆ. ಅವುಗಳು ಸಾಕ್ಷಾತ್ತಾಗಿ ಅದ್ವೈತ ವನ್ನು ಪ್ರತಿಪಾದಿಸುವದಿಲ್ಲ,

॥ किं नाम? इति॥

ಮತ್ತೇನು ಪ್ರತಿಪಾದಿಸುತ್ತವೆ, ಎಂದರೆ, ಅವು ಆವರಣಭೂತ ಅಜ್ಞಾನವನ್ನು ನಾಶಮಾಡುತ್ತವೆ. ಅಜ್ಞಾನದ ಆವರಣ ನಾಶವಾದಲ್ಲಿ, ಅದ್ವೈತವು ಸ್ವತಃ ಸಿದ್ಧಿಸುತ್ತದೆ.

ಇಲ್ಲಿ ಶ್ರೀಸತ್ಯನಾಥರು, ಶಬಲ ಬ್ರಹ್ಮನ ಪ್ರಸ್ತಾವನೆಯನ್ನು ಮಾಡುತ್ತ ಹೀಗೆ ವಿವರಿಸುತ್ತಾರೆ

शास्त्रं शबलब्रह्म प्रतिपादयति। तत् ज्ञानेन, आवरणभूत अज्ञान निवृत्ते, अद्वैतं स्वतः एव सिद्धं भवति। न तु आवरणनिवृत्तेः पुरा स्वप्रकाशत्वेऽपि सिद्धम्। ततश्च परंपरया शास्त्रं अद्वैत सिद्धि उपयोगि इति, शास्त्रं अद्वैत प्रतिपादकम् इति प्रवाद इति भावः।

ಶಾಸ್ತ್ರವು ಶಬಲ ಬ್ರಹ್ಮನನ್ನು ಪ್ರತಿಪಾದಿಸುತ್ತದೆ. ಶಬಲ ಬ್ರಹ್ಮನ ಜ್ಞಾನದಿಂದ ಆವರಣಭೂತ ಅಜ್ಞಾನ ನಿವೃತ್ತಿ ಹೊಂದಿ, ಅದ್ವೈತವು ಸ್ವತಃ ಸಿದ್ಧವಾಗುತ್ತದೆ. ಹೀಗಿದ್ದರೂ, ಅಜ್ಞಾನದ ಆವರಣ ನಷ್ಟವಾದಮಾತ್ರಕ್ಕೆ, ಪೂರ್ವದಲ್ಲಿ ಸ್ವಪ್ರಕಾಶವಾದ ಅದ್ವೈತವು ಸಿದ್ಧಿಸುವದಿಲ್ಲ, ಅದು ಪರಂಪರೆಯಿಂದ ಸಿದ್ಧಿಸುತ್ತದೆ. ಹೀಗೆ ಶಾಸ್ತ್ರವು ಅದ್ವೈತ ಸಿದ್ಧಿ ಉಪಯೋಗಿ ಅಗಿರುವದರಿಂದ ಪ್ರವಾದದಿಂದ ಅದ್ವೈತ ಪ್ರತಿಪಾದಕ ಎಂದು ಹೇಳಲಾಗುತ್ತಿದೆ ಎಂಬ ಭಾವವಿರುತ್ತದೆ.

॥सिद्धं तु निवर्तकत्वात्" इति॥

ಇದನ್ನೆ "सिद्धं तु निवर्तकत्वात्" ಉಕ್ತಿಯು ಹೇಳುತ್ತಿದೆ. ಇದರಂತೆ, ಜೀವಬ್ರಹ್ಮ ಐಕ್ಯವುವು, ಸ್ವಪ್ರಕಾಶಾತ್ಮಕ ಸ್ವರೂಪವುಳ್ಳದ್ದಾದ್ದರಿಂದ, ಸದಾ ಪ್ರಕಾಶಮಾನವಾಗಿದ್ದರೂ, ಶಾಸ್ತ್ರವು ಅಜ್ಞಾನಮಾತ್ರ ನಿವರ್ತಕವಾದ್ದರಿಂದ ಅದಕ್ಕೆ ಆರಂಭಣೀಯತ್ವ ಸಿದ್ಧವಾಗಿರುತ್ತದೆ.

ಹಾಗೆಯೆ,ಅಜ್ಞಾನ ನಿವರ್ತಕ ಪ್ರಯೋಜನದಿಂದ ಕೂಡಿದ, ಅದರ ದ್ವಾರಾ ಅದ್ವೈತ ಸಿದ್ಧಿ ಗೆ ಉಪಯೊಗವಾಗುವದರಿಂದ ಶಾಸ್ತ್ರವು ಸವಿಷಯವಾಗಿರುತ್ತದೆ ಎಂಬ ಭಾವ.

## मायावाखण्डनम्

## सिद्धत्वात् स्वरूपस्य, विशेष अभावाच्च, न अज्ञानं कस्यचित् आवरकम्।

ಆತ್ಮಸ್ವರೂಪವು ಸಿದ್ಧವಾಗಿರುವಾಗ, ಸ್ವರೂಪ ಹೊರತು ಬೇರೆ ವಿಶೇಷಗಳು ಆತ್ಮನಲ್ಲಿಲ್ಲದಿರುವಾಗ, ಅಜ್ಞಾನವು ಯಾವುದಕ್ಕು ಆವರಕವಾಗಲಾರದು.

## टीका

स्यात् एवं शास्त्रस्य सिद्धसाधनता परिहार:। यदि परमते अज्ञानं आवरणं सम्भवेत्। न च एतत् सम्भवति। आवरणं आव्रियमाणेन व्याप्तम्। न च अज्ञानस्य तत् अस्ति। तथा हि-

किम् अज्ञानं आत्मस्वरूपस्य आवरणं स्यात्? उत तद्विशेषस्य? न आद्य:। तस्य स्वप्रकाशत्वेन नित्यसिद्धत्वात्। न द्वितीय:,तत् अभावात्। तथा च व्यापक अभावात् व्याप्यं आवरणमपि न सम्भवति इति, न तत् निवर्तकत्वेन शास्त्रस्य असिद्धसाधनत्वं भवति।

ತಾವು ಹೇಳಿದಂತೆ, ವೇದಾದಿಶಾಸ್ತ್ರಕ್ಕೆ ಸಿದ್ಧಸಾಧನತಾ ದೋಷದ ಪರಿಹಾರವಾಗಲಿ, ಯಾವಾಗ ನಿಮ್ಮ ಮತ (ಪರಮತ ) ದಲ್ಲಿ ಅಜ್ಞಾನದ ಆವರಣ ಉಂಟಾದಲ್ಲಿ. ತಮ್ಮ ಮತದಲ್ಲೆ ಅಜ್ಞಾನದ ಆವರಣ ಉಂಟಾಗಲು ಸಾಧ್ಯವೇ ಇಲ್ಲ. ಅಜ್ಞಾನದ ಆವರಣವು ಪ್ರತಿಬಂಧಕ ಹೊಂದುವ ವಸ್ತುವಿನಲ್ಲಿ ವ್ಯಾಪ್ತಿಯನ್ನು ಹೊಂದಿರುತ್ತದೆ. ಬ್ರಹ್ಮನಿಗೆ ಅಜ್ಞಾನವೇ ಇಲ್ಲದಿರುವಾಗ ಅವನಿಗೆ ಆವರಣ ಹೇಗೆ ಉಂಟಾಗುತ್ತದೆ? ಅದನ್ನು ಇನ್ನಷ್ಟು ಸ್ಪಷ್ಟವಾಗಿ ಹೀಗೆ ವಿವರಿಸಬಹುದು. ಏಕೆ, ಆತ್ಮಸ್ವರೂಪವನ್ನು ಆವರಿಸುವದೊ? ಅಥವಾ ಅದರ ವಿಶೇಷವನ್ನೊ? ಮೊದಲನೆಯದನ್ನು ಹೇಳಲಿಕ್ಕಾಗುವದಿಲ್ಲ. ಏಕೆಂದರೆ ಬ್ರಹ್ಮನು ಸ್ವಪ್ರಕಾಶನಾದುದರಿಂದ ಅವನು ನಿತ್ಯ ಸಿದ್ಧನಾಗಿದ್ದಾನೆ. ಇನ್ನು ಎರಡನೆಯದನ್ನು ಹೇಳೊಣವೆಂದರೆ, ಬ್ರಹ್ಮನು ನಿರ್ವಿಶೇಷನಾದ್ದರಿಂದ ಅವನಲ್ಲಿ ಯಾವ ವಿಶೇಷತೆ ಇರುವದಿಲ್ಲ. ಅದರಂತೆ, ವ್ಯಾಪಕ ಇಲ್ಲದಾಗ ವಾಪ್ಯವಾದ ಅಜ್ಞಾನದ ಆವರಣಕೂಡ ಸಂಭವಿಸಲು ಸಾಧ್ಯವಿಲ್ಲ. ಆದ್ದರಿಂದ ಅಜ್ಞಾನದ ಆವರಣದ ನಿವರ್ತನೆಯಿಂದ ಶಾಸ್ತ್ರಕ್ಕೆ ಅಸಿದ್ಧಸಾಧನತಾ ಉಂಟಾಗುವದಿಲ್ಲ.

### <u>ಟಿಪ್ಪಣಿಗಳವಿಶೇಷ ವಿವರಣೆ</u>

॥स्यात् एवं इति॥

ತಾವು ಹೇಳಿದಂತೆ, ವೇದಾದಿಶಾಸ್ತ್ರಕ್ಕೆ ಸಿದ್ಧಸಾಧನತಾ ದೋಷದ ಪರಿಹಾರವಾಗಲಿ, ಯಾವಾಗ, ನಿಮ್ಮ ಮತ (ಪರಮತ) ದಲ್ಲಿ, ಅಜ್ಞಾನದ ಆವರಣ ಉಂಟಾದಲ್ಲಿ.

**॥न च एतत् इति॥**

ತಮ್ಮ ಮತದಲ್ಲಿ, ಅಜ್ಞಾನದ ಆವರಣ ಉಂಟಾಗಲು ಸಾಧ್ಯವೇ ಇಲ್ಲ. ಅಜ್ಞಾನದ ಆವರಣವು ಪ್ರತಿಬಂಧಕ ಹೊಂದುವ ವಸ್ತುವಿನಲ್ಲಿ, ವ್ಯಾಪ್ತಿಯನ್ನು ಹೊಂದುತ್ತದೆ. ಬ್ರಹ್ಮನಿಗೆ ಅಜ್ಞಾನವೇ ಇಲ್ಲದಿರುವಾಗ, ಅಜ್ಞಾನದ ಆವರಣ ಹೇಗೆ ಉಂಟಾಗುತ್ತದೆ?

**॥तथा हि इति॥**

ಇದನ್ನೇ ಇನ್ನಷ್ಟು ಸ್ಪಷ್ಟವಾಗಿ ಹೀಗೆ ವಿವರಿಸ ಬಹುದು.

ಅಜ್ಞಾನವು ಆತ್ಮಸ್ವರೂಪನುವನ್ನು ಆವರಿಸುವದೊ? ಅಥವಾ ಆತ್ಮನ ವಿಶೇಷತೆಯನ್ನೊ?

ಅಂದರೆ अज्ञानं निर्विशेष अभिन्नस्य ऐक्यस्य आवरणम्, उत सविशेष अभिन्नस्य आत्मस्वरूपस्य ऐक्यस्य इत्यर्थ:।

ಅಂದರೆ ಅಜ್ಞಾನವು ನಿರ್ವಿಶೇಷ ಅಭಿನ್ನವಾದ ಐಕ್ಯದ ಆವರಕವಾಗಿರುತ್ತದೊ ಅಥವಾ ಅಜ್ಞಾನವು ಸವಿಶೇಷ ಅಭಿನ್ನವಾದ ಆತ್ಮಸ್ವರೂಪದ ಐಕ್ಯದ ಆವರಕವಾಗಿರುತ್ತದೊ ಎಂದರ್ಥ.

**॥न आद्य:। तस्य स्वप्रकाशत्वेन नित्यसिद्धत्वात् इति॥**

ಮೊದಲನೆಯದನ್ನು ಹೇಳಲಾಗುವದಿಲ್ಲ. ಏಕೆಂದರೆ आत्मस्वरूपಆತ್ಮಸ್ವರೂಪನು स्वप्रकाशಸ್ವಪ್ರಕಾಶ ನಾಗಿರುವದರಿಂದ, ಅದು ನಿತ್ಯ ಸಿದ್ಧವಾಗಿರುತ್ತದೆ.

ಅಂದರೆ, स्वप्रकाशात्मना निर्विशेष अभिन्नस्य ऐक्यस्य सदा सिद्धत्वात न अज्ञानं आवरकम् वक्तुं शक्यं इति भाव:।

ನಿರ್ವಿಶೇಷ ಅಭಿನ್ನವಾದ ಐಕ್ಯವು ಸ್ವಪ್ರಕಾಶತ್ವದಿಂದ ಸದಾ ಸಿದ್ಧವಾದಿರುವದರಿಂದ, ಅಲ್ಲಿ ಅಜ್ಞಾನವು ಆವರಿಸತ್ತದೆ ಎಂದು ಹೇಳಲಿಕ್ಕೆ ಬರುವದಿಲ್ಲ ಎಂಬ ಭಾವವಿರುತ್ತದೆ.

ಅದನ್ನೆ ಶ್ರೀಮದಾಚಾರ್ಯರು सिद्धत्वात् स्वरूपस्य ಎಂದು ಹೇಳಿದ್ದಾರೆ.

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಈ ವಿಷಯದಲ್ಲಿ, ಮೊದಲಿಗೆ ಪರಪಕ್ಷದವರ ಮತವನ್ನು ಪ್ರತಿಪಾದಿಸಿ ಆಮೆಲೆ ಅದು ಹೇಗೆ ಸರಿ ಎನಿಸುವದಿಲ್ಲ ಎಂಬುದನ್ನು ಪ್ರಸ್ಥಾಪಿಸುತ್ತಾರೆ.

- ಪರಪಕ್ಷದವರು, ಪ್ರಕಾಶಮಾನವಿಷಯದಲ್ಲಿ ಅಜ್ಞಾನದ ಆವರಣ ಹೇಗೆ ಅಂಗೀಕರಿಸುತ್ತಾರೆ?

  प्रतिभासमानस्यमेव अज्ञान व्यावर्तकं, ಅಂದರೆ, ಪ್ರಕಾಶಿಸುವದೆ ಅಜ್ಞಾನ ವ್ಯಾವರ್ತಕವಾಗಿರುತ್ತದೆ ಎಂದು ಅವರ ಮತಾಚರ್ಯರು ಹೇಳಿರುತ್ತಾರೆ. ಅದರಂತೆ, ಪ್ರಕಾಶಮಾನವದುದಕ್ಕೆ ಅಜ್ಞಾನವಿಷಯತ್ವವನ್ನು ಹೇಳುವದು ಯುಕ್ತವಾಗಿದೆ. ಇದನ್ನು ಪರಪಕ್ಷದವರು ಹೀಗೆ ವಿವರಿಸುತ್ತಾರೆ:

इदं अहं न जानामि इति ಅಂದರೆ "ಇದನ್ನು ನಾನು ತಿಳಿದಿರುವದಿಲ್ಲ" ಎಂಬಲ್ಲಿ, ವಿಷಯದ अवच्छिन्न (ಆವರಿಸಿದ ) अज्ञान ವನ್ನು ನಾವು ಅನುಭವಿಸುತ್ತೇವೆ. ಅಲ್ಲಿ, अवच्छेदक (ಆವರಿಸಲ್ಪಟ್ಟ) ವಾದ ವಿಷಯವು ತಿಳಿದಿದೆಯೊ ಅಥವಾ ಇಲ್ಲವೋ? ಎಂಬ ಪ್ರಶ್ನೆಗೆ ತಿಳಿದಿಲ್ಲ ಎಂಬ ಉತ್ತರವಾದರೆ, अवच्छिन्न अज्ञान ಜ್ಞಾನ ಹೇಗಾಯಿತು? अवच्छेदक ದ ಜ್ಞಾನವಿಲ್ಲದಾಗ, अवच्छिन्न ದ ಜ್ಞಾನವಿದೆ ಎಂದು ಹೇಳುವದು ಅಯುಕ್ತವೆನಿಸುತ್ತದೆ,

ಇನ್ನು, अवच्छेदक ದ ಜ್ಞಾನವಿದೆ ಅಂದರೆ, ವಿಷಯಪ್ರಕಾಶಮಾನವದರು अज्ञानಅಜ್ಞಾನವು ಸಿದ್ಧವಾಯಿತು.

ಇನ್ನು, अवच्छेदक ವಾದ ವಿಷಯವನ್ನು ಸಮಾನ್ಯವಾಗಿ ತಿಳಿಯಲಾಗುತ್ತದೆ, ವಿಶೇಷವು ತಿಳಿದಿರುವದಿಲ್ಲ ಎಂದು ಹೇಳುವದು ಸರಿಯಲ್ಲ. ಸಾಮಾನ್ಯಾಕಾರದ ಜ್ಞಾನ ಇರುವದರಿಂದಲೇ, ಅಜ್ಞಾನ ವಿಷಯದ ಅಭಾವತೆಯಿಂದ ಅಜ್ಞಾನ अवच्छेदक ಇಲ್ಲದಿರುವಾಗ, ವಿಶೇಷಾಕಾರದ್ದೆ अवच्छेदक ಇರುವದರಿಂದ, ಸಾಮಾನ್ಯಾಕಾರ ಪ್ರಕಾಶಮಾನವಾಗುವದು ಆವಶ್ಯಕವಾಗುತ್ತದೆ.

ಇದರಿಂದ, "विशेषोऽपि "अस्ति कश्चित् विशेषः" इति सामान्यतो ज्ञायते। विशेषस्तु न ज्ञायते" इति, ಅಂದರೆ "ವಿಶೇಷವನ್ನು ಕೂಡ, "ಏನೊ ವಿಶೇಷವಿರುತ್ತದೆ", ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ, ವಿಶೇಷವನ್ನಲ್ಲ." ಎಂಬ ವಾದವನ್ನು ನಿರಾಕರಿಸಲಾಯಿತು.

ಆದ್ದರಿಂದ, ಸ್ವಪ್ರಕಾಶತ್ವದಿಂದ ಪ್ರಕಾಶಮಾನವಾದರೂ ಆತ್ಮಸ್ವರೂಪಕ್ಕೆ अज्ञानಅಜ್ಞಾನ ದ ಆವರಣ ಸಂಭವಿಸುತ್ತದೆ.

- ಪರಪಕ್ಷದವರ ಮೇಲಿನ ಪ್ರತಿಪಾದನೆಗೆ ನಮ್ಮ ಮತದಂತೆ ಉತ್ತರ ಹೀಗಿರುತ್ತದೆಃ

ಪರಪಕ್ಷದವರು ಕೂಡ "नास्ति, न प्रकाशते.." ಮುಂತಾದ ವ್ಯವಹಾರ ಸಿದ್ಧಿಸುವಗೋಸ್ಕರ, ಅಜ್ಞಾನದ ಆವರಣ ವನ್ನು ಅಂಗೀಕರಿಸಿರುತ್ತಾರೆ. ಅವರ ಮತದಲ್ಲಿ ಹೀಗೆ ಹೇಳಲಾಗುತ್ತದೆ, " नास्ति, न प्रकाशते इत्यादि व्यवहारालम्बन योग्यत्वस्य व्यवहार दर्शनाद् एव कल्प्यमानस्य" इति।

ಅದರಂತೆ, ಪ್ರಕಾಶಮಾನದಲ್ಲಿ, नास्ति, न प्रकाशते..ಇತ್ಯಾದಿ ವ್ಯವಹಾರ ಇರುವದಿಲ್ಲ ಅದ್ದರಿಂದ, ಇಲ್ಲಿ ಎಂತಹ ಅಜ್ಞಾನದ ಆವರಣವಿರುತ್ತದೆ? ಮತ್ತು ಅಜ್ಞಾತವಿದ್ದರೂ ಪ್ರಕಾಶಮಾನವಾಗುತ್ತದೆ ಯಾದರೆ, ಅಜ್ಞ ಪುರುಷನು, ಯಾವಪ್ರಕಾರದಿಂದ ತಿಳಿಯುವದಿಲ್ಲವೊ ಆ ಪ್ರಕಾರವಾಗಿ ವಿವರಿಸುವಂತಾಗಲಿ ಎಂದು ನಾವು ಅನ್ನುತ್ತೇವೆ.

ಇನ್ನು, अवच्छिन्न ಜ್ಞಾನವು अवच्छेदक ಜ್ಞಾನಪೂರ್ವಕತ್ವದ ನಿಯಮದಂತೆ, अज्ञानद ಪ್ರಕಾಶವಾಗುವಗೋಸ್ಕರ, ಅಜ್ಞಾತದ ಪ್ರಕಾಶತ್ವವನ್ನು ಹೇಳುವದು ಸರಿಯಲ್ಲ.

ಹೇಗೆ, ಬೇರೆಕಡೆ, अवच्छिन्न ಸತ್ಯಕ್ಕೆ, अवच्छेदक ಸತ್ಯಪೂರ್ವಕತ್ವದ, ನಿಯಮವಿದ್ದರೂ, ಆರೋಪಿತ ರೂಪ್ಯಾದಿ ಅಭಾವ ಸತ್ಯಕ್ಕೆ, ರೂಪ್ಯಾದಿಸತ್ಯಪೂರ್ವಕತ್ವದ ನಿಯಮವಿರುವದಿಲ್ಲ, ಅಲ್ಲಿ ಸತ್ಯಪೂರ್ವಕತ್ವರೂಪ್ಯಾದಿಯನ್ನು ಅಭಾವ ಸತ್ಯದಲ್ಲಿ ಹೇಳುವದು ಅಯೋಗ್ಯವನಿಸುತ್ತದೆ.

ಅದರಂತೆ, ಬೇರಕಡೆಯ अवच्छिन्न ಜ್ಞಾನಕ್ಕೆ, अवच्छेदक ಜ್ಞಾನ್ಪೂರ್ವಕತ್ವದ, ನಿಯಮವಿದ್ದರೂ, ಅಜ್ಞಾತ अवच्छिन्न ಅಜ್ಞಾನ ಜ್ಞಾನಕ್ಕೇ, ಅಜ್ಞಾತ ಜ್ಞಾನಪೂರ್ವಕತ್ವದ ನಿಯಮವಿರುವದಿಲ್ಲ. ಅಜ್ಞಾತದ ಜ್ಞಾನದಲ್ಲಿ ಅಜ್ಞಾನ ಜ್ಞಾನವನ್ನು ಹೇಳುವದೆ ಅಯೋಗವಾಗುತ್ತದೆ , ಎಂದು ಕಲ್ಪಿಸಬೇಕು.

ಅನ್ಯಥಾ, ಬೇರಕಡೆಯ, अवच्छेदक ಆವರಕ अज्ञान ನಿವೃತ್ತವಾದಗಲೇ अवच्छिन्न ಜ್ಞಾನನಿಯಮ ಕಾಣಬೇಕಾಗುತ್ತದೆ

ಅದರಂತೆ, ಪ್ರಕೃತದಲ್ಲಿ ಕೂಡ, ಅರ್ಥ अवच्छिन्न ಅಜ್ಞಾನ ಜ್ಞಾನಗೋಸ್ಕರ , अवच्छेदक ಅರ್ಥ ಆವರಕ ಅಜ್ಞಾನ ನಿವೃತ್ತಿಯನ್ನು ಅಂಗೀಕರಿಸಬೇಕಾಗುತ್ತದೆ. ಇದನ್ನೆ ನಾವು ಬೇರೆಕಡೆ ಹೀಗೆ ಹೇಳಿರುತ್ತೆವೆ:

मोहनार्थं अज्ञातज्ञानं अपि च कल्प्यते।
अज्ञाते मोहहानिश्च तदर्थं किं न कल्प्यते॥ इति.

## ॥न द्वितीयः, तत् अभावात् इति॥

ಇನ್ನು ಎರಡನೆಯದಂತೆ, अज्ञानಅಜ್ಞಾನವು

ಆತ್ಮಸ್ವರೂಪದ ವಿಶೇಷತೆಯನ್ನು ಆವರಿಸೋಣವೆಂದರೆ, ಅಲ್ಲಿ ವಿಶೇಷತೆಯೇ ಇರುವದಿಲ್ಲ.

ಅಂದರೆ, सविशेष अभिन्नस्य अभावात्।, ಸವಿಶೇಷ ಅಭಿನ್ನ ಆತ್ಮಸ್ವರೂಪದ ಅಭಾವತೆ ಇರುವಾಗ ಎಂದರ್ಥ.

ಅದನ್ನೇ ಶ್ರೀಮದಾಚಾರ್ಯರು विशेष अभावात् च ಎಂದು ಹೇಳಿದ್ದಾರೆ.

## ॥ तथा च इति॥

ಆದ್ದರಿಂದ ವ್ಯಾಪಕವೇ ಇಲ್ಲದಿರುವಾಗ ವಾಪ್ಯವಾದ ಅಜ್ಞಾನದ ಆವರಣ ಹೇಗೆ ಸಂಭವಿಸಲು ಸಾಧ್ಯ. ಆದ್ದರಿಂದ ಶ್ರೀಮದಾಚಾರ್ಯರು ಹೇಳತಾರೆ न अज्ञानं कस्यचित् आवरकम् ಎಂದು.

ಆದ್ದರಿಂದ ಅಜ್ಞಾನದ ಆವರಣವೆ ಸಂಭವಿಸಲು ಸಾಧ್ಯವಿಲ್ಲದಾಗ, ಶಾಸ್ತ್ರಕ್ಕೆ ಹೇಗೆ ಅದರ

ನಿವರ್ತನೆಯಲ್ಲಿ ಪ್ರಯೋಜನ ಉದ್ಭವಿಸುತ್ತದೆ?
ಆದ್ದರಿಂದ ಶಾಸ್ತ್ರಕ್ಕೆ ಬರುವ ಸಿದ್ಧಸಾಧನತಾದೋಷವನ್ನು ಪರಿಹರಿಸಲಾಗುವದಿಲ್ಲ.

**೪.೪.೨.೯ ವೇದಾದಿಶಾಸ್ತ್ರಗಳಿಗೆ ಸಿದ್ಧಸಾಧನತಾ ಒಪ್ಪಿದರೆ ಏನಾಗುತ್ತದೆ ಬಗ್ಗೆ ವಿಮರ್ಶೆಃ**

**टीका**

**अस्तु तर्हि सिद्धसानता शास्त्रस्य। को दोष इति चेत्। परार्थत्वात् शास्त्रस्य परसिद्धबोधने अनुपादेयत्वं स्यात् इत्येकः।**

ಹಾಗಾದರೆ, ಶಾಸ್ತ್ರಕ್ಕೆ ಸಿದ್ಧಸಾಧನತಾ ಇರಲಿ. ಅದರಿಂದ ಏನು ಮಹಾದೋಷ ಉಂಟಾಯಿತು? ನಿವೃತ್ತಿಪರವಾದ ಶಾಸ್ತ್ರಗಳು ಪರ ಸಿದ್ಧವಾದುದನ್ನು ಬೋಧಿಸಿದರೆ ಅವುಗಳಿಗೆ ಅನುಪಾದೇಯತ್ವ ದೋಷ ಬರುತ್ತದೆ ಅಂದರೆ ಅಂದರೆ ಅವೂಗಳು ಜ್ಞಾನಿಗಳಿಗೆ ಸ್ವೀಕಾರಾರ್ಹವಾಗುವದಿಲ್ಲ ಎಂದು ಕೆಲವರು ಹೇಳುತ್ತಾರೆ..

<u>**ಟಿಪ್ಪಣಿಗಳವಿಶೇಷ ವಿವರಣೆ**</u>

**॥ अस्तु तर्हि इति ॥**

ಶಾಸ್ತ್ರಕ್ಕೆ ಸಿದ್ಧಸಾಧನತಾ ಇರಲಿ. ಅದರಿಂದ ಏನು ಮಹಾದೋಷ ಉಂಟಾಯಿತು? ಧಾರಾವಾಹಿಕ ದ್ವಿತಿಯಾದಿ ಜ್ಞಾನದಂತೆ, ಶಾಸ್ತ್ರಗಳು ಸಿದ್ಧಬೋಧಕಗಳಾದರೂ, ಅಪ್ರಾಮಾಣ್ಯ ಆಗುವದಿಲ್ಲ ತಾನೆ.

**॥को दोष इति॥**

ಅಂದರೆ ಇದನ್ನು ಹೀಗೆ ಹೇಳಿದಂತಾಯಿತುಃ धारावाहिक द्वितीयादि ज्ञानवत् सिद्धबोधकत्वेऽपि प्रामाण्य उपपत्तेः, अप्रामाण्य प्रसंगरूप दोषो नास्ति इत्यर्थः।

ಅಂದರೆ ಧಾರಾವಾಹಿಕ ದ್ವಿತಿಯಾದಿ ಜ್ಞಾನಗಳಂತೆ, ಎರಡನೆ ಪ್ರಮಾಣಗಳಿಂದ ಸಿದ್ಧವಾದುದನ್ನು, ಶಾಸ್ತ್ರಗಳು ಬೊಧಿಸಿದರೂ ಅವುಗಳಿಗೆ ಪ್ರಾಮಾಣ್ಯ ಉಂಟಾಗಿ, ಅಪ್ರಾಮಾಣ್ಯ ಪ್ರಸಂಗರೂಪ ದೋಶಗಳು ಇರುವದಿಲ್ಲ ಎಂದರ್ಥ.

**॥परार्थत्वात् शास्त्रस्य इति॥**

ಇಲ್ಲಿ ಒಂದು ವಿಷಯ ಗಮನದಲ್ಲಿ ಇಟ್ಟುಕೊಳ್ಳಬೇಕು, ಶಾಸ್ತ್ರಗಳು, प्रत्यक्षादि ಗಳಂತೆ स्वार्थत्व ಪರ ಇರುವದಿಲ್ಲ. ಅವುಗಳು ನಿಯಮದಿಂದ परार्थ ಆಗಿರುತ್ತವೆ. ಅಂದರೆ पर प्रवृत्ति निवृत्ति उपयोगि अर्थप्रतिपादकत्वात्। ಇದರಂತೆ, ಶಾಸ್ತ್ರಗಳು, ಸಿದ್ಧಬೋಧಕಗಳಾದರೆ,

ಅವುಗಳಿಗೆ ಅಪ್ರಾಮಾಣ್ಯ ಪ್ರಸಂಗ ಒದಗದೆ ಇದ್ದರೂ, ಅವುಗಳಿಗೆ अनुपादेय प्रसंग ರೂಪ ದೋಷ ಉಂಟಾಗುತ್ತದೆ ಅಂದರೆ ಅವೂಗಳು ಜ್ಞಾನಿಗಳಿಗೆ ಸ್ವೀಕಾರಾರ್ಹವಾಗುವದಿಲ್ಲ ಎಂದು ಕೆಲವರು ಹೇಳುತ್ತಾರೆ.

## टीका

**अपरं च आह–**
ಮತ್ತೆ ಕೆಲವರು ಹೀಗೆ ಹೇಳುತ್ತಾರೆ

## मायावाखण्डनम्

## "अनधिगतार्थ गन्तृ प्रमाणम्" इति च तन्मतम्।

**ಜ್ಞಾನವಿಲ್ಲದ ವಸ್ತುವಿನ ಯಥಾರ್ಥ ಜ್ಞಾನ ಮಾಡಿಕೊಡುವ ಸಾಧನವೇ ಪ್ರಮಾಣ ಎಂದರ್ಥ. ಅಥವಾ ತಿಳಿಯದಿದ್ದ ವಸ್ತುವನ್ನು ಯಥಾರ್ಥವಾಗಿ ತಿಳಿಸುವ ಸಾಧನವೇ ಪ್ರಮಾಣ ಎಂದು ತಮ್ಮ ಮತವಾಗಿರುತ್ತದೆ.**

## टीका

**गन्तृशब्देन अवगति साधानं उच्यते। अनधिगत इति स्मृत्यादि व्युदासार्थम्। शुक्तिरजतादि ज्ञान निरासाय अर्थग्रहणम्। अर्थस्य च यथावस्थितत्स्य विवक्षितत्वात्। अर्थस्य फलस्य च निवृत्यर्थं गन्तृ पदम्। तस्य च साधनपरत्वात् न कर्तर्यिति प्रसंग:।**
**एतद् भाट्टानां प्रमाणलक्षणम्।"व्यवहारे भट्टनय:" इति मायावादिभि: अंगीकारात्, तन्मत्म् इत्युक्तम्। यदि शास्त्रं अधिगतं एव अर्थं अवगमयेत् तदा प्रमाणलक्षण अभावात् अप्रमाणं प्रसज्येत इति।**

ಮತ್ತೆ ಕೆಲವರು ಹೀಗೆ ಹೇಳುತ್ತಾರೆ. ಇಲ್ಲಿ गन्तृ ಪದವು ನಿಶ್ಚಿತ ಜ್ಞಾನ ಸಾಧನ ಪರವಾಗಿರುತ್ತದೆ ಎಂದು ಹೇಳಲಾಗುತ್ತಿದೆ. ಇಲ್ಲಿ अनधिगत ಎಂಬ ಪದವನ್ನು ಸ್ಮೃತ್ಯಾದಿಗಳಲ್ಲಿ ಅತಿವ್ಯಾಪ್ತಿಯನ್ನು ನಿವಾರಿಸಲು ಇಡಲಾಗಿದೆ. ಮತ್ತಿ ಶುಕ್ತಿರಜತಾದಿಗಳ ಜ್ಞಾನ ನಿರಾಕರಿಸಲು अर्थ ಪದವನ್ನು ಗ್ರಹಿಸಲಾಗಿದೆ. ಮತ್ತು अर्थ ಪದವು ಯಥಾವಸ್ಥಿತತ್ವವನ್ನು ವಿವಕ್ಷಿಸುತ್ತದೆ. ಇಲ್ಲಿ अर्थ ಪದದ ಫಲವನ್ನು ನಿರಾಕರಿಸಲು गन्तृ

ಪದವನ್ನು ಇಡಲಾಗಿದೆ. ಹಾಗೂ ಅದನ್ನು ಸಾಧನಪರತ್ವವಾಗಿ ಬಳಿಸಿದ್ದರಿಂದ ಪರಸ್ಪರ ಕರ್ತರಿ ಪ್ರಸಂಗ ಒದಗುವದಿಲ್ಲ.
ಇದು ಭಾಟ್ಟರ ಪ್ರಮಾಣದ ಲಕ್ಷಣವಾಗಿರುತ್ತದೆ. ಇನ್ನು "व्यवहारे भट्टनय:" ಎಂಬ ಉಕ್ತಿಯಂತೆ, ಮಾಯಾವಾದಿಗಳು ಕೂಡ ಈ ಲಕ್ಷಣವನ್ನು ಅಂಗೀಕರಿಸಿದ್ದರಿಂದ, ಶ್ರೀಮದಾಚಾರ್ಯರು "तन्मतम्" ಎಂದು ಹೇಳಿದ್ದಾರೆ. ಅಂದರೆ, ಒಂದು ವೇಳೆ ಶಾಸ್ತ್ರವು ತಿಳಿದಿದ್ದ ಅರ್ಥವನ್ನೇ ತಿಳಿಸುವದಾದರೆ, ಆಗ ಅದಕ್ಕೆ ಪ್ರಮಾಣದ ಲಕ್ಶಣ ಇಲ್ಲದಾಗಿ ಅದು ಅಪ್ರಮಾಣವಾಗಬೇಕಾಗುತ್ತದೆ.

## <u>ಟಿಪ್ಪಣಿಗಳವಿಶೇಷ ವಿವರಣೆ</u>

### ॥गन्तृशब्देन इति॥
अनधिगतार्थ गन्तृ प्रमाणम् ಎಂಬಲ್ಲಿ, गन्तृ ಪದವು अवगति साधनपरत्व ವಾಗಿರುತ್ತದೆ. ಅಂದರೆ, ನಿಶ್ಚಿತ ಜ್ಞಾನ ಸಾಧನ ಪರವಾಗಿರುತ್ತದೆ. ಅಂದರೆ, प्रमाण ದ ಲಕ್ಷಣ ಈ ಕೆಳಗಿನಂತೆ ಆಯಿತು:
अनधिगतार्थ अवगति साधनं प्रमाणम्।
<u>ಮೇಲಿನ ಉಕ್ತಿಯ दलकृत्य ಹೀಗಿರುತ್ತದೆ:</u>

### ॥ स्मृत्यादि व्युदासार्थम् इति॥
ಇಲ್ಲಿ अनधिगत ಪದವಿಲ್ಲದಿದ್ದಲ್ಲಿ, अवगति ಪದದಿಂದ स्मृत्यादि ಗಳನ್ನು ಗ್ರಹಿಸುವ ಸಾಧ್ಯತೆ ಇದೆ. ಹಾಗೆ ಅವುಗಳನ್ನು ಗ್ರಹಿಸಿದರೆ संस्कारादि ಗಳಲ್ಲಿ अतिव्याप्ति ಉಂಟಾಗುತ್ತದೆ. ಅದನ್ನು ತಡೆಯಲು, ಅಂದರೆ अवगति ಪದವು स्मृत्यादि ಗಳನ್ನು ಗ್ರಹಿಸಬಾರದು ಎಂಬ ಉದ್ದೇಶದಿಂದ, ಇಲ್ಲಿ अनधिगत ಪದವನ್ನು ಇಡಲಾಗಿದೆ. ಅಥವಾ, अवगति ಪದದಿಂದ "ज्ञातता" ಎಂದು ಹೇಳಲಾಗಿದೆ, ಇದರಿಂದ ಅದು स्मृत्यादि ಗಳಲ್ಲಿಯೂ व्याप्ति ಯನ್ನು ಪಡೆಯುತ್ತದೆ. ಇದನ್ನು ತಳ್ಳಿಹಾಕಲು अनधिगत ಪದವನ್ನು ಇಡಲಾಗಿದೆ.

### ॥शुक्तिरजतादि ज्ञान निरासाय इति॥
ಇಲ್ಲಿ अर्थ ಪದದಿಂದ यथार्थ (ಪರಮಾರ್ಥ ಸ್ತತ್ಯ) ವೇ ವಿವಕ್ಷಿತವಾಗಿದೆ. ಅದರಂತೆ, ಶುಕ್ತಿರಜತಾದಿಗಳ ಜ್ಞಾನವನ್ನು ನಿರಾಕರಿಸಲು अर्थ ಪದವನ್ನು ಇಡಲಾಗಿದೆ.

### ॥अर्थस्य फलस्य च निवृत्यर्थं इति॥
ಇಲ್ಲಿ ज्ञान ಅಥವಾ अवगति, (ಅಂದರೆ ತಿಳುವಳಿಕೆ) ಯು ಪ್ರಮಾಣದಿಂದ ಉಂಟಾಗುವ ಫಲರೂಪವಾದದ್ದರಿಂದ, ಅದನ್ನು गन्तृ ಪದದಿಂದ ವ್ಯವಚ್ಛೇದಿಸಲಾಗಿದೆ.

### ॥तस्य च इति॥
ಇನ್ನು गन्तृ ಪದದಿಂದ ज्ञान साधन ವಿವಕ್ಷಿತವಾಗಿರುವದರಿಂದ, साधन ಅಸಂಭವ ಎಂದು

ಹೇಳಲಾಗದು.

॥एतद् भाट्टानां इति॥

ಇದು ಭಾಟ್ಟರ ಪ್ರಮಾಣದ ಲಕ್ಷಣವಾಗಿರುತ್ತದೆ. "व्यवहारे भट्टनयः" ಎಂಬ ಉಕ್ತಿಯಂತೆ ಪರಪಕ್ಷದವರು, ಈ ಲಕ್ಷಣವನ್ನು ಅಂಗೀಕರಿಸಿರುವರು, ಎಂಬುದನ್ನು ತಿಳಿಸಲು, ಶ್ರೀಮದಾಚಾರ್ಯರು, तन्मतम् ಎಂಬ ಪದವನ್ನು ಪ್ರಯೋಗಿಸಿದ್ದಾರೆ.

॥यदि शास्त्रं इति॥

ಅದರಂತೆ ಶಾಸ್ತ್ರವು, ತಿಳಿದಿದ್ದ ವಿಷಯವನ್ನೆ ಗ್ರಹಿಸುವುದಾದರೆ ಅಂದರೆ ಸಿದ್ಧಬೋಧಕವಾದಲ್ಲಿ, ಅವುಗಳಿಗೆ ಭಾಟ್ಟರ ಪ್ರಮಾಣ ಲಕ್ಷಣದ ಅಭಾವತೆ ಉಂಟಾಗಿ ಅವು ಅಪ್ರಮಾಣಿಕಗಳಾಗುತ್ತವೆ ಅದರಿಂದ ಜ್ಞಾನಿಗಳಿಗೆ ಸ್ವೀಕಾರಾರ್ಹವಾಗುವದಿಲ್ಲ. ಮತ್ತು ಅವುಗಳಿಗೆ ಅಪಸಿದ್ಧಾಂತ ದೋಷಕೂಡ ಉಂಟಾಗುತ್ತದೆ. ಅಂದರೆ, ಪೂರ್ವಾಚಾರ್ಯರಿಂದ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು.

## *೪.೫ ವೇದಾದಿಶಾಸ್ತ್ರಗಳಿಗೆ: ಅನುಬಂಧಚತುಷ್ಟಯಗಳು ಲಭಿಸದ ಮೂಲಕ ಅನ್ಯಥಾಪ್ರತಿಪಾದಕತ್ವ*

### टीका

एवं अयथार्थपरत्वं अन्यथाप्रतिपादकत्वं इति अभिप्रेत्य उपपादितम्। अधुना विषयप्रयोजनादिरहितत्वं अन्यथाप्रतिपादकत्वं अभिप्रेत्य, तत् सिद्ध्यर्थं पराभिमतं शास्त्रस्य विषयादिकं परन्यायेन अपाकरोति।

ಈಗೀನ ವರೆಗೆ, ವೇದಾದಿಶಾಸ್ತ್ರಗಳು, ಜೀವ ಬ್ರಹ್ಮ ಐಕ್ಯವನ್ನು ಪ್ರತಿಪಾದಿಸಿದಲ್ಲಿ, ಅವು ಅಯಥಾರ್ಥ ಪ್ರತಿಪಾದಕಗಳಾಗುವದರಿಂದ, ಅವುಗಳಿಗೆ ಅನ್ಯಥಾಪ್ರತಿಪಾಕತ್ವವನ್ನು ಸಮರ್ಥಿಸಲಾಯಿತು.

ಈಗ ವೇದಾದಿಶಾಸ್ತ್ರಗಳು ಜೀವ ಬ್ರಹ್ಮ ಐಕ್ಯವನ್ನು ಪ್ರತಿಪಾದಿಸಿದಲ್ಲಿ, ಅವುಗಳಿಗೆ ವಿಷಯ ಪ್ರಯೋಜನಾದಿಗಳು ಲಭಿಸಲಾರದ್ದರಿಂದ ಅವು ಅನ್ಯಥಾಪ್ರತಿಪಾಕಗಳಾಗುತ್ತವೆ ಎಂದು ಅಭಿಪ್ರಾಯಪಟ್ಟು, ಅದರ ಸಿದ್ಧಿಗಾಗಿ ಪರ-ಅಭಿಮತ ಶಾಸ್ತ್ರಗಳ ವಿಷಯಾದಿಗಳನ್ನು ಪರನ್ಯಾಯದಿಂದಲೆ ಶ್ರೀಮದಾಚಾರ್ಯರು ತಿರಸ್ಕರಿಸುತ್ತಾರೆ.

### ಟಿಪ್ಪಣಿಗಳವಿಶೇಷ ವಿವರಣೆ

॥विषयप्रयोजनादिरहितत्वं अन्यथाप्रतिपादकत्वं अभिप्रेत्य इति॥

ಇಲ್ಲಿ ಶ್ರೀವ್ಯಾಸತೀರ್ಥರು, विषयप्रयोजनादिरहितत्वं अन्यथाप्रतिपादकत्वं ಎಂಬುದನ್ನು ಮೂರು ಬಗೆಯಿಂದ ವಿಮರ್ಶಿಸುತ್ತಾರೆ:

- लोके हि वैद्यशास्त्रादिकं सति विषयादौ कस्यचित अर्थस्य प्रतिपादकं दृष्टम्। इदं तु अन्यथाऽपि विषयादि अभावेऽपि प्रतिपादकं इत्येवं अन्यथाप्रतिपादकत्वात् इत्यनेन विषयादि अभावः अभिप्रेत इति द्रष्टव्यम्।

  ಅಂದರೆ, ಲೋಕದಲ್ಲಿ, ವೈದ್ಯಶಾಸ್ತ್ರಮುಂತಾದ ಶಾಸ್ತ್ರಗಳಿಗೆ, ವಿಷಯಾದಿಗಳು ಲಭಿಸಿದ್ದು, ಅವುಗಳು, ಆ ವಿಷಯಾದಿಗಳನ್ನ ಯಾವುದಾದರೊಂದು ಅರ್ಥದಲ್ಲಿ ಪ್ರತಿಪಾದಿಸುವದನ್ನು ಕಂಡಿರುತ್ತದೆ. ಇಲ್ಲಿ, अन्यथाऽपि ಅಂದರೆ ಅದ್ವೈತವನ್ನು ಪ್ರತಿಪಾದಿಸುವ ವೇದಾದಿಶಾಸ್ತ್ರಗಳಿಗೆ ವಿಷಯಾದಿಗಳ ಅಭಾವತೆ ಇದ್ದರೂ, ಅವುಗಳು ಅದ್ವೈತವನ್ನು ಪ್ರತಿಪಾದಿಸುತ್ತವೆ ಎಂದು ಹೇಳುವದು अन्यथाप्रतिपादकत्वात् ಎನಿಸುವದು, ಅದರಂತೆ ಇಲ್ಲಿ अन्यथाप्रतिपादकत्वात् ದಿಂದ ವಿಷಯಾದಿಗಳ ಅಭಾವತೆ ಅಭಿಪ್ರೇತವಾಗಿರುತ್ತದೆ ಎಂದು ತಿಳಿಯಬೇಕು.

- यद्वा, विषयादिरहितेऽपि तस्मिन् प्रेक्षावतां प्रवृत्ति सिद्धये सामान्यतो विषयादिकं अस्ति इति प्रतिपादकत्वात्, इत्येवं अन्यथाप्रतिपादकत्वात् इत्यनेन विषयादि अभावः अभिप्रेत इति द्रष्टव्यम्।

  ಅಂದರೆ, ಅಥವಾ, ಅದ್ವೈತವನ್ನು ಪ್ರತಿಪಾದಿಸುವ ವೇದಾದಿಶಾಸ್ತ್ರಗಳಿಗೆ ವಿಷಯಾದಿಗಳ ಅಭಾವತೆ ಇದ್ದರೂ, ಅವುಗಳಲ್ಲಿ ಜ್ಞಾನಿಗಳ ಪ್ರವೃತ್ತಿ ಸಿದ್ಧಿಸುವಗೋಸ್ಕರ, ಸಾಮಾನ್ಯವಾಗಿ ವಿಷಯಾದಿಗಳು ಇವೆ ಎಂದು ಪ್ರತಿಪಾದಿಸಲಾಗುತ್ತಿದೆ, ಅದು अन्यथाप्रतिपादकत्वात्. ಅದರಂತೆ ಇಲ್ಲಿ अन्यथाप्रतिपादकत्वात् ದಿಂದ ವಿಷಯಾದಿಗಳ ಅಭಾವತೆ ಅಭಿಪ್ರೇತವಾಗಿರುತ್ತದೆ ಎಂದು ತಿಳಿಯಬೇಕು.

- अन्ये तु अन्यथा, स्वप्रकाशत्वेन सिद्धप्रकारात् अन्येनप्रकारेण अप्रतिपाद्कत्वात् इत्येवं अन्यथाप्रतिपादकत्वात् इत्यनेन विषयादि अभावः अभिप्रेतः इति व्याचक्षते।

  ಅಂದರೆ, ಇನ್ನು ಕೆಲವರು, अन्यथा ಎಂದರೆ, ಸ್ವಪ್ರಕಾಶದಿಂದ ಸಿದ್ಧವಾದುದಕ್ಕಿಂತಲೂ ಅನ್ಯಪ್ರಕಾರದಿಂದ ಪ್ರತಿಪಾದಿಸಲು ಸಾಧ್ಯವಿಲ್ಲದ್ದು, ಅದು अप्रतिपाद्कत्वात् ಎಂದು ಹೇಳುತ್ತಾರೆ. ಅದರಂತೆ ಇಲ್ಲಿ अन्यथाप्रतिपादकत्वात् ದಿಂದ ವಿಷಯಾದಿಗಳ ಅಭಾವತೆ ಅಭಿಪ್ರೇತವಾಗಿರುತ್ತದೆ ಎಂದು ಗ್ರಹಿಸುತ್ತಾರೆ.

ಹೀಗೆ ವಿಷಯಾದಿ ಅಭಾವತೆಯ ಹಿನ್ನೆಲೆಯಲ್ಲಿ, ಶ್ರೀಮದಾಚಾರ್ಯರು ಪ್ರತಿಪಾದಿಸಿದ ದೂಷಣ ಅನುಮಾನವನ್ನು ಈ ಕೆಳಗಿನಂತೆ ಇಡಬಹುದು:

"विमतं अनारम्भणीयं निर्विषयत्वात्, स्फीतालोकमध्यस्थ् समनस्केन्द्रिय संयुक्त घटप्रतिपादकवाक्यवत्, निष्प्रयोजनत्वात्, काकदन्तपरीक्षाग्रन्थवत् च" इति प्रत्येकं हेतुत्वं द्रष्टव्यं।
ಆದರೆ, ಶ್ರೀಸತ್ಯನಾಥರಿಗೆ, अन्यथाप्रतिपादकत्वात् ಎಂಬ ಪದಕ್ಕೆ ಅಪ್ರತೀತವಾದ ವಿಷಯಾದಿರಾಹಿತ್ಯಪರ ಅರ್ಥ ಹೇಳುವದು ಅವರಿಗೆ ಮಾನ್ಯವಿರುವದಿಲ್ಲ. ಅದರಂತೆ, ಮೇಲಿನ ಟೀಕಾವಾಕ್ಯಗಳು प्रक्षिप्त ಎಂದರೆ ಬೆರೆಯವರು ಸೇರಿಸಿದ್ದ ವಾಕ್ಯಗಳು, ಟೀಕಾವಾಕ್ಯಗಳಲ್ಲ ಎಂದು ಅವರ ಪ್ರತಿಪಾದನೆಯಾಗಿರುತ್ತದೆ.

### ೪.೫.೧ ಅಜ್ಞಾನ ಅಸಂಭವವಾದ್ದರಿಂದ ವಿಷಯಾದಿಗಳ ಅಭಾವತೆ

ಈಗಾಗಲೆ ಮೇಲಿನ ಪರಿಚ್ಛೇದದಲ್ಲಿ ಪ್ರತಿಪಾದಿಸಿದಂತೆ, ವೇದಾದಿ ಶಾಸ್ತ್ರಗಳು, ಜೀವ ಬ್ರಹ್ಮ ಐಕ್ಯ ಪ್ರತಿಪಾದಿಸಿದಲ್ಲಿ, ಅಜ್ಞಾನವೇ ಸಿದ್ಧಿಸುವದಿಲ್ಲ. ಆದ್ದರಿಂದ ಶ್ರೀಮದಾಚಾರ್ಯರು ಹೇಳ್ತಾರೆ:

**मायावाखण्डनम्**

**अज्ञान असम्भवात् एव, तन्मतं अखिलं अपाकृतम्।**

**ತಮ್ಮ ಮತದಲ್ಲಿ ಅಜ್ಞಾನವೇ ಅಸಂಭವವಾದ್ದರಿಂದ, ತಾವು ವೇದಾದಿಶಾಸ್ತ್ರಗಳಿಗೆ ಹೇಳುವ ವಿಶಯಾದಿಗಳೆಲ್ಲವು ಅಲ್ಲಗೆಳೆದಂತಾಯಿತು**

**टीका**

**तन्मतं तत् अभिमतं, अखिलं विषयादिकं अपाकृतं वेदितव्यम्। कथम्? उक्तप्रकारेण एव, तन्मते अज्ञान असंभवात् विषयादेः च अज्ञान सापेक्षत्वात्। अज्ञातो हि विषयो भवति। अन्यथा अतिप्रसंगात् इति।**

ಇಲ್ಲಿ तन्मतम् ಎಂದರೆ ತಮ್ಮ ಅಭಿಮತ ಎಂದರ್ಥ. ಅಂದರೆ ತಾವು ವೇದಾದಿಶಾಸ್ತ್ರಗಳಿಗೆ ಪ್ರತಿಪಾದಿಸಿದ ವಿಷಯಾದಿಗಳು ನಿರಸ್ತವಾಗುತ್ತವೆ ಎಂದು ಅವಶ್ಯವಾಗಿ ತಿಳಿಯತಕ್ಕದ್ದು. ಅದು ಹೇಗೆಂದರೆ? ತಾವು ಹೇಳಿದ ಪ್ರಕಾರದಿಂದಲೇ ಎಂದರ್ಥ. ತಮ್ಮ ಮತದಲ್ಲಿ ಅಜ್ಞಾನ ಅಸಂಭವವಾದ್ದರಿಂದ, ಮತ್ತು ವಿಷಯಾದಿಗಳು ಅಜ್ಞಾನ ಸಾಪೇಕ್ಷವಾಗಿರುವದರಿಂದ,

ವಿಷಯಾದಿಗಳು ಲಭಿಸಲಾರವು ಎಂದರ್ಥ. ಅಜ್ಞಾತವಾದವುಗಳೆ ವಿಷಯವೆನಿಸುತ್ತವೆ, ಅನ್ಯಥಾ ಅತಿಪ್ರಸಂಗ ಒದಗುವದು.

## ಟಿಪ್ಪಣಿಗಳವಿಶೇಷ ವಿವರಣೆ

### ॥तन्मतं इति॥

तन्मतम् ಎಂದರೆ, ತಮ್ಮ(ಪರಪಕ್ಷ) ಅಭಿಮತದಂತೆ ಎಂದರ್ಥ. ತಾವು ವೇದಾದಿಶಾಸ್ತ್ರಗಳಿಗೆ ಪ್ರತಿಪಾದಿಸುವ, ಅನುಬಂಧಚತುಷ್ಟಯಗಳುಗಳು ನಿರಸ್ತವಾಗುತ್ತವೆ ಎಂದು ಅವಶ್ಯವಾಗಿ ತಿಳಿಯತಕ್ಕದ್ದು,

### ॥उक्तप्रकारेण एव इति॥

ಹೇಗೆಂದರೆ, ಹಿಂದಿನ ಪರಿಚ್ಛೇದದಲ್ಲಿ ವಿವರಿಸಿದಂತೆ, ಅಜ್ಞಾನದ ಆವರಣ, ಆವರಿಸುವ ವಸ್ತುವಿನಲ್ಲಿ ವ್ಯಾಪ್ತಿಯನ್ನು ಹೊಂದಿರುತ್ತದೆ. ಅದರಂತೆಯೇ ನಿಮ್ಮ ಮತದಲ್ಲಿ ಅಜ್ಞಾನವೇ ಅಸಂಭವ ಎನಿಸುವಾಗ ಮತ್ತು ವಿಶಯಾದಿಗಳು ಅಜ್ಞಾನದ ಸಾಪೇಕ್ಷವಾಗಿರುವದರಿಂದ, ತಮ್ಮ ಮತಕ್ಕೆ ಹೇಗೆತಾನೆ ವಿಶಯಾದಿಗಳು ಲಭಿಸುವವು. ಅಜ್ಞಾತವಾದ ವಸ್ತುವೆ ಶಾಸ್ತ್ರದ ವಿಷಯವಾಗುತ್ತದೆ. ಹಾಗೆ ಒಂದು ವೇಳೆ ಹೇಳದಿದ್ದರೆ ಅತಿಪ್ರಸಂಗವೆನಿಸುತ್ತದೆ.

ಇಲ್ಲಿ ಶ್ರೀಸತ್ಯನಾಥರು, "अज्ञान असम्भवात एव.." ಎಂಬ ಶ್ರೀಮದಾಚಾರ್ಯರ ವಾಕ್ಯಕ್ಕೆ अन्योन्याश्रय ದೋಷವನ್ನು ಶಂಕಿಸಿ, ಅದನ್ನು ಪರಿಹರಿಸುತ್ತ, ವಿಶೇಷವಾದ ವ್ಯಾಖ್ಯಾನವನ್ನು ಮಾಡುತ್ತಾರೆ ಅದು ಕೆಳಗಿನಂತಿದೆ:

ननु "अज्ञानं असम्भवात् तन्मतं अखिलं अपाकृतं" इति अयुक्तम्। अन्योन्याश्रयत्वात्। आव्रियमाणं हि विषय एव न अन्यत्। ततश्च विषय अभावात् अज्ञान अभावः। ततश्च विषय अभाव इति चेत् न। अज्ञानविषय अभावेन अज्ञान अभावं प्रसाध्य तेन शास्त्रविषयादि अभाव समर्थनात्। न हि ऐक्यस्य अज्ञानविषयत्व असम्भवात् शास्त्रविषयत्वं न सम्भवति, इत्युक्तौ अन्योन्याश्रय पसक्तिः अस्ति। येन तद्, उद्भावनं अनुचितं स्यात्।

ಅಂದರೆ, "ತಮ್ಮ ಮತದಲ್ಲಿ ಅಜ್ಞಾನವೇ ಅಸಂಭವವಾದ್ದರಿಂದ, ತಾವು ವೇದಾದಿಶಾಸ್ತ್ರಗಳಿಗೆ ಹೇಳುವ ವಿಶಯಾದಿಗಳೆಲ್ಲವು ಅಲ್ಲಗೆಳೆದಂತಾಯಿತು" ಎಂದು ಹೇಳುವದು ಅಯುಕ್ತವಾಗಿದೆ. ಏಕೆಂದರೆ ಇಲ್ಲಿ अन्योन्याश्रय ದೋಷ ಉಂಟಾಗುತ್ತದೆ. ಅದನ್ನು ಹೀಗೆ ವಿವರಿಸಬಹುದು. ಇಲ್ಲಿ, ಅಜ್ಞಾನದಿಂದ ಆವರಿಸುವ ವಸ್ತುವೆ ವಿಷಯವಾಗಿರುತ್ತದೆ ವಿನಹ ಮತ್ಯಾವದೂ ಅಲ್ಲ. ಅಲ್ಲಿ ವಿಷಯದ ಅಭಾವತೆ ಇದೆ, ಅದ್ದರಿಂದ ಅಲ್ಲಿ ಅಜ್ಞಾನದ ಅಭಾವತೆ ಇದೆ. ಮತ್ತು, ಅಜ್ಞಾನದ ಅಭಾವತೆಯಿರುವದರಿಂದ ವಿಷಯಾದಿಗಳ ಅಭಾವತೆ ಇದೆ.

ಹೀಗಾಗಿ ಅನ್ಯೊನ್ಯಾಶ್ರಯ ದೋಷ ಉಂಟಾಯಿತು.

ಇದರ ಸಮಾಧಾನ ಹೀಗಿರುತ್ತದೆ: ಇಲ್ಲಿ ಅಜ್ಞಾನ ವಿಷಯದ ಅಭಾವತೆಯಿಂದ ಅಜ್ಞಾನದ ಅಭಾವತೆಯನ್ನು ಸಾಧಿಸಿ, ಅದರಿಂದ ಪರಮತದವರು ವೇದಾದಿಶಾಸ್ತ್ರಗಳಿಗೆ ಪ್ರತಿಪಾದಿಸುವ ವಿಷಯಾದಿಗಳ ಅಭಾವತೆಯನ್ನು ಪ್ರತಿಪಾದಿಸಲಾಗಿದೆ. ಐಕ್ಯವು ಅಜ್ಞಾನದ ವಿಷಯವಾಗಲು ಅಸಂಭವವಾದ್ದರಿಂದ ಅದು ಶಾಸ್ತ್ರವಿಷಯವಾಗಲಾರದು. ಅದರಂತೆ, ಇಲ್ಲಿ ಅನ್ಯೋನ್ಯಾಶ್ರಯ ದೋಷಕ್ಕೆ ಆಸ್ಪದವೇ ಇರುವದಿಲ್ಲ ಎಂಬ ಭಾವವಿರುತ್ತದೆ.

**೪.೫.೨ प्राकारान्त ದಿಂದಲೂ ಶಾಸ್ತ್ರಗಳಿಗೆ ವಿಶಯಾದಿಗಳ ಅಭಾವತೆ**

## टीका

## एवं अज्ञान् असम्भवेन विषयं निराकृत्य, प्रकारान्तरेण निराचष्टे–

ಹೀಗೆ, अज्ञान ಅಸಂಭವವಾದುದರಿಂದ, ಶಾಸ್ತ್ರಗಳಿಗೆ ವಿಶಯಾದಿಗಳನ್ನು ನಿರಾಕರಿಸಿ, ಈಗ ಪ್ರಕಾರಾಂತದಿಂದಲೂ ಕೂಡ, ಶಾಸ್ತ್ರಗಳಿಗೆ ವಿಶಯಾದಿಗಳನ್ನು ನಿರಾಕರಿಸುತ್ತಾರೆ.

**ಟಿಪ್ಪಣಿಗಳವಿಶೇಷ ವಿವರಣೆ**

ಇಲ್ಲಿ ಶ್ರೀಸತ್ಯನಾಥರು, प्रकारान्तरेण निराचष्टे ಎಂಬುದು ಟೀಕಾವಾಕ್ಯ ವಿರುವದಿಲ್ಲ, ಅದು प्रक्षिप्तं ಅಂದರೆ ಈ ಪದಗಳು ಬೆರೆಯವರಿಂದ ಸೆರಿಸಿದ್ದು ಎಂದು ತಿಳಿಯಬೇಕು ಎಂತಿದ್ದಾರೆ. ಇಲ್ಲಿ ಕೂಡ, ಅಜ್ಞಾನದ ಅಸಂಭವತೆಯನ್ನು ಅವಲಂಬಿಸಿಯೆ ಶ್ರೀಮದಾಚಾರ್ಯರು ವಿಷಯಾದಿಗಳನ್ನು ನಿರಾಕರಿಸಿದ್ದರಿಂದ, ಇಲ್ಲಿ ಪ್ರಕಾರಾಂತರ ಇರುವದಿಲ್ಲ ಎಂಬ ಭಾವ ವಿರುತ್ತದೆ. ಅದರಂತೆ, ಶ್ರೀಸತ್ಯನಾಥರು, ಮೇಲಿನ ಟೀಕಾವಾಕ್ಯಪಾಠ ಕೆಳಗಿನಂತೆ ಪ್ರತಿಪಾದಿಸುತ್ತಾರೆ:

एवं अज्ञान् असम्भवेन विषयं निराकृत्य, दार्ढ्यात् पुन: विषयादीन् निराकरोति -

ಅಂದರೆ, ಈವರೆಗೆ ಪರಪಕ್ಷದಲ್ಲಿ, ಅಜ್ಞಾನ ಅಸಂಭವವಾದ್ದರಿಂದ ವಿಷಯಾದಿಗಳನ್ನು ನಿರಾಕರಿಸಿ, ಅದನ್ನೇ ಶಿಷ್ಯರಲ್ಲಿ ಮತ್ತಿಷ್ಟು ಮನವರಿಕೆ ಮಾಡಲು, ಪುನಃ ವಿಷಯಾದಿಗಳನ್ನು ನಿರಾಕರಿಸುತ್ತಾರೆ.

**೪.೫.೨.೧ ವೇದಾದಿಶಾಸ್ತ್ರಗಳಿಗೆ ವಿಷಯ ನಿರಾಕರಣೆ**

## मायावाखण्डनम्

## मिथ्यात्वे च ऐक्यस्य, अतत्त्वावेदकत्वं आगमस्य स्यात्।

ಅಲ್ಲದೆ, ಪರಪಕ್ಷದವರಂತೆ, ಐಕ್ಯವು, ಮಿಥ್ಯಾ ಎಂದೆ ಹೇಳಬೇಕಾದುದರಿಂದ ಅಂತಹ ಐಕ್ಯವನ್ನು ಪ್ರತಿಪಾದಿಸುವ ಶಾಸ್ತ್ರಗಳು ಅತತ್ವಾವೇದಕಗಳಾಗುತ್ತವೆ.

## टीका

ऐक्य हि शास्त्रस्य विषयतया परस्य अभिमतम्। तत् किम् आत्मस्वरूप अतिरिक्तं उत तन्मात्रं। आद्येऽपि सत्यं मिथ्या वा? न आद्यः। अद्वैतहानिप्रसंगात्। न द्वितीयः। ऐक्यस्य मिथ्यात्वे तत्प्रतिपादकस्य शास्त्रस्य अतत्वावेदकत्वं स्यात्। तथा च अपसिद्धान्तः स्यात्।

ಜೀವಬ್ರಹ್ಮ ಐಕ್ಯವೇ ವೇದಾದಿ ಶಾಸ್ತ್ರಗಳ ವಿಷಯವಾಗಿರುತ್ತವೆ ಎಂದು ಪರಮತದವರ ಅಭಿಮತವಾಗಿರುತ್ತದೆ. ಹಾಗಾದರೆ ಐಕ್ಯವು ಆತ್ಮಸ್ವರೂಪಕ್ಕಿಂತ ಅತಿರಿಕ್ತವಾದದ್ದೊ? ಅಥವ ಆತ್ಮಸ್ವರೂಪವೇನೊ? ಮೊದಲನೆಯದು ಅನ್ನುವುದಾದರೆ ಅದು ಸತ್ಯವೋ ಅಥವಾ ಮಿಥ್ಯಾನೊ? ಇಲ್ಲಿ ಮೊದಲನೆಯದ್ದು ಎಂದು ಹೇಳಲಾಗುವದಿಲ್ಲ ಅದರಿಂದ ಅದ್ವೈತದ ಹಾನಿಯಾಗುತ್ತದೆ. ಎರಡನೆಯದ್ದೂ ಸರಿಯೆನಿಸುವದಿಲ್ಲ. ಐಕ್ಯವು ಮಿಥ್ಯಾ ಆದರೆ, ಅದನ್ನು ಪ್ರತಿಪಾದಿಸುವ ಶಾಸ್ತ್ರಗಳು ಅತತ್ವವನ್ನು ತಿಳಿಸುವಂತಾಗಿ ಅತತ್ವಾವೇದಕತ್ವ ಎಂಬ ದೋಷಗ್ರಸ್ತವಾಗುತ್ತವೆ. ಹಾಗೂ ಅಪಸಿದ್ಧಾಂತ ದೋಷ ಕೂಡ ಬರುತ್ತದೆ.

## ಟಿಪ್ಪಣಿಗಳವಿಶೇಷ ವಿವರಣೆ

॥ऐक्य हि शास्त्रस्य इत्यादिना॥

ಜೀವಬ್ರಹ್ಮಐಕ್ಯವೇ ವೇದಾದಿಶಾಸ್ತ್ರಗಳ ವಿಷಯ ಎಂದು ಪರಮತದವರ ಅಭಿಮತವಾಗಿರುತ್ತದೆ. ಹಾಗಾದರೆ, ಜೀವಬ್ರಹ್ಮಐಕ್ಯವು ಆತ್ಮಸ್ವರೂಪಕ್ಕಿಂತ ಅತಿರಿಕ್ತವಾದದ್ದೊ? ಅಥವಾ ಆತ್ಮಸ್ವರೂಪವೇನೊ?

ಇನ್ನು ಮೊದಲ್ನೆ ಪಕ್ಷವನ್ನು ತೆಗೆದುಕೊಂಡರೆ, ಅದು ಸತ್ಯ ಅಥವಾ ಮಿಥ್ಯಾಆಗಿರಬೇಕು. ಇನ್ನು ಜೀವಬ್ರಹ್ಮ ಐಕ್ಯವು ಆತ್ಮಸ್ವರೂಪ ಕ್ಕಿಂತ ಅತಿರಿಕ್ತವಾದದ್ದು ಹಾಗೂ ಸತ್ಯಎಂದು ಹೇಳಿದರೆ ಅದ್ವೈತದ ಹಾನಿ ಯಾಗುತ್ತದೆ.

ಆದ್ದರಿಂದ ಜೀವಬ್ರಹ್ಮ ಐಕ್ಯವು ಆತ್ಮಸ್ವರೂಪ ಕ್ಕಿಂತ ಅತಿರಿಕ್ತವಾಗಿ ಮಿಥ್ಯಾ ಎಂದು ಹೇಳಬೇಕು. ಹಾಗೆ ಹೇಳಿದರೆ, ವೇದಾದಿ ಶಾಸ್ತ್ರಗಳು ಅತಾತ್ವಿಕ ವಿಷಯಗಳನ್ನು ತಿಳಿಸಿದಂತಾಗಿ, ಅವುಗಳಿಗೆ ಅತತ್ವಾವೇದಕತ್ವ ಉಂಟಾಗಿ, ಅಪ್ರಮಾಣಿಕಗಳಾಗುತ್ತವೆ.

॥तथा च इति॥

ಹಾಗೆಯೆ अपसिद्धान्त ದೋಷಕೂಡ ಬರುತ್ತದೆ. अपसिद्धान्त ಎಂದರೆ ತಮ್ಮ ಪಕ್ಷದಲ್ಲಿ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು.

ಇಲ್ಲಿ अपसिद्धान्त ದೋಷ ಹೇಗೆ ಉಂಟಾಗುತ್ತದೆ, ಎಂಬುದನ್ನು ಶ್ರೀಸತ್ಯನಾಥರು ಹೀಗೆ ವಿವರಿಸುತ್ತಾರೆ:

पूर्वाचार्येण ऐक्यं प्रतिपादकं शास्त्रं तत्त्व अवेदकं प्रमाणम्, ऐक्य अप्रतिपादकं अतत्वावेदकं प्रमाणं इति अंगीकारात् इति भाव:।

ಪರಪಕ್ಷದವರು ತಮ್ಮ ಪೂರ್ವಾಚಾರ್ಯರಿಂದ ಐಕ್ಯ ಪ್ರತಿಪಾದಕ ಶಾಸ್ತ್ರ, ತತ್ವ ತಿಳಿಸುವ ಪ್ರಮಾಣ ಎಂದು ಒಪ್ಪಿ, ಈಗ, ಅದೇ ಶಾಸ್ತ್ರವು ಅತಾತ್ವಿಕವಾದ ಐಕ್ಯವನ್ನು ಪ್ರತಿಪಾದಕವಾಗಲಾರದ್ದರಿಂದ ಪ್ರಮಾಣ ಎಂದು ಅಂಗೀಕರಿಸುವುದು अपसिद्धान्त ಎನಿಸುವದು.

## टीका

किंच्।

ಮತ್ತು

## मायावाखण्डनम्

सत्यता च भेदस्य।

ಮತ್ತು ಐಕ್ಯವು ಮಿಥ್ಯಾ ಆದರೆ, ಭೇದವು ಸತ್ಯವಾಗಬೇಕಾಗುತ್ತದೆ.

## टीका

परस्पर विरुद्धयो: अन्यतर निषेधस्य, अन्यतरविधिना व्याप्तत्वात्, ऐक्यस्य मिथ्यात्वे भेदस्य सत्यता च स्यात्। अत: ऐक्यं आत्मस्वरूपमेव इति अंगीकार्यम्। स्वरूपस्य च स्वप्रकाशत्वेन न विषयता सम्भवति इति।

ಪರಸ್ಪರ ವಿರುದ್ಧವಾದವುಗಳಲ್ಲಿ ಒಂದಿಲ್ಲೊಂದನ್ನು ನಿಷೇಧಿಸಿದಲ್ಲಿ ಒಂದಿಲ್ಲೊಂದು ವಿಧಿಯಿಂದ ವ್ಯಾಪ್ತಿಯನ್ನು ಪಡೆಯುವದರಿಂದ, ಐಕ್ಯವು ಮಿಥ್ಯಾ ಎನಿಸಿದಲ್ಲಿ ಭೇದವು ಸತ್ಯ ಎಂದು ಹೇಳಿದಂತಾಗುತ್ತದೆ. ಆದ್ದರಿಂದ ಐಕ್ಯವನ್ನು ಆತ್ಮಸ್ವರೂಪವೆಂದೆ ಅಂಗೀಕರಿಸಬೇಕು. ಇನ್ನು ಸ್ವರೂಪವು ಸ್ವಪ್ರಕಾಶವಾದುದರಿಂದ ಅಲ್ಲಿ ಯಾವ ವಿಷಯವು ಸಂಭವಿಸುವದಿಲ್ಲ.

## ಟಿಪ್ಪಣಿಗಳವಿಶೇಷ ವಿವರಣೆ

**॥परस्पर विरुद्धयोः इति॥**

ಪರಸ್ಪರ ವಿರುದ್ಧವಾದವುಗಳಲ್ಲಿ, ಒಂದನ್ನು ನಿಷೇಧಿಸಿದಲ್ಲಿ, ಮತ್ತೊಂದು ವಿಧಿಯಿಂದ ವ್ಯಾಪ್ತವಾಗುವದರಿಂದ, ಐಕ್ಯವು ಮಿಥ್ಯಾ ಎಂದು ಹೇಳಿದರೆ ಭೇದವು ಸತ್ಯವಾಗಿದೆ ಎಂದು ಹೇಳಿದಂತಾಗುತ್ತದೆ.

ಇಲ್ಲಿ ಶ್ರೀವ್ಯಾಸತೀರ್ಥರು, ಇದನ್ನು ಹೀಗೆ ವಿವರಿಸುತ್ತಾರೆ:

यत्र परस्पर विरुद्धयोः अन्यतरस्य मिथ्यात्वं तत्र अन्यतरस्य सत्यत्वम्। यथा ब्रह्मणि, दुःखात्मताया मिथ्यात्वेन आनन्दरूपतायाः सत्यत्वं इति सामान्य व्याप्तिः अस्ति इति। आनन्दात्मकतायाश्च असत्यत्वे मोक्षस्यपुरुषार्थत्वं "आनन्दो ब्रह्म" इत्यादि श्रुतेः अतत्त्ववेदकत्वं च स्यात इति भावः।

ಎಲ್ಲಿ ಪರಸ್ಪರ ವಿರುದ್ಧ ಧರ್ಮಗಳಲ್ಲಿ ಯಾವುದಾದರೊಂದು ಮಿಥ್ಯಾವಾದರೆ, ಅಲ್ಲಿ ಮತ್ತೋಂದು ಧರ್ಮ ಸತ್ಯವಾಗುತ್ತದೆ. ಉದಾಹರಣೆಗೆ: ಬ್ರಹ್ಮನಲ್ಲಿ, ದುಃಖಾದಿಗಳು ಮಿಥ್ಯಾ ಆಗಿರುವದರಿಂದ, ಅಲ್ಲಿ, ಆನಂದಾದಿಗಳು ಸತ್ಯವಾಗಿವೆ. ಆನಂದಾದಿ ಧರ್ಮಗಳು ಅಸತ್ಯ ಎಂದು ಹೇಳಲಾಗುವದಿಲ್ಲ, ಹಾಗಾದರೆ मोक्षस्यपुरुषार्थ ಹಾಗೂ "आनन्दो ब्रह्म" ಇತ್ಯಾದಿ ಶ್ರುತಿವಾಕ್ಯಗಳು ಅತಾತ್ವಿಕಗಳಾಗುತ್ತವೆ.

**॥ अतः ऐक्यं इति ॥**

ಆದ್ದರಿಂದ ಐಕ್ಯವನ್ನು ಆತ್ಮಸ್ವರೂಪವೆಂದೇ ಅಂಗೀಕರಿಸಬೇಕು. ಆದರೆ ಆತ್ಮಸ್ವರೂಪವು ಸ್ವಪ್ರಕಾಶವಾದುದರಿಂದ, ಅಲ್ಲಿ ಅಜ್ಞಾನದ ಅಭಾವತೆ ಇರುವದರಿಂದ ತಿಳಿಯದ ಯಾವ ವಿಷಯಾದಿಗಳು ಇರುವದಿಲ್ಲ. ಆದ್ದರಿಂದ ಯಾವ ವಿಷಯಾದಿಗಳು ಸಂಭವಿಸುವದಿಲ್ಲ ಎಂಬ ಭಾವವಿರುತ್ತದೆ.

## टीका

**पूर्वं अनतिरेकपक्ष प्रतिषेधेन, अतिरेक पक्षं अंगीकार्य, अयथार्थ प्रतिपादकत्वं समर्थितम्। इदानीं तु तद्विपर्येण विषयत्वं अभाव प्रतिपादनं इति भेदः।**

ಪೂರ್ವದಲ್ಲಿ ಶ್ರೀಮದಾಚಾರ್ಯರು, ಜೀವಬ್ರಹ್ಮಐಕ್ಯವುವು, ಆತ್ಮಸ್ವರೂಪ ವಾಗಲು ಸಾಧ್ಯವಿಲ್ಲೆಂದು, ಅದು ಆತ್ಮಸ್ವರೂಪ ಕ್ಕಿಂತಲೂ ಅತಿರಿಕ್ತವಾಗಿದೆ ಎಂದು ಅಂಗೀಕರಿಸಿ, ವೇದಾದಿಶಾಸ್ತ್ರಗಳಿಗೆ ಅಯಥಾರ್ಥ ಪ್ರತಿಪಾದಕತ್ವವನ್ನು ಸಮರ್ಥಿಸಿ ಅವುಗಳಿಗೆ ಅನ್ಯಥಾ

ಪ್ರತಿಪಾದಕತ್ವವನ್ನು ಪ್ರತಿಪಾದಿಸಿರುತ್ತಾರೆ.

ಈಗ, ಜೀವಬ್ರಹ್ಮಐಕ್ಯವುವು, ಬ್ರಹ್ಮವ್ಯತರಿಕ್ತವಾಗಲು ಸಾಧ್ಯವಿಲ್ಲೆಂದು, ಅದು ಆತ್ಮಸ್ವರೂಪವೇ ಆಗಿದೆ ಎಂಬುದನ್ನು ಅಂಗೀಕರಿಸಿ, ವೇದಾದಿ ಶಾಸ್ತ್ರಗಳಿಗೆ, ವಿಶಯಾದಿಗಳು ಲಭಿಸುವದಿಲ್ಲ ಎಂದು ಸಮರ್ಥಿಸಿ, ಅವುಗಳಿಗೆ ಅನ್ಯಥಾ ಪ್ರತಿಪಾದಕತ್ವವನ್ನು ಸಮರ್ಥಿಸುತ್ತಾರೆ.

## <u>ಟಿಪ್ಪಣಿಗಳವಿಶೇಷ ವಿವರಣೆ</u>

ಇಲ್ಲಿ, ಶ್ರೀವ್ಯಾಸತೀರ್ಥರು, ಶ್ರೀಮದಾಚಾರ್ಯರ ಪೂರ್ವ ಹಾಗೂ ಈಗಿನ ಪ್ರತಿಪಾದನೆಗಳಲ್ಲಿ ಪುನರುಕ್ತಿ ದೋಷವಿಲ್ಲ ಎಂಬುದನ್ನು ಹೀಗೆ ಪ್ರತಿಪಾದಿಸುತ್ತಾರೆಃ

<u>ಮೊದಲಿಗೆ ಪುನರುಕ್ತಿ ದೋಷವನ್ನು ಶಂಕಿಸುತ್ತಾರೆಃ</u>

ಶ್ರೀಮದಾಚಾರ್ಯರು ಪೂರ್ವದಲ್ಲಿ, ಐಕ್ಯವು ಬ್ರಹ್ಮಸ್ವರೂಪಕ್ಕಿಂತ ಅತಿರಿಕ್ತವೊ ಅಥವಾ ಅಭಿನ್ನ ವೊ? ಅತಿರಿಕ್ತವಾದಲ್ಲಿ ಮಿಥ್ಯಾ ಅಥವಾ ಸತ್ಯವೊ? ಇನ್ನು ಅಭಿನ್ನ ಪಕ್ಷದಲ್ಲಿಕೂಡ तन्मात्र ಎಂದರೆ ಬ್ರಹ್ಮಸ್ವರೂಪವೊ ಅಥವಾ तद्विशेष ಎಂದರೆ ಬ್ರಹ್ಮಸ್ವರೂಪದವಿಶೇಷವೊ? ಎಂಬ ಮುಂತಾದ ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟುಕೊಂಡು,

- ಐಕ್ಯವು ಸ್ವರೂಪಕ್ಕಿಂತ ಅತಿರಿಕ್ತ ಇದ್ದು ಮಿಥ್ಯಾ ಎಂಬ ಪಕ್ಷದಲ್ಲಿ, "न हि ब्रह्मात्मैक्यस्य.." ಎಂಬುದುರಿಂದ, ಶಾಸ್ತ್ರಗಳು ಹೇಗೆ ಅಯಥಾರ್ಥ ಪ್ರತಿಪಾದಕಗಳಗುತ್ತವೆ ಎಂದು ತೊರಿಸಿ.
- ಐಕ್ಯವು ಸ್ವರೂಪಕ್ಕಿಂತ ಅತಿರಿಕ್ತ ಆಗಿದ್ದು ಸತ್ಯ ಎಂಬ ಪಕ್ಷದಲ್ಲಿ "अद्वैतहाने: स्वरूपातिरेके" ಎಂಬುದರಿಂದ ಹೇಗೆ ಅದ್ವೈತದ ಹಾನಿಯಾಗುತ್ತದೆ ಎಂದು ಪ್ರತಿಪಾದಿಸಿ
- ಐಕ್ಯವು ಸ್ವರೂಪಕ್ಕಿಂತ ಅಭಿನ್ನ ಆಗಿದ್ದು तन्मात्र ಎಂಬ ಪಕ್ಷದಲ್ಲಿ "अनतिरेके स्वप्रकाशत्वात्" ಎಂಬುದರಿಂದ ಶಾಸ್ತ್ರಗಳಿಗೆ ಹೇಗೆ ಸಿದ್ಧಸಾಧನತಾ ದೋಷ ಉಂಟಾಗುತ್ತದೆ ಎಂದು ತಿಳಿಸಿ
- ಐಕ್ಯವು ಸ್ವರೂಪಕ್ಕಿಂತ ಅಭಿನ್ನ ಆಗಿದ್ದು तद्विशेष ಎಂಬ ಪಕ್ಷದಲ್ಲಿ "निर्विशेषत्वात् आत्मन:.."ಎಂಬುದರಿಂದ ಹೇಗೆ अपसिद्धान्त ದೋಷಬರುತ್ತದೆ ತೊರಿಸಿ

ಐಕ್ಯವನ್ನು ಈತೆರನಾಗಿ ದೂಶಿಸಿದ್ದಾರೆ.

ಈಗ, ಮೇಲಿನ ವಿಕೆಲ್ಪಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು

- ಐಕ್ಯವು ಸ್ವರೂಪಕ್ಕಿಂತ ಅತಿರಿಕ್ತ ಆಗಿದ್ದು ಸತ್ಯ ಎಂಬ ಪಕ್ಷದಲ್ಲಿ, ಪೂರ್ವದಲ್ಲಿ

ಹೇಳಿದ ಅದ್ವೈತದ ಹಾನಿಯನ್ನು ಹೊರಗಿನಿಂದಲೆ ಅಭಿಪ್ರೆತಿಸಿ

- ಐಕ್ಯವು ಸ್ವರೂಪಕ್ಕಿಂತ ಅಭಿನ್ನ ಆಗಿದ್ದು तन्मात्र ಎಂಬ ಪಕ್ಷದಲ್ಲಿ ಕೂಡ, ಪೂರ್ವದಲ್ಲಿ ಹೇಳಿದ ಸಿದ್ಧಸಾಧನತಾದೋಷವನ್ನು ಹೊರಗಿನಿಂದಲೆ ಅಭಿಪ್ರೆತಿಸಿ
- ಐಕ್ಯವು ಸ್ವರೂಪಕ್ಕಿಂತ ಅಭಿನ್ನಆಗಿದ್ದು तद्विशेष ಎಂಬ ಪಕ್ಷದಲ್ಲಿ ಕೂಡ, ಪೂರ್ವದಲ್ಲಿ ಹೇಳಿದ अपसिद्धान्त ದೋಷವನ್ನು ಹೊರಗಿನಿಂದಲೆ ಅಭಿಪ್ರೆತಿಸಿ
- ಐಕ್ಯವು ಸ್ವರೂಪಕ್ಕಿಂತ ಅತಿರಿಕ್ತ ಇದ್ದು ಮಿಥ್ಯಾಎಂಬ ಪಕ್ಷದಲ್ಲಿ "मिथ्यात्वे च ऐक्यस्य.." ಎಂಬುದರಿಂದ ಆಗಮಗಳಿಗೆ ಅತತ್ವಾವೇದಕತ್ವ ಪ್ರಸಂಗವನ್ನು ಹೇಳಿ,

ಐಕ್ಯವುವನ್ನು ಈತೆರನಾಗಿ ದೂಶಿಸಿದ್ದಾರೆ.

ಇಲ್ಲಿ, ಆಗಮಗಳಿಗೆ ಅತತ್ವಾವೇದಕತ್ವವೆಂದರೆ ಶಾಸ್ತ್ರಗಳು ಅಯಥಾರ್ಥವನ್ನೇ ಪ್ರತಿಪಾದಿಸಿದಂತಾಯಿತು. ಅದರಂತೆ ದೂಷಣಪ್ರಕಾರದಲ್ಲಿ ಯಾವ ಭೆದವು ಕಾಣುವದಿಲ್ಲ. ಆದ್ದರಿಂದ पुनरुक्ति ದೋಷವಿದೆ.

<u>पुनरुक्ति ದೋಷದ ನಿವಾರಣೆ ಹೀಗಿರುತ್ತದೆ:</u>

पूर्वं, अन्यथाप्रतिपादकत्वं अयथार्थप्रतिपाद्कत्वं इति विवक्षितत्वात्, तत् सिद्ध्यर्थं, अनतिरेकपक्षं अतिरेकेऽपि सत्यत्वपक्षं दूषयित्वा, अतिरिक्तं मिथ्या इति पक्षं च परिशेष्य, अयथार्थप्रतिपादकत्वस्य असिद्धिः परिहृता।

ಅಂದರೆ, ಪೂರ್ವದಲ್ಲಿ ಶ್ರೀಮದಾಚಾರ್ಯರು ಅನ್ಯಥಾಪ್ರತಿಪಾದಕತ್ವ ಅಂದರೆ ಅಯಥಾರ್ಥ ಪ್ರತಿಪಾದಕತ್ವಎಂದು ವಿವಕ್ಷಿಸಿ, ಅದರ ಸಿದ್ಧಿಗೊಸ್ಕರ, अनतिरेक ಅಂದರೆ ಅಭಿನ್ನಪಕ್ಷ, ಅತಿರೇಕವಿದ್ದು ಕೂಡ ಸತ್ಯತ್ವ ಪಕ್ಷವನ್ನು ದೂಷಿಸಿ, ಅತಿರಿಕ್ತವಿದ್ದು ಮಿಥ್ಯಾ ಪಕ್ಷವನ್ನು ಉಳಿಸಿಕೊಂಡು, ಅದರಿಂದ ಅಯಥಾರ್ಥ ಪ್ರತಿಪಾದಕತ್ವದ ಅಸಿದ್ಧಿಯನ್ನು ಪರಿಹರಿಸಿದರು.

इदानीं तु विषयादिराहित्यं अन्यथाप्रतिपाद्कत्वं अभिप्रेत्य तत् सिद्ध्यर्थं अतिरिक्तं इति पक्षं, अनतिरिक्तत्वेऽपि तद्विशेषत्व पक्षं च दूष्यित्वा, तन्मात्रत्व पक्षं च परिशेष्य विषयादिशून्यस्य असिद्धिः परिहृता।

ಈಗ ವಿಷಯಾದಿರಾಹಿತ್ಯ ಅಂದರೆ ಅನ್ಯಥಾಪ್ರತಿಪಾದಕತ್ವ ಎಂದು ಅಭಿಪ್ರಾಯಪಟ್ಟು, ಅದರ ಸಿದ್ಧಿಗೊಸ್ಕರ, ಅತಿರಿಕ್ತ ಪಕ್ಷ, ಅತಿರಿಕ್ತವಲ್ಲದ್ದು तद्विशेष ಪಕ್ಷವನ್ನು ದೂಷಿಸಿ, तन्मात्रत्व ಪಕ್ಷವನ್ನು ಉಳಿಸಿಕೊಂಡು, ಅದರಿಂದ विषयादिशून्यद ಅಸಿದ್ಧಿ ಯನ್ನು ಪರಿಹರಿಸುತ್ತಾರೆ.

तेन पर्यवसानभेदेन फलभेदात् अपुनरुक्तिः इत्यर्थः।

ಅಂದರೆ, ಇದರಿಂದ ಪರ್ಯವಸಾನ ಭೇದದಿಂದ ಫಲದಲ್ಲಿ ಭೇದ ಉಂಟಾಗುವದರಿಂದ

पुनरुक्ति ದೋಷಕ್ಕೆ ಆಸ್ಪದವಿರುವದಿಲ್ಲ ಎಂದರ್ಥ.
ಈತರಹದ ಪೂರ್ವ ಹಾಗೂ ಈಗಿನ ವಿಮರ್ಶೆಯ ಭೇದವನ್ನು ಅಭ್ಯರ್ಥಿಗಳು ವಿಶೇಶವಾಗಿ ತಿಳಿಯತಕ್ಕದು.

**೪.೫.೨.೨ ವೇದಾದಿಶಾಸ್ತ್ರಗಳ ಪ್ರಯೋಜನದ ನಿರಾಕರಣೆ**

टीका

एवं विषयं निराकृत्य प्रयोजनं निराकरोति-

ಹೀಗೆ ವೇದಾದಿಶಾಸ್ತ್ರಗಳಿಗೆ ವಿಷಯವನ್ನು ನಿರಾಕರಿಸಿ, ಈಗ ಪ್ರಯೋಜನವನ್ನು ನಿರಾಕರಿಸುತ್ತಾರೆ.

मायावाखण्डनम्
एवमेव प्रयोजनम् अपि निरस्तम्।

ಅಜ್ಞಾನವು ಇಲ್ಲದಿರುವದರಿಂದಲೇ ಶಾಸ್ತ್ರಗಳಿಗೆ ಪ್ರಯೋಜನವು ಕೂಡ ಇಲ್ಲವೆಂದಗುತ್ತದೆ.

टीका

यथा अज्ञान असंभवात् अज्ञातस्य विषयस्य असंभव:, अद्वैतवादे एवमेव अज्ञान असंभवात् एव शास्त्रस्य प्रयोजनमपि निरस्तं वेदितव्यं।
मोक्षो हि प्रयोजनम्। स च अज्ञाननिवृत्तिरूप:। यत् आह "अविद्यास्तमयो मोक्षः सा संसार उदाहृत:" इति। न च अज्ञान असंभवे तत् निवृत्ति: उपपद्यते। ननु एतत् "अज्ञान् असभवाद् एव" इत्यनेन एव वाक्येन सिद्धम्। तत् किमर्थ: अयं ग्रन्थ:। सत्यं, तथापि तस्यैव प्रपंच: इति अदोष:। प्रपंचनं च प्रकारान्तरेण प्रयोजननिरास प्रस्तावाय इति, आत्मैव अज्ञान हानि: इति पक्षनिरास:।

ಅಜ್ಞಾನ ಅಸಂಭವವೆನಿಸಿದಾಗ ಅಜ್ಞಾತ ವಾದ ವಿಷಯಕೂಡ ಅಸಂಭವವಾಗುವದು. ಆದ್ದರಿಂದ ಅದ್ವೈತ ವಾದದಲ್ಲಿ ಅಜ್ಞಾನ ದ ಅಸಂಭವತೆ ಇಂದಲೇ ವೇದಾದಿ ಶಾಸ್ತ್ರಗಳ ಪ್ರಯೋಜನ ಕೂಡ ನಿರಾಕರಿಸಿದಂತಾಯಿತು ಎಂದು ಅವಶ್ಯವಾಗಿ ತಿಳಿಯಬೇಕು.
ವೇದಾದಿ ಶಾಸ್ತ್ರಗಳಿಗೆ ಮೋಕ್ಷವೆ ಪ್ರಯೋಜನವಾಗಿರುತ್ತದೆ. ಅದು ಅಜ್ಞಾನ ನಿವೃತ್ತಿರೂಪ

ಉಳ್ಳದ್ದಾಗಿರುತ್ತದೆ. "अविद्यास्तमयो मोक्षः सा संसार उदहृतः" ಎಂಬ ಉಕ್ತಿಯಂತೆ, ಮೋಕ್ಷಕ್ಕೆ ಕಾರಣವಾದ ತತ್ವವು ಈ ಅವಿದ್ಯೆಯಿಂದ ಮರೆಯಾಗಿರುವದರಿಂದ, ಈ ಸಂಸಾರ ಬಂಧನವಾಗುತದೆ. ಇನ್ನು ಅಜ್ಞಾನ ಅಸಂಭವವೆನಿಸಿದಾಗ, ಅದರ ನಿವೃತ್ತಿ ಆಗುವುದು ಹೇಗೆ?

ಇದೆಲ್ಲವೂ "अज्ञान असम्भवात् एव" ಎಂಬ ವಾಕ್ಯದಿಂದ ಸಿದ್ಧಿಸುತ್ತಿರಲು, ಇಲ್ಲಿ ಅದನ್ನೆ ಮತ್ತೆ ವಿಸ್ತಾರವಾಗಿ ಹೇಳಿದ್ದು ಏಕೆ? ಎಂದು ಸಹಜವಾಗಿ ಪ್ರಶ್ನೆ ಮೂಡಬಹುದು. ಈ ವಿಸ್ತಾರವು ಮುಂದೆ, ಪ್ರಕಾರಾಂತರದಿಂದ ಮಾಡುವ ಪ್ರಯೋಜನದ ನಿರಸನದ ಪ್ರಸ್ತಾವದ ಹಿನ್ನೆಲೆಯಲ್ಲಿ ಪ್ರಸ್ಥಾಪಿಸಲಾಗಿದೆ. ಹಾಗೂ ಈ ನಿರೂಪಣೆಯಿಂದ, आत्मैव अज्ञानहानिः (ಅಜ್ಞಾನ ನಾಶವೇ ಆತ್ಮಸ್ವರೂಪ ಎಂದರ್ಥ) ಎಂಬ ಪಕ್ಷದ ನಿರಸನ ಕೂಡ ಮಾಡಲಾಗಿದೆ ಎಂದು ತಿಳಿಯಬೇಕು.

### ೪.೫.೨.೩ ವೇದಾದಿಶಾಸ್ತ್ರಗಳ ಪ್ರಕಾರಾಂತರದಿಂದ ಪ್ರಯೋಜನದ ನಿರಾಕರಣೆ

टीका

प्रकारान्तरेण प्रयोजनं निराकरोति–

ಈಗ ಪ್ರಕಾರಾಂತರದಿಂದಲೂ ಪ್ರಯೊಜನವನ್ನು ನಿರಾಕರಿಸುತಾರೆ.

मायावाखण्डनम्

स्वरूपत्वात् मोक्षस्य पूर्वमेव सिद्धत्वात्।

ಅದಲ್ಲದೆ ಅಜ್ಞಾನನಾಶವೆಂಬ ಮೋಕ್ಷವು ಆತ್ಮಸ್ವರೂಪವೇ ಆಗಿದೆ, ಆತ್ಮಸ್ವರೂಪವು ಶಾಸ್ತ್ರಾಧ್ಯಯನಕ್ಕಿಂತ ಮೊದಲೇ ಸಿದ್ಧವಾದುದರಿಂದ ಮೋಕ್ಷವೆಂಬ ಪ್ರಯೋಜನವು ಸಿದ್ಧವಾಗಿದೆ. ಆದ್ದರಿಂದ ಮೋಕ್ಷವು ಶಾಸ್ತ್ರಾಧ್ಯನದಿಂದ ದೊರಕುವ ಫಲವಾಗಲಾರದು.

टीका

प्रयोजनं निरस्तं इति सम्बन्धः। अज्ञाननिवृत्तिलक्षणो हि मोक्षः परेण आत्मस्वरूपतया एव इष्टः। यथा आह "आत्मैव अज्ञानहानिः" इति। आत्मस्वरूपं च प्राक् एव शास्त्रप्रवृत्तेः सिद्धं एव इति कथं तत प्रयोजनं

स्यात्। न हि कश्चित् सिद्धस्य साधनाय यतते। नापि तत् साधनार्हम्।

ಇಲ್ಲಿ ಪ್ರಯೊಜನವನ್ನು ನಿರಾಕರಿಸಲಾಯಿತು ಎಂದು ಸಂಬಂಧವಿರುತ್ತದೆ. ಅಜ್ಞಾನನಿವೃತ್ತಿ ಲಕ್ಷಣವೇ ಮೋಕ್ಷ ಅದರಿಂದಲೇ ಆತ್ಮಸ್ವರೂಪದ ಜ್ಞಾನವಾಗುತ್ತದೆ ಎಂದು ಅವರ ಮತ. ಅದರಂತೆಯೆ "आत्मैव अज्ञान् हानि:" ಎಂದು ಹೇಳುತ್ತಾರೆ. ಮತ್ತು ಇಲ್ಲಿ ಆತ್ಮಸ್ವರೂಪವು ಶಾಸ್ತ್ರ ಪ್ರವೃತ್ತವಾಗುವ ಮುಂಚೆಯೆ ಸಿದ್ಧವಾಗಿರುತ್ತದೆ. ಆದ್ದರಿಂದ ಅದರಲ್ಲಿ ಶಾಸ್ತ್ರಕ್ಕೆ ಏನು ಪ್ರಯೋಜನ್? ಯಾರೂ ಸಿದ್ಧವಾದುದನ್ನು ಸಾಧಿಸಲು ಯತ್ನಿಸುವದಿಲ್ಲ. ಮತ್ತು ಅದು ಸಾಧನಾರ್ಹವೂ ಅಲ್ಲ.

**ಟಿಪ್ಪಣಿಗಳವಿಶೇಷ ವಿವರಣೆ**

॥न हि कश्चित् इति॥

ಯಾರೂ ಸಿದ್ಧವಾದ ವಸ್ತುವನ್ನು ಸಾಧಿಸಲು ಯತ್ನಿಸುವದಿಲ್ಲ.

ಇದನ್ನೆ ಶ್ರೀವ್ಯಾಸತೀರ್ಥರು ಹೀಗೆ ಪ್ರತಿಪಾದಿಸುತ್ತಾರೆ:

ಅಸಿದ್ಧವಾದುದನ್ನು ಸಿದ್ಧಿಸುವದೇ ಪ್ರಯೊಜನವೆನಿಸುತ್ತದೆ. ಸಿದ್ಧವಾದುದನ್ನೆ ಸಿದ್ಧಿಸುವಗೊಸ್ಕರ ಜ್ಞಾನಿಗಳು ಪ್ರಯತ್ನ ಪಡುವದು ಯೋಗ್ಯವೆನಿಸುವದಿಲ್ಲ. ಅದರಂತೆ ಇಲ್ಲಿ, ಮೋಕ್ಷವನ್ನು ಬಯಸುವ ಜ್ಞಾನಿಗಳಿಗೆ, ಮೋಕ್ಷದಸಿದ್ಧಿಗಾಗಿ ಶಾಸ್ತ ಶ್ರವಣಾದಿಗಳಡೆಗಿನ ಪ್ರವೃತ್ತಿ ಅಯುಕ್ತವೆನಿಸುತ್ತದೆ. ಇದರ ಹಿನ್ನೆಲೆಯಲ್ಲಿ ಈ ಟೀಕಾವಾಕ್ಯ ವಿರುತ್ತದೆ.

॥नापि तत् साधनार्हम् इति॥

ಅದು ಸಾಧನರ್ಹವೂ ಅಲ್ಲ.

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

प्राक् अभावप्रतियोगिन एव उत्पादन अपरपर्याय साधनार्हत्वात्। न सिद्धस्य ब्रह्मण: साधनार्हत्वमस्ति इतुक्तं इति भेद:।

ಅಂದರೆ, ಹಿಂದಿನ ಅಭಾತೆಯ ಪ್ರತಿಯೋಗಿಯ ಉತ್ಪಾದನಪರ ಪರ್ಯಾಯವೆ, ಸಾಧನಾರ್ಹವಾಗಿರುತ್ತದೆ. ಅದರಂತೆ ಸಿದ್ಧನಾದ ಬ್ರಹ್ಮನನ್ನು ಸಾಧಿಸುವದರಲ್ಲಿ, ಅವನು ಸಾಧನಾರ್ಹನು ಅಗುವದಿಲ್ಲ. ಎಂದು ಈ ಟೀಕಾವಾಕ್ಯ ಹೇಳುತ್ತದೆ.

ಮೊದಲಿನ ಟೀಕಾವಾಕ್ಯವು, ಜ್ಞಾನಿಗಳಿಗೆ ಶಾಸ್ತ್ರಶ್ರವಣಾದಿಗಳಲ್ಲಿ ಅಪ್ರವೃತ್ತಿಯನ್ನು ತೊರಿಸಿದರೆ, ಈ ಟಾಕಾವಾಕ್ಯವು ಬ್ರಹ್ಮನು ಸಾಧನಾರ್ಹನು ಆಗುವದಿಲ್ಲ ಎಂದು ಎತ್ತಿ ತೋರಿಸುತ್ತದೆ. ಈ ಭೇದವನ್ನು ಶ್ರೊತೃಗಳು ಅವಶ್ಯವಾಗಿ ತಿಳಿಯಬೇಕು

- "ज्ञात आत्मैव अज्ञानहानि: न आत्ममात्रम्" ಎಂಬ ಮತದ ವಿಮರ್ಶೆ:

## टीका

**"ज्ञात आत्मैव अज्ञानहानिः न आत्ममात्रम्" इति कश्चित्। तत् असत्। आत्मनो ज्ञानकर्मता अनंगीकारात्। वृत्तिविषयता अस्ति इति चेत्। तथापि वृत्तिविशिष्ट आत्मा मोक्ष इतुक्तं स्यात्। तथा च वृत्तिनिवृत्तौ मोक्षनिवृत्ति प्रसंगः। वृत्ति उपलक्षित आत्मा मोक्ष इति चेत्, तथापि जीवन्मुक्तौ प्रसंग इत्येषा दिक्।**

ಅಜ್ಞಾನ ನಾಶದಿಂದ ಕೇವಲ ಆತ್ಮಸ್ವರೂಪವಲ್ಲ, ಆತ್ಮಜ್ಞಾನಕೂಡ ಆಗುತ್ತದೆ ಎಂದು ಕೆಲವರ ಮತವಾಗಿರುತ್ತದೆ. ಆದರೆ ಅದು ಅಸತ್ಯವಾಗಿದೆ. ಏಕೆಂದರೆ ಪ್ರತಿಪಕ್ಷದವರು ಆತ್ಮನಲ್ಲಿ ಜ್ಞಾನಕರ್ಮಗಳನ್ನು ಅಂಗೀಕರಿಸಿರುವದಿಲ್ಲ. ಅಲ್ಲ ವೃತ್ತಿವಿಷಯಗಳು ಆತ್ಮನಲ್ಲಿ ಇವೆ ಎನ್ನುತ್ತೇವೆ ಎಂದರೆ. ಹಾಗಾದರೆ, ವೃತ್ತಿವಿಶಿಷ್ಟ ಆತ್ಮಾ ಮೋಕ್ಷವೆಂದಂತಾಯಿತು. ಅದರಂತೆ, ವೃತ್ತಿ ನಿವೃತ್ತಿ ಹೊಂದಿದಾಗ ಮೋಕ್ಷದ ವಿವೃತ್ತಿ ಪ್ರಸಂಗ ಉಂಟಾಗುವದು.

ಹಾಗಾದರೆ, ವೃತ್ತಿರೂಪ ವ್ಯಾವರ್ತಕವು ಅಂದರೆ ವಿಶೇಷಣವು ಉಪಲಕ್ಷಣವಾಗಲಿ. ಅದರಂತೆ ವೃತ್ತಿ ಉಪಲಕ್ಷಿತ ಆತ್ಮಾ ಮೋಕ್ಷವಾಗುತ್ತದೆ ಎಂದರೆ, ಅದರಂತೆ ಜೀವನ್ಮುಕ್ತ ಅವಸ್ಥೆಯಲ್ಲಿ ಕೂಡ ಅಜ್ಞಾನ ನಿವೃತ್ತಿರೂಪ ಮೋಕ್ಷ ಪ್ರಸಂಗ ಉಂಟಾಗುವದು.

### ಟಿಪ್ಪಣಿಗಳವಿಶೇಷ ವಿವರಣೆ

**॥ज्ञात आत्मैव अज्ञानहानिः इति॥**

ಅಜ್ಞಾನ ನಾಶದಿಂದ ಕೇವಲ ಆತ್ಮಸ್ವರೂಪವಲ್ಲ, ಆತ್ಮಜ್ಞಾನವೂ ಕೂಡ ಆಗುತ್ತದೆ" ಎಂದು ಕೆಲವರು ಹೇಳುತ್ತಾರೆ.

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಅಂದರೆ ಅಜ್ಞಾನ ನಿವೃತ್ತಿಯಿಂದ ಕೇವಲ ಆತ್ಮಸ್ವರೂಪವಲ್ಲ , ज्ञात आत्मा ಅಂದರೆ ಆತ್ಮಜ್ಞಾನ ಲಭ್ಯವಾಗುತ್ತದೆ. ಈ ಆತ್ಮಜ್ಞಾನವು ಮೊದಲೆ ಸಿದ್ಧವಾಗಿರುವದಿಲ್ಲ. ಈ ಆತ್ಮಜ್ಞಾನವನ್ನು ಬೊಧಿಸಲು ಶಾಸ್ತ್ರಗಳು ಪ್ರವೃತ್ತವಾಗಿವೆ. ಅದಕ್ಕೆ ಶಾಸ್ತ್ರಕ್ಕೆ ಪ್ರಯೋಜನವಿದೆ ಎಂದು ಕೆಲವರ ಅಭಿಪ್ರಾಯ ವಿರುತ್ತದೆ. ಆದರೆ ಹೀಗೆ ಹೇಳುವದು ಸರಿಯಲ್ಲ.

**॥आत्मनो ज्ञान इति॥**

ಏಕೆಂದರೆ आत्म ನಲ್ಲಿ ಯಾವದೇ ತರಹದ ಜ್ಞಾನ ಕರ್ಮತಾ ಪರರು ಅಂಗೀಕರಿಸಿಲ್ಲ.

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಇನ್ನು ಲಭ್ಯವಾದ ज्ञात आत्मा (ಆತ್ಮಜ್ಞಾನ), चिद्रूपज्ञानविषयत्व ಆಗಿರುತ್ತದೋ ಅಥವಾ

वृत्तिरूपज्ञानविषयत्व ವೋ? ಎಂದು ವಿಕಲ್ಪಿಸಿ, ಟೀಕಾಕೃತ್ಪದರು ಮೊದಲನೆಯ ವಿಕಲ್ಪವನ್ನು ಇಲ್ಲಿ ತಳ್ಳಿಹಾಕುತ್ತಾರೆ.

ಏಕೆಂದರೆ आत्म (ಆತ್ಮಸ್ವರೂಪ) ನಲ್ಲಿ ज्ञानकर्म ಗಳನ್ನು ಪರಮತದವರಿಗೆ ಒಪ್ಪಿಗೆ ಇರುವದಿಲ್ಲ. ಅಂದರೆ ವೃತ್ತಿ ಪ್ರತಿಬಿಂಬಿತ ಚೈತನ್ಯ ಅಭಿವ್ಯಕ್ತ ಅಧಿಷ್ಠಾನದಿಂದ ಕೂಡಿದ ಚೈತನ್ಯರೂಪ ಜ್ಞಾನ ವಿಷಯತ್ವವು ಕರ್ತೃಕರ್ಮನ್ನೊಳಗೊಂಡದ್ದರಿಂದ, ಅದನ್ನು आत्म (ಆತ್ಮಸ್ವರೂಪ) ನಲ್ಲಿ ಪರರು ಅಂಗೀಕರೀಸಿರುವದಿಲ್ಲ

॥ वृत्ति इति॥

ಆದ್ದರಿಂದ वृत्तिरूपज्ञानविषयत्व (ಅಂದರೆ वेदान्तजन्य वृत्तिरूपज्ञानविषयता ಎಂದರ್ಥ) ಇದೆ ಎಂದು ಹೇಳಬೇಕು.

ಅದರಂತೆ वृत्तिविषयता ಇದೆ, ಅದನ್ನೆ ಶಾಸ್ತ್ರಗಳು ಪ್ರತಿಪಾದಿಸುತ್ತವೆ ಎನ್ನುತ್ತೇವೆ ಎಂದರೆ,

ಅದರಂತೆ ज्ञात घट: ಎಂಬಲ್ಲಿ ಇರುವಂತೆ, ज्ञात आत्मा ಎಂಬಲ್ಲಿ ವಿಷಯತ್ವದಿಂದ आत्मसम्बद्ध ಜ್ಞಾನವು, ಅಜ್ಞಾತ ಪದಾರ್ಥವಾದ ಆತ್ಮ ನನ್ನು ವ್ಯಾವರ್ತಿಸುತ್ತದೆ (ಪ್ರತ್ಯೇಕಿಸುತ್ತದೆ) ಎಂದು ಅಂಗೀಕರಿಸಬೇಕು.

॥तथापि इति॥

ಇನ್ನು ಈ ವೃತ್ತಿರೂಪ ವ್ಯಾವರ್ತಕ (वृत्तिरूप व्यावर्तक) ವು, ವಿಶೇಷಣ(विशेषण) ವೊ ಅಥವಾ ಉಪಲಕ್ಷಣ (उपलक्षण)ವೊ?

ಇಲ್ಲಿ ಮೊದಲನೆಯದನ್ನು ತೆಗೆದುಕೊಂಡರೆ,

ಆಗ वृत्तिविशिष्ट आत्मा अज्ञान निवृत्ति रूपो मोक्षः ಅಂದರೆ ವೃತ್ತಿ ವಿಶಿಷ್ಟ ಆತ್ಮಾ, ಅಜ್ಞಾನ ನಿವೃತ್ತಿರೂಪ ಮೋಕ್ಷ ಎಂದಂತಾಯಿತು.

॥तथा च इति॥

ಈತರಹ ವೃತ್ತಿ ವಿಶಿಷ್ಟ ಆತ್ಮಾ, ಅಜ್ಞಾನ ನಿವೃತ್ತಿರೂಪ ಮೋಕ್ಷ ಎಂದು ಒಪ್ಪಿದರೆ ಅದರಿಂದ ವೃತ್ತಿ ನಿವೃತ್ತಿ ಹೊಂದಿದಲ್ಲಿ ಮೋಕ್ಷ ನಿವೃತ್ತಿ ಪ್ರಸಂಗ ಒದಗುತ್ತದೆ.

ಇನ್ನು ವಿಶೇಷಣ ನಿವೃತ್ತಿ ಹೊಂದಿದಲ್ಲಿ ವಿಶಿಷ್ಟವೂ ನಿವೃತ್ತವಾಗುತ್ತದೆ ಎಂಬ ನಿಯಮದಂತೆ, ವಿಶೇಷಣೆಭೂತ ವೃತ್ತಿ ನಿವೃತ್ತವಾದಲ್ಲಿ, वृत्तिविशिष्ट आत्म ರೂಪವಾದ अज्ञानहानि ಎಂಬ ಮೋಕ್ಷವು ನಿವೃತ್ತಿ ಹೊಂದಬೇಕು.

॥वृत्ति उपलक्षित आत्मा इति॥

ಹಾಗಾದರೆ वृत्तिरूप व्यावर्तक ವು उपलक्षण ವಾಗಲಿ ಎಂದರೆ, वृत्तिउपलक्षित आत्मा अज्ञान निवृत्तिरूप मोक्षः ಎಂದಂತಾಯಿತು. ಇಲ್ಲಿ उपलक्षण ನಿವೃತ್ತವಾದಲ್ಲಿ, उपलक्षित ನಿವೃತ್ತ

ಹೊಂದುವದಿಲ್ಲ. ಉದಾಃ ಪಾಕ ಕ್ರಿಯಾ ನಿವೃತ್ತವಾದರೂ, ಅಡಿಗೆ ಮಾಡುವವನು ತನ್ನ ವೃತ್ತಿಯನ್ನು ಮುಂದುವರೆಸವುದನ್ನು ಕಾಣುವಂತೆ. (पाकक्रिया निवृत्तौ अपि पाचक अनुवृत्ति दर्शनात्।).
ಇದನ್ನೇ ಶಾಸ್ತ್ರ ಪರಿಭಾಷೆಯಲ್ಲಿ ಹೀಗೆ ಹೇಳಬಹುದುಃ
निवृत्तिरात्मामोहस्य ज्ञातत्वेन उपलक्षितः। उपलक्षण हाऽनेपि स्यान्मुक्तिः पाचकादिवत्।
ಆದ್ದರಿಂದ ಇಲ್ಲಿ ಯಾವ ದೋಷಕ್ಕೆ ಆಸ್ಪದವಿರುವದಿಲ್ಲ

## ॥ तथापि इति॥

ವೃತ್ತಿउपलक्षित ದಿಂದ ಮೇಲಿನ ದೋಷಬರದಿದ್ದರೂ, जीवन्मुक्तौ अज्ञान निवृत्तिरूप मोक्षप्रसंग इत्यर्थः। ಅಂದರೆ, ಜೀವನ್ಮುಕ್ತ ಅವಸ್ಥೆಯಲ್ಲಿ, ಅಜ್ಞಾನ ನಿವೃತ್ತಿ ಮೋಕ್ಷ ಪ್ರಸಂಗ ಉಂಟಾಗುತ್ತದೆ. ಹಾಗಾದರೆ ಇಲ್ಲಿ ಯಾವ ದೋಷ ಉಂಟಾಯಿತು? ಅದನ್ನೆ ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆಃ

ಮೇಲೆ ಹೇಳಿದಂತೆ, वृत्तिउपलक्षित आत्मा अज्ञान निवृत्तिरूप मोक्षः ಎಂದು ಅಂಗೀಕರಿಸಿದರೆ, ಜೀವನ್ಮುಕ್ತ ಯಲ್ಲಿ अज्ञान् निवृत्ति ರೂಪ ಮೊಕ್ಷ ಪ್ರಸಂಗ ಉಂಟಾಗುವದು.
ಆದರೆ जीवन्मुक्तावस्था ದಲ್ಲಿ (तत्त्वविषयक अपरोक्षवृत्तेः सत्त्वात्।) ತತ್ತ್ವವಿಷಯಕ ಅಪರೋಕ್ಷ ವೃತ್ತಿಯೂ ಸತ್ಯವಾಗಿರುತ್ತದೆ. ಆದ್ದರಿಂದ ಜೀವನ್ಮುಕ್ತಿ ಅವಸ್ಥೆಯನ್ನು ಹೀಗೆ ಹೇಳಲಾಗಿದೆ "उत्पन्नात्मवबोधस्य जीवन्मुक्तिः प्रसिद्धयति". ಅಂದರೆ, ಜೀವನ್ಮುಕ್ತ ಅವಸ್ಥೆಯಲ್ಲಿ ಯಾವದೇ ತರಹದ चेष्टापत्ति ಇರುವದಿಲ್ಲ. ಜೀವನ್ಮುಕ್ತನಿಗೆ ಅಜ್ಞಾನದ ಅನುವೃತ್ತಿಯ ಅಭಾವತೆಯಿಂದ, ಸ್ವದೇಹಾದಿ ಜಗತ್ತಿನ ಆಭಾಸದ ಅಭಾವತೆ ಇರುವದರಿಂದ, ಅವನಿಗೆ ಭಿಕ್ಷಾಟನಾದಿ ಪ್ರವೃತ್ತಿ ಇರುವದು ತುಂಬ ಅಸಂಗತವಾಗಿದೆ ಎಂಬ ಭಾವ ವಿರುತ್ತದೆ.

ಜೀವನ್ಮುಕ್ತನಿಗೆ ಶರೀರಾದಿ ಪ್ರತಿಭಾಸ ದರ್ಶನದಿಂದ निश्शेष अविद्या निवृत्ति, ಆಗದೆ ಇದ್ದರೂ, ಪ್ರಪಂಚವು ಪರಮಾರ್ಥಸತ್ಯವಾಗಿದೆ ಎಂಬ ಭ್ರಮ ಹೇತು ಅವಿದ್ಯಾಕಾರ ನಿವರ್ತನೆ ಯಾಗಿರುತ್ತದೆ, ಆದ್ದರಿಂದ ಅದು ಪರಪಕ್ಷದವರಿಗೆ इष्टापत्ति ಆದಂತೆ ಆಗುತ್ತದಲ್ಲ ಎಂಬ ಶಂಕೆಯ ಪರಿಹಾರವನ್ನು ಟೀಕಾದಲ್ಲಿಯ दिक् ಶಬ್ದವು ಸೂಚಿಸುತ್ತದೆ.
ಇಲ್ಲಿ ಮೇಲಿನ ಶಂಕೆಯ ಪರಿಹಾರ ಹೀಗಿರುತ್ತದೆಃ

निश्शेष अविद्या निवृत्ति ಯು ಜೀವನ್ಮುಕ್ತ ಅವಸ್ಥೆಯಲ್ಲಿ ಬಂದೇ ಬರುತ್ತದೆ. ಅದು ಕೂಡ वृत्ति उपलक्षित ಆತ್ಮಸ್ವರೂಪವಾದ್ದರಿಂದ, ಅದು ಜೀವನ್ಮುಕ್ತ ಅವಸ್ಥೆಯಲ್ಲಿ ಕೂಡ ಇರಲೇಬೇಕು. ಹಾಗಾದರೆ, प्रारब्धकर्म विनाश विशिष्टो वृत्ति उपलक्षित आत्मा अज्ञान नाशः, ಅಂದರೆ ಪ್ರಾರಬ್ಧಕರ್ಮವಿನಾಶ ವಿಶಿಷ್ಟ, ವೃತ್ತಿ ಉಪಲಕ್ಷಿತ ಆತ್ಮಾ, ಅಜ್ಞಾನ ನಾಶ ರೂಪ ಮೋಕ್ಷ

ಎಂದೆನ್ನುತ್ತೆವೆ ಎಂದರೆ, ಹಾಗು ಕೂಡ ಅನ್ನಲು ಬರುವದಿಲ್ಲ. ಜೀವನ್ಮುಕ್ತ ಅವಸ್ಥೆಯಲ್ಲಿ प्रारब्धकर्म विनाश विशिष्ट आत्मा ಇರುತ್ತದೆಂದು ಹೇಳಲಿಕ್ಕೆ ಆಗುವದಿಲ್ಲ. ಹಾಗೆನಾದರು ಒಪ್ಪಿದರೆ, प्रारब्धकर्म ಗಳು ಸತ್ಯವಾಗಬೇಕಾಗುತ್ತವೆ. ಹಾಗೆ ಹೇಳಿದರೆ, वृत्ति उपलक्षित ವನ್ನು ಗ್ರಹಿಸುವದು ವ್ಯರ್ಥವಾಗುತ್ತದೆ. ಹಾಗೂ, प्रारब्धकर्म विनाश विशिष्ट आत्मा ಪೂರ್ವದಲ್ಲಿ ಸಿದ್ಧವಾಗಿಲ್ಲಾದ್ದರಿಂದ ಸಾಧನರ್ಹವಾದರೂ, ಅದರ ಸಾಧ್ಯತ್ವದ ಅಸಂಗತ ದೋಷವನ್ನು कर्म विनाश विशिष्ट ಗ್ರಹಣದಿಂದಲೇ ನಿವಾರಿಸಿದ್ದರಿಂದ, वृत्ति उपलक्षित ಪದವು ಪ್ರಯೊಜನವಿಲ್ಲದ್ದಾಗುತ್ತದೆ.

ಮತ್ತು, प्रारब्धकर्म विनाश ವನ್ನು ಮಿಥ್ಯಾಎಂದರೆ, ಅದರ ನಿವೃತ್ತಿಯನ್ನು ಅವಶ್ಯವಾಗಿ ಒಪ್ಪಲೇಬೇಕಾಗುತ್ತದೆ.. ಆದ್ದರಿಂದ प्रारब्धकर्म ಮರುಕಳಿಸುವ ಪ್ರಸಂಗ ಉಂಟಾಗುತ್ತದೆ. ಇನ್ನು प्रारब्धकर्म विनाश ಸತ್ಯ ಎಂದು ಒಪ್ಪಿದರೆ ಅದ್ವೈತದ ಹಾನಿಯಾಗುತ್ತದೆ.

ಇನ್ನು, ಬ್ರಹ್ಮಸ್ವರೂಪವಾದ ಜೀವನ್ಮುಕ್ತಿಯಲ್ಲಿಯೂ, ಮೇಲಿನ ಪ್ರಸಂಗ ಉಂಟಾಗುತ್ತದೆ. ಇಲ್ಲಿ वृत्ति उपलक्षित ದಿಂದ, ಮತ್ತೆ ಮರುಕಳಿಸಬಾರದ वृत्ति उपलक्षितत्व ವಿವಕ್ಷಿತವಾಗಿರುವದಿಲ್ಲ ಆದ್ದರಿಂದ ಈ ರೀತಿಯ ಪ್ರಸಂಗ ಜೀವನ್ಮುಕ್ತಿ ಅವಸ್ಥೆಯಲ್ಲಿ ಒದಗುವದಿಲ್ಲ ಎಂದರೆ. ಆಗ, ವೃತ್ತಿಗಳು ಮರುಕಳಿಸುತ್ತವೆ ಎಂದು ಅಂಗೀಕರಿಸಬೇಕು. ಹೀಗೆ ಅಂಗಿಕರಿಸಿದರೆ, ಜೀವನ್ಮುಕ್ತನ ಸುಷುಪ್ತಿ ಅವಸ್ಥೆಯಲ್ಲಿ, ವೃತ್ತಿಯ ಅಭಾವತೆಯಿಂದ निश्शेष अविद्या निवृत्ति ಆಗುವ ಪ್ರಸಂಗವದಗುತ್ತದೆ

- ಅಜ್ಞಾನಹಾನಿರೂಪ ಮೋಕ್ಷವು ಆತ್ಮಸ್ವರೂಪಕ್ಕಿಂತ ಬೇರೆಯಾಗಿದೆ ಎಂಬ ಮತದ ವಿಮರ್ಶೆ:

## टीका

**अपर आह, न अविद्यास्तमय लक्षणं मोक्षं आत्मस्वरूपं आचक्ष्महे। किम् नाम। अन्यमेव। न च वाच्यं , तस्य सत्त्वे अद्वैत हानि:, असत्त्वे तत् अभाव:, सदसत्त्वं विरुद्धं, सदसद्विलक्षणत्वे अज्ञाननिवृत्तित्व अनुपपत्ति:, प्रतियोगि तन्निवृत्त्यो: वैलक्षणस्य अवश्यकत्वात् इति। पंचमप्रकारता अभ्युपगमात्। यथा उक्तं:**

**न सन्नासन्न सदसन्नानिर्वाच्यश्च तत्क्षय:।**
**यक्षानुरूपो बलिरित्याचार्य प्रत्यपीदन्॥ इति।**

ಮತ್ತೆ ಕೆಲವರು ಹೀಗೆ ಹೇಳುತ್ತಾರೆ: ಅಜ್ಞಾನಹಾನಿರೂಪ ಮೋಕ್ಷವು ಆತ್ಮಸ್ವರೂಪವೆಂದು ನಾವು ಪ್ರತಿಪಾದಿಸುವದಿಲ್ಲ. ಅದು ಆತ್ಮಸ್ವರೂಪಕ್ಕಿಂತ ಬೇರೆಯೆ ಆಗಿರುತ್ತದೆ ಎಂದೆನ್ನುತ್ತೇವೆ. ಹಾಗೆಹೇಳಲಾಗುವದಿಲ್ಲ. ಆಗ, ಅದನ್ನು ಸತ್ಯ ಎಂದರೆ ಅದ್ವೈತದ ಹಾನಿಯಾಗುತ್ತದೆ; ಅದನ್ನು ಅಸತ್ಯವೆಂದರೆ ಮೋಕ್ಷವೇ ಇಲ್ಲದಾಗುತ್ತದೆ; ಅದನ್ನು ಸದಸತ್ವ ಎಂದೆನ್ನಲಾಗುವದಿಲ್ಲ ವಿರೋಧ ಉಂಟಾಗುತ್ತದೆ; ಇನ್ನು ಸದಸದ್ವಿಲಕ್ಷಣತ್ವವೆಂದೆನ್ನ ಬೇಕೆಂದರೆ ಅಜ್ಞಾನ ನಿವೃತ್ತಿತ್ವವನ್ನು ಸಮರ್ಥಿಸಲು ಆಗುವದಿಲ್ಲ. ಏಕೆಂದರೆ, ಪ್ರತಿಯೋಗಿ ಮತ್ತು ಅದರ ನಿವೃತ್ತಿ ಗಳಲ್ಲಿ ವೈಲಕ್ಷಣ್ಯ ಆವಶ್ಯಕವಾಗಿರುತ್ತದೆ. ಅದರಂತೆ ಮೋಕ್ಷವನ್ನು ಪಂಚಮಪ್ರಕಾರದ್ದು ಎಂದು ಒಪ್ಪಬೇಕಾಗುತ್ತದೆ. ಇದನ್ನೆ ವಿವರಿಸುವ ಪೂರ್ವಾಚಾರ್ಯರು ಹೇಳಿದ್ದನ್ನು ಟೀಕಾಕೃತ್ಪಾದರು "न सन्नासन्न.....प्रत्यपीदन्" ಎಂದು ನಮೂದಿಸುತ್ತಿದ್ದಾರೆ.

## <u>ಟಿಪ್ಪಣಿಗಳವಿಶೇಷ ವಿವರಣೆ</u>

**॥अपर आह इति॥**

ಇನ್ನು ಮತ್ತೆ ಕೆಲವರು ಹೀಗೆ ಹೇಳುತ್ತಾರೆ: ಅಜ್ಞಾನಹಾನಿರೂಪ ಮೋಕ್ಷವು ಆತ್ಮಸ್ವರೂಪವೆಂದು ನಾವು ಹೇಳುವದಿಲ್ಲ. ಆ ಅಜ್ಞಾನಹಾನಿರೂಪ ಮೋಕ್ಷವು ಆತ್ಮಸ್ವರೂಪಕ್ಕಿಂತ ಬೇರೆಯೆ ಇರುತ್ತದೆ ಎಂದು ಹೇಳುತ್ತೆವೆ.

ಇದನ್ನೆ ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಈಗಿನವರೆಗೆ, "आत्मैव अज्ञान हानि:"ಎಂಬ इष्टसिद्धिकारादि ಮತಾನುಸಾರಿ तत्त्वप्रदीपिकारादि ಮತವನ್ನು ದೂಷಿಸಿ, "सा आत्मातिरिक्त: पंचमप्रकारो मोक्ष:" ಎಂಬ आनन्दबोधादि ಮತವನ್ನು ದೂಷಣಮೂಲಕ "अज्ञान असम्भवाद् एव चतुर्थप्रकार अभावात्" ಎಂಬ ಶ್ರೀಮದಾಚಾರ್ಯರ ಮೂಲವಾಕ್ಯವನ್ನು ವಾಖ್ಯಾನಿಸಲು ಆ ಮತವನ್ನು ಆಶಂಕಿಸುತ್ತಾರೆ.

**॥न च वाच्यं इति॥**

ಇನ್ನು ಆತ್ಮಸ್ವರೂಪಕ್ಕಿಂತ ಬೇರೆಯಾದ ಮೋಕ್ಷ ಸತ್ಯವಾದರೆ, ಅದ್ವೈತದ ಹಾನಿಯಾಗುತ್ತದೆ. ಇನ್ನು ಅಸತ್ಯವಾದರೆ ಮೋಕ್ಷದ ಅಭಾವತೆ ಉಂಟಾಗುತ್ತದೆ. ಇನ್ನು, ಅದನ್ನು ಸದಸತ್ವ ಎಂದು ಹೇಳಲಾಗದು, ಏಕೆಂದರೆ, ಸತ್ಯ ಮತ್ತು ಅಸತ್ಯ ಮೋಕ್ಷಗಳು ಪರಸ್ಪರ ವಿರುದ್ಧ ಧರ್ಮಗಳನ್ನು ಹೊಂದಿರುತ್ತವೆ. ಆದ್ದರಿಂದ, ಸದಸದ್ವಿಲಕ್ಷಣ ಎಂದು ಹೇಳೋಣವೆಂದರೆ, ಅಜ್ಞಾನ ವನ್ನು ಸದಸದ್ವಿಲಕ್ಷಣ ಎಂದು ಪರಪಕ್ಷದವರು ಒಪ್ಪಿಕೊಂಡಿದ್ದಾರೆ. ಹೀಗಾಗಿ,

ಅಜ್ಞಾನ ಅಜ್ಞಾನನಿವೃತ್ತಿಗಳ ಲಕ್ಷಣ ಒಂದೆ ಆಗಲು ಸಾಧ್ಯವಿಲ್ಲ, ಆದ್ದರಿಂದ ನಾವು ಇವಾವದನ್ನು ಹೇಳುವದಿಲ್ಲ.

ಈ ಟೀಕಾವಾಕ್ಯದ ವಿಶೇಶತೆಗಳನ್ನು ಕೆಳಗಿನಂತೆ ವಿವರಿಸಬಹುದು:

॥ असत्त्वे तत् अभावः इति ॥

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಅಜ್ಞಾನನಿವೃತ್ತಿರೂಪ ಮೋಕ್ಷವು ಶಶಶೃಂಗದಂತೆ ಅಂದರೆ ಮೊಲದ ಕೋಡಿನಂತೆ, ಅತ್ಯಂತ ಅಸತ್ ವಾದಲ್ಲಿ, ಮೋಕ್ಷವು ಸ್ವರೂಪದಿಂದಲೇ ಇಲ್ಲದಂತಾಗಿ, अनिर्मोक्ष ಪ್ರಸಂಗ ಉಂಟಾಗುತ್ತದೆ ಎಂಬ ಭಾವ ವಿರುತ್ತದೆ.

ಇದನ್ನು ಶ್ರೀಸತ್ಯನಾಥರು ತಮ್ಮದೆ ಆದ ವಿಶಿಷ್ಟ ಶೈಲಿಯಲ್ಲಿ ಹೀಗೆ ವಿವರಿಸುತ್ತಾರೆ:

अज्ञान निवृत्तेः असत्वे, तद् अभावो अज्ञानं मोक्षसमये स्यात्। विद्यमानस्य निवृत्ति अभावे तत् स्वरूपानुवृत्तेः,आवश्यकत्वात् इति भावः।

ಅಂದರೆ, ಅಜ್ಞಾನನಿವೃತ್ತಿರೂಪ ಮೋಕ್ಷವು ಅಸತ್ಯವಾದರೆ, ಅಂದರೆ ಅಜ್ಞಾನನಿವೃತ್ತಿರೂಪ ಇಲ್ಲದಂತಾಗಿ, ಮೋಕ್ಷ ಸಮಯದಲ್ಲಿ ಅಜ್ಞಾನ ಮರುಕಳಿಸಬೇಕಾಗುತ್ತದೆ. ಯಾವದೆ ಇದ್ದ ವಸ್ತುವಿನ ನಿವೃತ್ತಿ ಅಭಾವತೆಯನ್ನ ಹೇಳಿದಲ್ಲಿ, ಆ ವಸ್ತುವಿನ ಸ್ವರೂಪ ಮರುಕಳಿಸವದು ಅವಶ್ಯವಾಗಿರುತ್ತದೆ ಎಂಬ ಭಾವ.

॥सदसद्विलक्षणत्वे अज्ञाननिवृत्तित्व अनुपपत्तिः इति॥,

ಇದನ್ನು ಶ್ರೀನಿವಾಸತೀರ್ಥರು ಹೀಗೆ ವಿವರಿಸುತ್ತಾರೆ:

ಅಜ್ಞಾನನಿವೃತ್ತಿರೂಪ ಮೋಕ್ಷವನ್ನು ಸದಸದ್ವಿಲಕ್ಷಣ ಎಂದು ಅಂಗೀಕರಿಸಿದರೆ, ಈಗಾಗಲೆ ಪರಪಕ್ಷದವರು ಅಜ್ಞಾನವನ್ನು ಸದಸದ್ವಿಲಕ್ಷಣ ಎಂದು ಅಂಗೀಕರಿಸಿದ್ದರಿಂದ, ಅಜ್ಞಾನ. ಅಜ್ಞಾನನಿವೃತ್ತಿಗಳಲ್ಲಿ, ಸಾಲಕ್ಷಣ್ಯ ಉಂಟಾಗುತ್ತದೆ. ಆದ್ದರಿಂದ ಅಜ್ಞಾನನಿವೃತ್ತಿರೂಪ ರೂಪ ಮೋಕ್ಷವನ್ನು ಸದಸದ್ವಿಲಕ್ಷಣ ಎಂದು ಹೇಳುವದು ಅಸಂಗತವೆನಿಸುತ್ತದೆ.

॥प्रतियोगि तन्निवृत्योः इति॥

ಇದನ್ನು ಶ್ರೀನಿವಾಸತೀರ್ಥರು ಹೀಗೆ ವಿವರಿಸುತ್ತಾರೆ:

ಇಲ್ಲಿ, ನಿವೃತ್ತಿ ಶಬ್ದದಿಂದ ಅತ್ಯಂತ ಅಭಾವವೇ ವಿವಕ್ಷಿತವಾಗಿರುತ್ತದೆ. ಪ್ರಧ್ವಂಸ ಅಭಾವ ವಲ್ಲ. ಅದನ್ನು ಕೆಳಗಿನಂತೆ ಸಾಧಿಸಬಹುದು:

ನಿವೃತ್ತಿ ಶಬ್ದದಿಂದ, ಪ್ರಧ್ವಂಸ ಅಭಾವ ವಿವಕ್ಷಿತವಾದರೆ, ಪ್ರತಿಯೋಗಿ ಮತ್ತು तद्ध्वंस ಪ್ರಧ್ವಂಸ ಗಳಲ್ಲಿ भिन्नसत्ताकत्वरूप ವೈಲಕ್ಷಣ್ಯವು ಆವಶ್ಯಕವೆನಿಸುತ್ತದೆ. ಅದರಂತೆ,

ಪ್ರತಿಯೋಗಿ ಮತ್ತು ಪ್ರಧ್ವಂಸ ಗಳು ಏಕಕಾಲದಲ್ಲಿ ಇರಲು ಸಾಧ್ಯವಿಲ್ಲ. ಇನ್ನು, ಪ್ರಾತಿಭಾಸಿಕ ರೂಪ್ಯಕ ಹಾಗೂ ಅದರ ವ್ಯಾವಹಾರಿಕ ಪ್ರಧ್ವಂಸ, ಇವುಗಳಲ್ಲಿ ಯಾವ ವಿರೊಧವು ಇರುವದಿಲ್ಲ, ಪರಂತು समानसत्ताकत्व ಇರುತ್ತದೆ. ಆದ್ದರಿಂದ, ರೂಪ್ಯಕ, ಅದರ ಪ್ರಧ್ವಂಸ, ಎರಡೂ ಕೂಡ ವ್ಯಾವಹಾರಿಕ ದೃಷ್ಟಿಯಿಂದ ಒಂದೆ ಕಾಲದಲ್ಲಿ ಸಂಬವಿಸಲು ಸಾಧ್ಯವಿಲ್ಲ.
ಆದರೆ, ಅತ್ಯಂತ ಅಭಾವದ ಸಂದರ್ಭದಲ್ಲಿ, ಪ್ರತಿಯೋಗಿ ಮತ್ತು ಅದರ ಅತ್ಯಂತ ಅಭಾವ ಗಳಲ್ಲಿ भिन्नसत्ताकत्वरूप ವೈಲಕ್ಷಣ್ಯವು ಕೂಡ ಆವಶ್ಯಕವಿದ್ದರೂ, ಅವುಗಳಲ್ಲಿ ಅವಿರೊಧ ಸಂಭವಿಸುತ್ತದೆ.

ಮಾಯಾವಾದಿಗಳು, "स्व-अत्यन्त अभाव सामानाधिकरणत्वं मिथ्यात्वं" ಎಂದು ಅಂಗೀಕರಿಸಿ, ಘಟ ಮತ್ತು ಅದರ ಅತ್ಯಂತ ಅಭಾವ ಉಭಯಗಳಲ್ಲಿ ಸತ್ಯತ್ವ ವನ್ನು ಅಂಗೀಕರಿಸಿ, ಘಟದ ಮಿಥ್ಯಾತ್ವ ಪ್ರತಿಪಾದಿಸುತ್ತಾರೆ. ಅದರಂತೆ, ಅವರ ಮತದಲ್ಲಿ ಪ್ರತಿಯೋಗಿ ಮತ್ತು ಅದರ ಅತ್ಯಂತ ಅಭಾವಗಳಲ್ಲಿ ಯಾವತರಹದ ವಿರೋಧವಿರುವದಿಲ್ಲ. ಹಾಗೆನಾದರು ಇದ್ದಲ್ಲಿ, ಮಿಥ್ಯಾತ್ವದ ಅವಯವಾರ್ಥ ಸಿದ್ಧಿಸುವದಿಲ್ಲ, ಅದರಂತೆ, ಪ್ರಕೃತದಲ್ಲಿ ಕೂಡ ಅಜ್ಞಾನದ ಮಿಥ್ಯಾತ್ವ ಸಿದ್ಧಿಸಲು, स्व-अत्यन्त अभाव सामानाधिकरणत्वं एकस्मिन्काल एव्" ಎಂದು ಹೇಳಬೇಕು. ಇಲ್ಲವಾದರೆ ಮಿಥ್ಯಾತ್ವ ಸಿದ್ಧಿಸುವದಿಲ್ಲ. ಅದನ್ನು ಹೀಗೆ ಪ್ರತಿಪಾದಿಸಬಹುದು:
ಅಜ್ಞಾನ ಮತ್ತು ಅದರ ಅತ್ಯಂತ ಅಭಾವಗಳಲ್ಲಿ समानसत्ताकत्व ಇದ್ದರೆ, ಆಗ ಅವುಗಳಲ್ಲಿಯ ವಿರೋಧದಿಂದ, ಅವುಗಳ ಏಕಕಾಲ सत्ता ಅಯೊಗ್ಯವೆನಿಸಿ ಅಜ್ಞಾನದ ಮಿಥ್ಯಾತ್ವ ಸಿದ್ಧವಾಗುವದಿಲ್ಲ. ಆದ್ದರಿಂದ ಅಜ್ಞಾನದ ಮಿಥ್ಯಾತ್ವ ಸಿದ್ಧಿಸುವಗೊಸ್ಕರ ಅಜ್ಞಾನ ಮತ್ತು ಅದರ ಅತ್ಯಂತ ಅಭಾವಗಳಲ್ಲಿ ಅವಿರೋಧವನ್ನು ಅವಶ್ಯವಾಗಿ ಹೇಳಬೇಕು. ಅದು ಅಜ್ಞಾನ ಮತ್ತು ಅದರ ಅತ್ಯಂತ ಅಭಾವಗಳಲ್ಲಿಯ भिन्नसत्ताकत्वरूप ವೈಲಕ್ಷಣ್ಯವನ್ನು ಹೇಳಿದರೆ ಮಾತ್ರ ಸಂಭವಿಸಲು ಸಾಧ್ಯ.
ಆದ್ದರಿಂದ ಪರಪಕ್ಷದವರಂತೆ ಪ್ರತಿಯೋಗಿ ಮತ್ತು ಅದರ ಅತ್ಯಂತ ಅಭಾವಗಳಲ್ಲಿಯ भिन्नसत्ताकत्वरूप ವೈಲಕ್ಷಣ್ಯದ ಆವಶ್ಯಕವಾಗಿರುವದರಿಂದ, ಪರಮತದವರು ಅಜ್ಞಾನವನ್ನು ಸದಸದ್ವಿಲಕ್ಷಣ ಅಂಗೀಕರಿಸಿರುವದರಿಂದ ಅದರ ನಿವೃತ್ತಿ ಯನ್ನೂ ಸದಸದ್ವಿಲಕ್ಷಣ ಎಂದು ಪರಿಗಣಿಸುವದು ಅಸಂಗತವಾಗಿರುತ್ತದೆ ಎಂಬ ಭಾವ.

## ॥ पंचमप्रकारता अभ्युपगमात् इति॥

ಆದರೆ, अविद्यास्तमय लक्षणं मोक्ष ವು (सत्य, असत्य, सदसत्वं, सदसद्विलक्षण ಕ್ಕಿಂತಲೂ) ಬೇರೆ ಅಂದರೆ, सदसद्विलक्षण ದ प्रतियोगिरूप, पंचमप्रकार ಎಂದು ಒಪ್ಪಿರುತ್ತೆವೆ. ಅಂದರೆ

सदसद्विलक्षणविलक्षण ಎಂದರ್ಥ.

॥तत्क्षयः इति॥ ॥यक्षानुरूपो बलिः इति॥

ಟೀಕಾದಲ್ಲಿ ಬಂದಂಥ ಉಕ್ತಿಯ ಅನ್ವಯ ಕೆಳಗಿನಂತೆ ಇರುತ್ತದೆ:

न सत्, न असत, न सदसत्, न अनिर्वाच्यः, तत् क्षयः यक्ष अनुरूपः बलिः, इति आचार्याः प्रत्यपीपदन्।
ಇಲ್ಲಿ, तत् क्षयः ಎಂದರೆ अविद्या क्षयः ಎಂದರ್ಥ.

ಲೋಕದಲ್ಲಿ, ಭಾವಪದಾರ್ಥದ ನಿವೃತ್ತಿ ಎಂದರೆ ಅಭಾವ ಎಂದರ್ಥ, ಅಭಾವದ ನಿವೃತ್ತಿ ಎಂದರೆ ಭಾವ ಎಂದರ್ಥ. ಪ್ರತಿಯೋಗಿ ಉದ್ಭವಿಸುವದು ಅಭಾವ ನಿವರ್ತಕತ್ವದ ಪ್ರಾಕ್ ಅಭಾವದಲ್ಲಿ ಕಾಣುತ್ತದೆ. ಇದು ಭಾವ-ಅಭಾವ, ಭಾವ-ಅಭಾವ ವಿಲಕ್ಷಣರೂಪವು ಅಜ್ಞಾನ, ಭಾವ-ಅಭಾವ ವಿಲಕ್ಷಣರೂಪ ಅಜ್ಞಾನದ ನಿವೃತ್ತಿಯು यादृशो यक्षः तादृशो बलिः ಎಂಬ ನ್ಯಾಯದಂತೆ ಪಂಚಮಪ್ರಕಾರ ಎಂದರ್ಥ, ಅಂದರೆ ಯಕ್ಷನು ಅಲ್ಪತ್ವನಾಗಿದ್ದರೆ, ಬಲಿಯು ಅಲ್ಪತ್ವನಾಗಿರುತ್ತಾನೆ. ಯಕ್ಷನು ಮಹತ್ತರನಾಗಿದ್ದರೆ, ಬಲಿಯು ಮಹತ್ತರನಾಗಿರುತ್ತಾನೆ ಅದರಂತೆ, ಮಹಾಯಕ್ಷ ಸ್ಥಾನದಲ್ಲಿ ಅಜ್ಞಾನ ನಿವೃತ್ತಿ, ಪಂಚಮಪ್ರಕಾರತ್ವದಲ್ಲಿ ಮಹಾಬಲಿ ಎಂದರ್ಥ.
ಹೀಗೆ ಅಚಾರ್ಯರು प्रत्यपीदन् ಎಂದರೆ ಪ್ರತಿಪಾದಿಸಿದ್ದಾರೆ ಎಂದರ್ಥ.

## टीका

तत्र आह-
ಅದಕ್ಕೆ ಅಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ

## मायावाखण्डनम्

**अज्ञान असम्भवेन चतुर्थप्रकार अभावात्, पंचमप्रकारतापि निरस्ता।**

ಅಜ್ಞಾನ ಇಲ್ಲವಾದ್ದರಿಂದ ಅದರಲ್ಲಿ ನಾಲ್ಕನೆ ಪ್ರಕಾರವೇ ಇಲ್ಲದಿರುವದರಿಂದ, ಮೋಕ್ಷವು ಐದನೇ ಪ್ರಕಾರದ್ದು ಎಂದು ಹೇಳುವ ವಾದವನ್ನು ನಿರಾಕರಿಸಲಾಯಿತು.

## टीका

मोक्षस्य इति अनुवर्तते। अज्ञानस्य हि न सत्त्वं अद्वैत भंगात्। न अपि असत्त्वं प्रतीतिविरोधात्। न च सदसत्त्वं विरोधात्। अतः चतुर्थप्रकारः अनिर्वचनीयत्वं

अंगीकार्यम्। न च तन्निवृत्तिः अपि तादृशी संभवति इति, एवं मोक्षस्य पंचमप्रकारता परेण अंगीकृता।

स्यात् इयं, यदि अज्ञानमेव परमते स्यात्। न च तत्सम्भवति। "सिद्धत्वात् स्वरूपस्य" इत्यादिना तत् असंम्भवस्य उक्तत्वात्। अतो अज्ञान असम्भवेन चतुर्थप्रकारस्य सुतराम् अभावात्, तेन कल्प्यमाना मोक्ष्स्य पचंमप्रकारताऽपि पूर्वोक्तरीत्यैव निरस्ता।

ಇಲ್ಲಿ ಮೂಲವಾಕ್ಯದಲ್ಲಿ ಚತುರ್ಥಪ್ರಕಾರ ಹಾಗೂ ಪಂಚಮಪ್ರಕಾರ ಪದಗಳ ನಂತರ "ಮೋಕ್ಷದ" ಎಂಬ ಪದವನ್ನು ಅನುವರ್ತಿಸಿ ಅರ್ಥಮಾಡಬೇಕು. ಪರರಂತೆ ಅಜ್ಞಾನ ಸತ್ಯವಾಗಲು ಸಾಧ್ಯವಿಲ್ಲ ಏಕೆಂದರೆ ಅದರಿಂದ ಅದ್ವೈತದ ಭಂಗವಾಗುತ್ತದೆ. ಇನ್ನು ಅಜ್ಞಾನವು ಅಸತ್ಯವಾಗಿದೆ ಎಂದು ಹೇಳಲಿಕ್ಕಾಗುವದಿಲ್ಲ, ಅದಕ್ಕೆ ಪ್ರತೀತಿಯ ವಿರೋಧ ಬರುತ್ತದೆ. ಇನ್ನು ಅಜ್ಞಾನವನ್ನು ಸದಸತ್ವ ಎನ್ನಲಾಗುವದಿಲ್ಲ, ಇದು ಪರಸ್ಪರ ವಿರೋಧಬರುತ್ತದೆ. ಆದ್ದರಿಂದ ಅಜ್ಞಾನವು ಸದಸತ್ವಕ್ಕಿಂತಲೂ ವಿಲಕ್ಷಣ ಅಂದರೆ ಸದಸದ್ವಿಲಕ್ಷಣ ಅಥವಾ ಅನಿರ್ವಚನೀಯ ಎಂದು ನಾಲ್ಕನೆ ಪ್ರಕಾರದ್ದು ಎಂದು ಹೇಳಬೇಕು. ಇನ್ನು ಅದರ ನಿವೃತ್ತಿರೂಪ ಮೋಕ್ಷವು ಅನಿರ್ವಚನೀಯ ಎಂದು ಹೇಳಲಿಕ್ಕಾಗುವದಿಲ್ಲ. ಈ ರೀತಿಯಾಗಿ ಮೋಕ್ಷವನ್ನು ಪಂಚಮಪ್ರಕರವುಳ್ಳದ್ದು ಎಂದು ಪರಪಕ್ಷದವರು ಅಂಗೀಕರಿಸಿರುತ್ತಾರೆ.

ಇವೆಲ್ಲ ಇರುತ್ತವೆ, ಯಾವಾಗ ಪರಮತದಲ್ಲಿ ಅಜ್ಞಾನ ಸಿದ್ಧವಾದಾಗ. ಅದು ಅವರ ಮತದಲ್ಲಿ ಸಂಭವಿಸಲು ಸಾಧ್ಯವಿಲ್ಲ. ಶ್ರೀಮದಾಚಾರ್ಯರು "सिद्धत्वात् स्वरूपस्य" ಇತ್ಯಾದಿಗಳಿಂದ ಅಜ್ಞಾನದ ಅಸಂಭವತೆಯನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದ ಅಜ್ಞಾನದ ಅಸಂಭವತೆಯಿಂದ ನಾಲ್ಕನೆಪ್ರಕಾರವೇ ಸುತರಾಮ್ ಇಲ್ಲದಾಗ, ಅದರಿಂದ ಕಲ್ಪಿತವಾದ ಪಂಚಮಪ್ರಕಾರ ಮೋಕ್ಷದ, ಹಿಂದೆ ಪ್ರತಿಪಾದಿಸಿದ ರೀತಿಯಿಂದಲೆ ನಿರಸ್ತವಾಗುತ್ತದೆ..

## ಟಿಪ್ಪಣಿಗಳವಿಶೇಷ ವಿವರಣೆ

॥मोक्षस्य इति, इति॥

ಇಲ್ಲಿ मोक्षस्य इति, ಎಂಬ ಪದಗಳನ್ನು ಅನುವರ್ತಿಸಿ ಅರ್ಥಹೇಳಬೇಕು. ಅಂದರೆ ಇಲ್ಲಿ ಮೂಲವಾಕ್ಯದಲ್ಲಿ ಚತುರ್ಥಪ್ರಕಾರ ಹಾಗೂ ಪಂಚಮಪ್ರಕಾರ ಪದಗಳ ನಂತರ "ಮೋಕ್ಷದ" ಎಂಬ ಪದವನ್ನು ಅನುವರ್ತಿಸಿ ಅರ್ಥಮಾಡಬೇಕು.

॥अज्ञानस्य हि न सत्त्वं इति॥

ಅಜ್ಞಾನವು ಸತ್ಯವಾಗಲು ಸಾಧ್ಯವಿಲ್ಲ, ಏಕೆಂದರೆ ಇದರಿಂದ ಅದ್ವೈತದ ಭಂಗವಾಗುತ್ತದೆ.

॥ प्रतीतिविरोधात् इति ॥

ಅದ್ವೈತವು ಅಸತ್ಯವಾಗಿದೆ ಎಂದು ಹೇಳಲಿಕ್ಕಾಗುವದಿಲ್ಲ, ಏಕೆಂದರೆ ಅದಕ್ಕೆ प्रत्यक्षप्रतीति ಪ್ರತ್ಯಕ್ಷ ಪ್ರತೀತಿಯ ವಿರೋಧ ಬರುತ್ತದೆ. ಅಥವಾ प्रत्यक्षप्रतीति ಪ್ರತ್ಯಕ್ಷ ಪ್ರತೀತಿ ಎಂದರೆ ಅಪರೋಕ್ಷ ಪ್ರತೀತಿ ಎಂದರ್ಥ, ಅದರ ವಿರೋಧ ಬರುತ್ತದೆ. ಅಥವಾ अहं अज्ञः ಎಂಬ ಪ್ರತೀತಿಯ ವಿರೋಧ ಬರುತ್ತದೆ.

ಹಾಗೂ ಯಾವದು ಅಸತ್ಯ ಅದರ ಪ್ರತೀತಿ ಉಂಟಾಗುವದಿಲ್ಲ ಎಂದು ಪರಕ್ಷದವರು ಅಂಗೀಕರಿಸಿದ್ದರಿಂದ, ಅದರ ವಿರೋಧ ಬರುತ್ತದೆ ಎಂಬ ಭಾವವಿರುತ್ತದೆ.

॥न च सदसत्त्वं विरोधात् इति॥

ಇನ್ನು ಅಜ್ಞಾನವನ್ನು ಸದಸತ್ವ ಎಂದು ಹೇಳಲಾಗುವದಿಲ್ಲ, ಇದು ಪರಸ್ಪರ ವಿರೋಧ ಉಕ್ತಿಯಾಗುತ್ತದೆ.

॥अनिर्वचनीयत्वं इति॥

ಆದ್ದರಿಂದ ಅಜ್ಞಾನವು ಸದಸತ್ವ ಕ್ಕಿಂತಲೂ ವಿಲಕ್ಷಣ ಅಂದರೆ ಸದಸದ್ವಿಲಕ್ಷಣ ಅಥವಾ ಅನಿರ್ವಚನೀಯ ಎಂದು ನಾಲ್ಕನೆ ಪ್ರಕಾರವುಳ್ಳದ್ದು ಎಂದು ಹೇಳಬೇಕು.

॥तादृशी इति॥

ಅಜ್ಞಾನ ನಿವೃತ್ತಿರೂಪ ಮೋಕ್ಷವನ್ನು ಅನಿರ್ವಚನೀಯ ಎಂದು ಹೇಳಲಿಕ್ಕೆ ಆಗುವದಿಲ್ಲ, ಆದ್ದರಿಂದ ಅಜ್ಞಾನ ನಿವೃತ್ತಿರೂಪ ಮೋಕ್ಷವನ್ನು ಸದಸದ್ವಿಲಕ್ಷಣಕ್ಕಿಂತಲೂ ವಿಲಕ್ಷಣ ಎಂಬ ಪಂಚಮಪ್ರಕಾರ ಉಳ್ಳದ್ದು ಎಂದು ಪರಮತದವರು ಅಂಗೀಕರಿಸಿದ್ದಾರೆ.

॥न च तत्सम्भवति इति॥

ಈ ಪಂಚಮಪ್ರಕಾರವನ್ನು ಹೊಂದಿದ ಮೋಕ್ಷವು ಇದೆ ಎನ್ನುವದಾದರೆ, ಪರಮತದಲ್ಲಿ ಅಜ್ಞಾನ ಸಿದ್ಧವಾಗಬೇಕು. ಅಜ್ಞಾನವೇ ಪರಮತದಲ್ಲಿ ಸಿದ್ಧವಾಗಿಲ್ಲದಾಗ, ಪಂಚಮಪ್ರಕಾರವನ್ನು ಹೊಂದಿದ ಮೋಕ್ಷವು ಹೇಗೆತಾನೆ ಸಿದ್ಧವಾಗುವದು?

ಹಿಂದೆ, "सिद्धत्वात् स्वरूपस्य" ಎಂಬ ಮುಂತಾದ ವಾಕ್ಯಗಳಿಂದ, ಈಗಾಗಲೆ ಪರಮತದಲ್ಲಿ ಅಜ್ಞಾನದ ಅಸಂಭವತೆಯನ್ನು ಪ್ರಸ್ಥಾಪಿಸಲಾಗಿದೆ. ಆದ್ದರಿಂದ, ಅಜ್ಞಾನದ ಅಭಾವತೆ ಪ್ರಸಂಗದಲ್ಲಿ, ಚತುರ್ಥಪ್ರಕಾರ ವೇ ಸುತರಾಂ ಇಲ್ಲವೆಂದಾಗ, ಅದರಿಂದ ಕಲ್ಪಿತ ಮೋಕ್ಷರೂಪ ಪಂಚಮಪ್ರಕಾರ ಕೂಡ ಹಿಂದೆ ಹೇಳಿದಂತೆ ನಿರಸ್ತಗೊಳ್ಳುತ್ತದೆ.

## टीका

**अथवा, अज्ञान निवृत्तिः यदि आत्मातिरिक्ता पंचमप्रकारः अंगीक्रियते, तदा वक्तव्यं। किम् अज्ञान कार्यं, न वा इति। न तावत् द्वितीयः। आत्मातिरिक्तस्य अज्ञान तत् कार्ययोः अन्यतरत्व अवश्यम्भाव अभ्युपगमात्।**

ಅಥವಾ ಅಜ್ಞಾನ ನಿವೃತ್ತಿರೂಪ ಮೋಕ್ಷವು ಒಂದು ವೇಳೆ ಆತ್ಮಾತಿರಿಕ್ತ ಪಂಚಮಪ್ರಕಾರವೆಂದು ಅಂಗೀಕರಿಸಿದರೆ, ಆಗ ಹೇಳಬೇಕು, ಅದು ಅಜ್ಞಾನ ಕಾರ್ಯವೊ? ಅಥವಾ ಅಲ್ಲವೊ? ಇನ್ನು ಎರಡನೆ ವಿಕಲ್ಪವಾದ ಅಜ್ಞಾನಕಾರ್ಯವಲ್ಲ ಎಂಬುದು ಹೇಳಲುಬರುವದಿಲ್ಲ. ಆತ್ಮಾತಿರಿಕ್ತವಾದುದನ್ನು ಅಜ್ಞಾನ ಅಥವಾ ಅಜ್ಞಾನಕಾರ್ಯ ಒಂದರಲ್ಲೊಂದು ಅವಶ್ಯವಾಗಿ ಒಪ್ಪಲೇಬೇಕು.

### <u>ಟಿಪ್ಪಣಿಗಳವಿಶೇಷ ವಿವರಣೆ</u>

**॥ अथवा इति॥**

ಅಥವಾ, ಅಜ್ಞಾನ ನಿವೃತ್ತಿರೂಪ ಮೋಕ್ಷವುವ ಆತ್ಮಾತಿರಿಕ್ತ ಪಂಚಮಪ್ರಕಾರವೆಂದು ಒಂದು ವೇಳೆ ಅಂಗೀಕರಿಸಿದರೆ, ಅದು ಅಜ್ಞಾನ ಕಾರ್ಯವೊ? ಅಥವಾ ಅಜ್ಞಾನ ಕಾರ್ಯವಲ್ಲವೊ?

ಇಲ್ಲಿ ಶ್ರೀವ್ಯಾಸತೀರ್ಥರು, ಈ ಟೀಕಾವಾಕ್ಯದ ಹಿನ್ನೆಲೆಯನ್ನು ಹೀಗೆ ಸ್ಪಷ್ಟ ಪಡಿಸುತ್ತಾರೆ:

ಶ್ರೀಮದಾಚಾರ್ಯರ "अज़ान असम्भवेन चतुर्थप्रकार अभावात्..", ಎಂಬ ಮೂಲವಾಕ್ಯವು, ಅಜ್ಞಾನದ ಸ್ವರೂಪತಃ ಅಸಂಭವತೆಯಿಂದ ಪಂಚಮಪ್ರಕಾರಮೋಕ್ಷ ನಿರಾಕರಣಾರ್ಥಕ್ಕಾಗಿ ಹೊರಟಿದ್ದರೆ, ಅವರ " अज़ान असम्भवात् एव तन्मतं अखिलं अपाकृतम्" ಎಂಬ ಹಿಂದಿನ ಮೂಲವಾಕ್ಯದ ಜೊತೆ ಪುನರುಕ್ತಿ ದೋಷ ಬರುತ್ತದೆ.

ಅಜ್ಞಾನದ ಅಸಂಭವತೆಯನ್ನು ವಾದಾಂತರಗಳಿಂದ ಮತ್ತು ಸಾಪೇಕ್ಷತ್ವದಿಂದಲೂ ಸಾಧಿಸಬಹುದಾದ್ದರಿಂದ, ಯಾರು ಪೂರ್ವದಲ್ಲಿ ಮಾಡಿದ ವಿವೇಚನೆಯಿಂದ ಅಸಂತುಷ್ಟರಿದ್ದರೆ ಅವರಿಗಾಗಿ, ಪ್ರಕಾರಾಂತರದಿಂದ ಇದು ವ್ಯಾಖ್ಯಾನ್ವಿರುತ್ತದೆ ಎಂದು ತಿಳಿಸುತ್ತಾ, ಶ್ರೀಟೀಕಾಕೃತ್ಪಾದರು ಪುನರುಕ್ತಿ ದೋಷವನ್ನು ನಿರಾಕರಿಸುತ್ತಾರೆ ಎಂಬ ಭಾವ.

**॥न तावत् इति॥**

ಇನ್ನು ಎರಡನೆದಾದದ್ದು ಅದು ಅಜ್ಞಾನಕಾರ್ಯವಲ್ಲ ಎಂದು ಹೇಳಲಾಗದು,

ಇಲ್ಲಿ ಶ್ರೀವ್ಯಾಸತೀರ್ಥರು, ಟೀಕಾಕೃತ್ಪಾದರು ತಾವು ಮಾಡಿದ ವಿಕಲ್ಪಗಳಲ್ಲಿ, ಎರಡನೆ

ವಿಕಲ್ಪವನ್ನು ಮೊದಲಿಗೆ ಏಕೆ ವಿವರಿಸುತ್ತಿದ್ದಾರೆ ಎಂಬುದನ್ನು ಹೀಗೆ ವಿವರಿಸುತ್ತಾರೆ:

ಅಭಾವ ಜ್ಞಾನವು, ಪ್ರತಿಯೋಗಿ ಜ್ಞಾನದ ಅಧೀನವಾಗಿರುತ್ತದೆ, ಅದರಂತೆ, ಇಲ್ಲಿ ಟೀಕಾಕೃತ್ಪಾದರು, ವಿಕಲ್ಪಸಮಯದಲ್ಲಿ, अज्ञान कार्यं ಎಂದು ಮೊದಲಿಗೆ ಮತ್ತು अज्ञान कार्यं न ಎಂದು ಆಮೇಲೆ ನಮೂದಿಸಿರುತ್ತಾರ. ಹೀಗಿದ್ದರೂ ಪರಪಕ್ಷದವರ ಅಭಿಪ್ರೇತವನ್ನು ಅನುಸರಿಸಿ, ಮೊದಲಿನ ವಿಕಲ್ಪವಾದ "अज्ञान कार्यं" ಎಂಬುದರ ಉತ್ತರರೂಪವಾಗಿ, ಮೂಲವಾಕ್ಯದ ಅವಯವಾದ " अज्ञान असंभवेन.." ವ್ಯಾಖ್ಯಾನ ಮಾಡುವ ಉದ್ದೇಶವನ್ನು ಮನಸ್ಸಿನಲ್ಲಿಟ್ಟು, ಇಲ್ಲಿ ಎರಡನೆ ವಿಕಲ್ಪವಾದ अज्ञान कार्यं न ಎಂಬುದನ್ನು ಮೊದಲಿಗೆ ದೂಷಿಸುತ್ತಾರೆ

**॥आत्मातिरिक्तस्य इति॥**

ಆತ್ಮಾತಿರಿಕ್ತವಾದ ಮೋಕ್ಷವನ್ನು ಅಜ್ಞಾನ ಅಥವಾ ಅಜ್ಞಾನಕಾರ್ಯಗಳಲ್ಲೊಂದನ್ನು ಅವಶ್ಯವಾಗಿ ಒಪ್ಪಬೇಕು. ಇನ್ನು ಈ ಅಜ್ಞಾನನಿವೃತ್ತಿರೂಪ ರೂಪ ಪಂಚಮಪ್ರಕಾರವಾದ ಮೋಕ್ಷವನ್ನು ಅಜ್ಞಾನ ಎಂದು ಹೇಳಲಿಕ್ಕೆ ಆಗುವದಿಲ್ಲ. ಆದ್ದರಿಂದ ಪಂಚಮಪ್ರಕಾರವಾದ ಆತ್ಮಾತಿರಿಕ್ತ ಮೋಕ್ಷವನ್ನು "अज्ञान कार्यं न" ಎಂದು ಹೇಳುವದು ಯುಕ್ತವೆನಿಸುವದಿಲ್ಲ.

ಇದನ್ನು ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಇಲ್ಲಿ ಮುರು ಪದಾರ್ಥಗಳಿರುತ್ತವೆ: ಆತ್ಮಾ, ಅಜ್ಞಾನ ಮತ್ತು ಅಜ್ಞಾನಕಾರ್ಯ. ಅದರಂತೆ, चतुर्थप्रकार ಚತುರ್ಥಪ್ರಕಾರ ಇಲ್ಲದಾಗ, ಪಂಚಮಪ್ರಕಾರ ಆತ್ಮಾತಿರಿಕ್ತ ಮೋಕ್ಷವು अज्ञान ಅಜ್ಞಾನ ಮತ್ತು ಅಜ್ಞಾನಗಳಲ್ಲೊಂದಾಗಿರಬೇಕೆಂದು ನಿಯಮ ಇರುವದರಿಂದ, ಅಲ್ಲಿ ಅಜ್ಞಾನ ನಿವೃತ್ತಿ ಇರುವಾಗ, अज्ञानत्व ಅಯುಕ್ತವೆನಿಸುವದರಿಂದ, परिशेष ನ್ಯಾಯಮೆರೆಗೆ ಅಜ್ಞಾನಕಾರ್ಯ ಎಂದು ಅವಶ್ಯವಾಗಿ ಹೇಳಬೇಕು. ಆದ್ದರಿಂದ अज्ञान कार्यं न ಎಂಬ ಪಕ್ಷವನ್ನು ಒಪ್ಪುವದು ಅಯುಕ್ತವೆನಿಸುತ್ತದೆ.

ಈ ಪ್ರಕಾರದಿಂದ "चतुर्थप्रकार अभावात्" ಎಂಬುದರಿಂದಲೇ, ಈ ಎರಡನೆ ಪಕ್ಷದ ದೂಷಣವನ್ನು ಟೀಕಾಕೃತ್ಪಾದರು ವಾಖ್ಯಾನಿಸ ಬಹುದಾಗಿತ್ತು, ಆದರೂ, ಹೀಗೆ ವ್ಯಾಖ್ಯಾನಿಸಿದ್ದಲ್ಲಿ, प्रतिपत्तिगौरव ಎಂಬ ದೋಷದ ಪ್ರಸಂಗ ಉಂಟಾಗುವದರಿಂದ, ಈ ದ್ವಿತೀಯ ಪಕ್ಷವನ್ನು ಹೊರಗಿನಿಂದಲೆ ದೂಷಿಸಿದ್ದಾರೆ. ಇದನ್ನು ಶ್ರೊತೃಗಳು ತಿಳಿಯತಕ್ಕದ್ದು ಎಂಬ ಭಾವವಿರುತ್ತದೆ.

<u>ಆತ್ಮಾತಿರಿಕ್ತ ಮೋಕ್ಷವು ಅಜ್ಞಾನ ಅಥವಾ ಅಜ್ಞಾನಕಾರ್ಯಗಳಲ್ಲೊಂದಾಗಿರದೆ ಅದು ಅನಿರ್ವಚನೀಯ ಎನ್ನುವ ಪಕ್ಷದ ವಿಮರ್ಶೆ:</u>

ಆತ್ಮಾತಿರಿಕ್ತ ಮೋಕ್ಷವು ಅಜ್ಞಾನ ಅಥವಾ ಅಜ್ಞಾನ ಕಾರ್ಯವಾಗಿರದೆ, ಅದು

ಅನಿರ್ವಚನೀಯ ಎಂದು ಕೆಲವರು ಹೇಳುತ್ತಾರೆ.
ಹಾಗೆ ಹೇಳುವದು ಸರಿಯಲ್ಲ.ಇದನ್ನು ಹೀಗೆ ವಿವರಿಸಬಹುದು:

• ಪಂಚಮಪ್ರಕಾರ ಆತ್ಮಾತಿರಿಕ್ತ ಮೋಕ್ಷವುದಲ್ಲಿಯೂ ಕೂಡ अविद्या निवृत्तौ, ಅಂದರೆ ಅವಿದ್ಯಾನಿವೃತ್ತಿಯಾದ್ದರಿಂದ ಸದಸದ್ವಿಲಕ್ಷಣತ್ವರೂಪ ಅನಿರ್ವಚನೀಯತ್ವವು ಕೂಡ ಸತ್ಯ ವಾಗಿರುತ್ತದೆ. ಆದರೆ, ಸದಸದ್ವಿಲಕ್ಷಣ ವೈಲಕ್ಷಣ್ಯ ಅಲ್ಲಿ ಇರುತ್ತದೆ ಎಂದು ತಾವು ಹೇಳುತ್ತೀರಲ್ಲ ಮತ್ತು ಅದೇನು? ಸದಸದ್ವಿಲಕ್ಷಣ ವೈಲಕ್ಷಣ್ಯ ಅಲ್ಲಿ ಇರದೇ ಇದ್ದರೂ, ಅಲ್ಲಿ ಅನಿರ್ವಚನೀಯತ್ವ ಅಥವಾ ಅದರೆ ಲಕ್ಷಣಾಂತರ್ಗತ ಅಲ್ಲಿ ಇರಲು ಸಾಧ್ಯವೇಇಲ್ಲ. ಹಾಗೆನಾದರೆ, ಶುಕ್ತಿರೂಪ್ಯದಲ್ಲಿ, ಮತ್ತು ಘಟದಲ್ಲಿ, ಸತ್ಯದಂತೆ, ಸದಸದ್ವಿಲಕ್ಷಣತ್ವವನ್ನು ಮಿಥ್ಯಾ ಎಂದು ಹೇಳುವ ಪರಪಕ್ಷದವರು, ಅಲ್ಲಿ ಸದಸದ್ವಿಲಕ್ಷಣ ದಂತೆ ಸದಸದ್ವಿಲಕ್ಷಣ ವೈಲಕ್ಷಣ್ಯ ವನ್ನು ಕೂಡ ಅಂಗೀಕರಿಸಬೇಕಾಗುವದರಿಂದ, लक्षण असंभव ಪ್ರಸಂಗ ಉಂಟಾಗುವದು.

• ಇನ್ನು बाध्यत्वं अनिर्वाच्यत्वं ಎಂದು अनिर्वाच्यत्व ದ ಲಕ್ಷಣ ತೆಗೆದುಕೊಂಡು, ಅದರಂತೆ, ಅದು, ಬಾಧಕದ ಜ್ಞಾನದ ನಂತರ ಭಾವರೂಪ ತಾಳುವ, ಅವಿದ್ಯಾನಿವೃತ್ತಿಯಲ್ಲಿ ಇರುವದಿಲ್ಲ ಎಂದೆನ್ನುತ್ತೆವೆ ಎಂದರೆ, ಇಲ್ಲಿ ಕೆಳಗಿನ ಸಂಗತಿಗಳು ತಲೆದೊರುತ್ತವೆ:

  • परमार्थसत्त्वाकारेण प्रतिपन्न उपाधौ निषिध्यमानत्वं बाध्यत्वं ಎಂದು ಬಾಧ್ಯತ್ವದ ಲಕ್ಷಣವನ್ನು ಹೇಳುತ್ತೆವೆ ಎಂದರೆ, ಈ ಬಾಧ್ಯತ್ವದ ಲಕ್ಷಣದಂತೆ, ಅವಿದ್ಯಾನಿವೃತ್ತಿಯಲ್ಲಿ ಕೂಡ ಅನಿರ್ವಾಚ್ಯತ್ವ ಇರುತ್ತದೆ.
  • ಅಥವಾ ಅವಿದ್ಯಾನಿವೃತ್ತಿರೂಪ ಮೋಕ್ಷವು ಪರಮಾರ್ಥ ಸತ್ಯವೆಂದು ಹೇಳುತ್ತೆವೆ ಎಂದರೆ, अद्वैतव्याकोप ಪ್ರಸಂಗ ಉಂಟಾಗುವದು. ಮತ್ತು ಪಂಚಮಪ್ರಕಾರತ್ವದ ಹಾನಿ ಪ್ರಸಂಗ ಒದಗುವದು.
  • ಅಥವಾ स्वरूपेण एव प्रतिपन्न उपाधौ निषिध्यमानत्वं बाध्यत्वं ಎಂದು ಬಾಧ್ಯತ್ವದ ಲಕ್ಷಣವನ್ನು ಹೇಳುತ್ತೆವೆ. ಅದರಂತೆ, ಇಲ್ಲಿ ಅವಿದ್ಯಾನಿವೃತ್ತಿಯಲ್ಲಿ ಅನಿರ್ವಾಚ್ಯತ್ವ ಇರುವದಿಲ್ಲ ಎಂದರೆ, ಇಂತಹ ಬಾಧ್ಯತ್ವದ ಲಕ್ಷಣದಿಂದ, ಶುಕ್ತಿರೂಪ್ಯದಲ್ಲಿ ಕೂಡ ಅವಿದ್ಯಾ ಕಾರ್ಯದ ಪ್ರತೀತಿ ಇರುವಾಗ, ಅಸದ್ವಿಲಕ್ಷಣ ಸ್ವರೂಪವನ್ನು, ವಿದ್ಯಮಾನ ಸ್ವರೂಪದಿಂದ ನಿಶೇಧಿಸಲು ಅಶಕ್ಯ ವಾದ್ದರಿಂದ, ಈ ಬಾಧ್ಯತ್ವ ಲಕ್ಷಣಕ್ಕೆ ಅಸಂಭವತೆಯ ಪ್ರಸಂಗ ಉಂಟಾಗುವದು.

• ಮತ್ತು, ಆತ್ಮಾತಿರಿಕ್ತವಾಗಿದ್ದರಿಂದ ಅವಿದ್ಯಾನಿವೃತ್ತಿ ಮೋಕ್ಷವು ಸದಸದ್ವಿಲಕ್ಷಣತ್ವರೂಪ

ಅಥವಾ ಬಾಧ್ಯತ್ವರೂಪ ಅನಿರ್ವಚನೀಯತ್ವವಾಗಿರಬೇಕು. ಇನ್ನು ಅನಿರ್ವಚನೀಯತ್ವವು ಅವಿದ್ಯಾನಿವೃತ್ತಿಗೆ ಪ್ರಯೋಜಕವಾಗಲಾರದು. ಅವಿದ್ಯಾನಿವೃತ್ತಿ ಹೊಂದಿದಲ್ಲಿ, ಆತ್ಮಾತಿರಿಕ್ತ ಮೋಕ್ಷವು, ಆತ್ಮಾತಿರಿಕ್ತ ಪದಾರ್ಥವಾದ್ದರಿಂದ, ಅದರ ನಿವೃತ್ತಿಯಾಗುವ ಪ್ರಸಂಗವದಗುವದು. ಹಾಗೂ ಅವಿದ್ಯಾನಿವೃತ್ತಿ ನಿವೃತ್ತಿ ಯಿಂದ अनवस्था ಅಲ್ಲ, प्रतियोगि उन्मज्जन ಪ್ರಸಂಗ ಉಂಟಾಗುವದು. ಈ ನಮೂದಿಸಿದ ದೋಷಗಳು ನಮ್ಮ ಮತಕ್ಕನುಗುಣವಾಗಿ ಇರುತ್ತವೆ.

ಪರಪಕ್ಷದಲ್ಲಿ, घटादि निवृत्तेः निवृत्तौ, अनवस्था ದಂತೆ प्रतियोगि उन्मज्जन ಕೂಡ ಉಂಟಾಗುವವು. ಪರಮತದಲ್ಲಿ घटादि निवृत्तेः ಅಂದರೆ  ಘಟವು ನಿವೃತ್ತಿ ಹೊಂದಿದರೂ ಘಟದ ನಿವೃತ್ತಿ ಆಗಿದೆ ಎಂದು ಹೇಳಲಾಗುವದಿಲ್ಲ. ಕೊನೆಯ ಸಾಕ್ಷಾತ್ಕಾರದ ಮುಂಚೆ, ಕಬ್ಬಣ ಅಸ್ತ್ರಗಳ ಪ್ರಹಾರಾದಿಗಳಿಂದ व्यावहारिक घटादि ಗಳು ನಿವೃತ್ತಿ ಹೊಂದಿದರೂ, ಕೊನೆಯ ಸಾಕ್ಷಾತ್ಕಾರದ ನಂತರವೇ ಅವುಗಳ ಅವಶ್ಯವಾಗಿ ನಿವೃತ್ತಿ ಆಗಬೇಕು.

ಇದರಿಂದ, ज्ञाननिवर्त्यत्वं अनिर्वचनीय ಎಂದು अनिर्वचनीय ದ ಲಕ್ಷಣ ಹೇಳಿ, ಅದೇ अविद्या ಅಥವಾ तत्कार्य ಅವುಗಳಲ್ಲೊಂದಕ್ಕೆ ಪ್ರಯೊಜಕ ವಿನಹಾ ಆತ್ಮಾತಿರಿಕ್ತ ಅಲ್ಲ. ಹಾಗೂ ज्ञाननिवर्त्य ವಾದರೂ ಅವಿದ್ಯಾನಿವೃತ್ತಿ ಆಗುವದಿಲ್ಲ ಎಂಬ ವಾದವನ್ನು ನಿರಾಕರಿಸಲಾಯಿತು. ಆತ್ಮಾತಿರಿಕ್ತ ಇರುವದರಿಂದಲೇ ज्ञाननिवर्त्यत्वं ವನ್ನು ಆಪಾದಿಸಲಾಗಿರುತ್ತದೆ.

• ಮತ್ತು ಆತ್ಮಾತಿರಿಕ್ತ ಅವಿದ್ಯಾನಿವೃತ್ತಿ ಅಂದರೆ, ಅವಿದ್ಯಾ ನಿವೃತ್ತಿ ರೂಪ ಆತ್ಮಾತಿರಿಕ್ತ ಮೋಕ್ಷವು, ಅವಿದ್ಯಾ ಅಥವಾ ಅದರ ಕಾರ್ಯಗಳಲ್ಲೊಂದಾಗದೆ ಇದ್ದರೆ, ಅದ್ವೈತದ ಹಾನಿ ಆಗುತ್ತದೆ. ಅದು ( आत्मातिरिक्ता अविद्या निवृत्ति) ಪರಮಾರ್ಥವಲ್ಲದ್ದರಿಂದ ಅದ್ವೈತದ ಹಾನಿ ಆಗುವದಿಲ್ಲ ಅನ್ನಲಾಗುವದಿಲ್ಲ. ಅದು ಅಸದ್ವಿಲಕ್ಷಣ ವಾಗಿದ್ದರಿಂದ, ಅದು अविद्या ಅವಿದ್ಯಾ ಅಥವಾ ಅದರ ಕಾರ್ಯಗಳಗಳಲ್ಲೊಂದಾಗದೆ ಇದ್ದರೆ, ಅದು ಪಾರಮಾರ್ಥಿಕ ಸತ್ಯ ಅವಶ್ಯವಾಗಿ ಆಗಬೇಕು.

ಇನ್ನು, ಇದು ಪಾರಮಾರ್ಥಿಕ ಸತ್ಯವಾದ ಆತ್ಮತ್ವಕ್ಕೆ ಪ್ರಯೋಜಕ ಎನ್ನಲು ಬರುವದಿಲ್ಲ. ಹಾಗೂ, ಇದು ಅವಿದ್ಯಾ ಅಥವಾ ಅದರ ಕಾರ್ಯಗಳಗಳಲ್ಲೊಂದಾಗದೆ ಇರುವದರಿಂದ ಆತ್ಮತ್ವ ಕ್ಕೆ ಕೂಡ ಆಪಾದಿಸಲು ಶಕ್ಯವಾಗುತ್ತದೆ.

ಮತ್ತು ,ಆತ್ಮಾತಿರಿಕ್ತ ಅವಿದ್ಯಾನಿವೃತ್ತಿಯು ಅವ್ಯವಹಾರಿಕ ಮತ್ತು ಅಪ್ರಾತಿಭಾಸಿಕ ವಾಗಿರುವದರಿಂದ ಪಾರಮಾರ್ಥಿಕ ಸತ್ಯವಾಗಬೇಕು.  ಆದ್ದರಿಂದ ಅದ್ವೈತ ಹಾನಿ ಯ ಪರಿಹಾರಕ್ಕಾಗಿ, ಆತ್ಮಾತಿರಿಕ್ತ ಅವಿದ್ಯಾನಿವೃತ್ತಿಯನ್ನು ಅವಿದ್ಯಾ ಅಥವಾ ಅದರ

ಗಳಲ್ಲೊಂದನ್ನು ಒಪ್ಪಲೇಬೇಕು.

## टीका

**॥अज्ञान असम्भवेन इति॥**

**आद्ये बाधकं आह- अज्ञान असम्भवेन इति॥**

**यदि अज्ञान निवृत्तिः अज्ञान कार्या, तदा अज्ञानस्य तदानीम् अवस्थानं स्यात्। न हि उपादानेन विना उपादेयस्य स्थितिः अस्ति। अज्ञान निवृत्तौ अज्ञान् असंभवात्। तथा च अज्ञाननिवृत्तेः उभयथा अपि असंभवेन स्वरूपमेव नास्ति। पंचमप्रकारता तु दूरनिरस्ता इति।**

ಈಗ ಅಜ್ಞಾನ ನಿವೃತ್ತಿಯು ಅಜ್ಞಾನ ಕಾರ್ಯವಾಗಿದೆ ಎಂಬ ಮೇಲಿನ ವಿಕಲ್ಪಗಳಲ್ಲಿಯ ಮೊದಲನೆ ವಿಕಲ್ಪದ ಉತ್ತರರೂಪವಾಗಿ ಶ್ರೀಮದಚಾರ್ಯರ "अज्ञान असम्भवेन" ಎಂಬ ಮೂಲವಾಕ್ಯವನ್ನು ವ್ಯಾಖ್ಯಾನಿಸುತ್ತಾರೆ. ಒಂದು ವೇಳೆ ಅಜ್ಞಾನ ನಿವೃತ್ತಿಯು ಅಜ್ಞಾನಕಾರ್ಯವಾದರೆ, ಆಗ ಅದು ಅಜ್ಞಾನದ ಅವಸ್ಥೆಯಾಗುತ್ತದೆ. ಇನ್ನು ಉಪಾದಾನ ವಿಲ್ಲದೆ ಉಪಾದೇಯದ ಸ್ಥಿತಿ ಇರುವದಿಲ್ಲ. ಹಾಗಗಿ ಅಜ್ಞಾನದ ನಿವೃತ್ತಿಯಾದಾಗ ಅಜ್ಞಾನ ಅಸಂಭವವಾಗುತ್ತದೆ. ಅದರಂತೆ ಅಜ್ಞಾನ ನಿವೃತ್ತಿಯಲ್ಲಿ ಅಜ್ಞಾನ ಮತ್ತು ಅಜ್ಞಾನಕಾರ್ಯ ಎರಡೂ ಕೂಡ ಅಸಂಭವವಾಗುವದರಿಂದ ಅಜ್ಞಾನ ನಿವೃತ್ತಿರೂಪ ಮೋಕ್ಷದ ಸ್ವರೂಪವೇ ಇಲ್ಲದಂತಾಗುತ್ತದೆ. ಇನ್ನು ಪಂಚಮಪ್ರಕಾರ ಮೋಕ್ಷ ನಿರಾಕರಿಸುವದು ದೂರವಿರಲಿ.

**॥ चतुर्थप्रकार इति॥**

**किंच घटादीनां सत्त्वं, शशविषाणादीनां असत्त्वं, घटादीनाम एव देश्कालादि व्यवस्थाया सदसत्त्वं इति, प्रकारत्रयस्यैव अनुभवात् चतुर्थप्रकार एव नास्ति। तत् अभावात्, पंचमप्रकारता तु मोक्षस्य अष्टमरस इव अत्यन्त असम्भाविनि इति आह- चतुर्थप्रकार इति॥**

ಮತ್ತು ಘಟಾದಿಗಳ ಸತ್ಯತ್ವ, ಶಶವಿಷಾಣಾದಿಗಳ ಅಸತ್ಯತ್ವ, ಮತ್ತು ಘಟಾದಿಗಳ ದೇಶಕಾಲಾದಿ ವ್ಯವಸ್ಥೆಯ ಮೂಲಕ ಸದಸತ್ವ ಎಂದು ಮೂರು ಪ್ರಕಾರಗಳು ಮಾತ್ರ ಅನುಭವ ಸಿದ್ಧವಾಗಿವೆ. ಇನ್ನು ಚತುರ್ಥಪ್ರಕಾರದ ಅನುಭವವೇ ಇಲ್ಲ. ಇನ್ನು ಚತುರ್ಥಪ್ರಕಾರವೇ ಇಲ್ಲವಾದಾಗ ಮೋಕ್ಷವು ಪಂಚಮಪ್ರಕಾರದ್ದು ಎಂದು ಅಷ್ಟಮರಸದಂತೆ ಅತ್ಯಂತ

ಅಸಂಭಾವನೀಯ. ಆದರಂತೆಯೆ ಶ್ರೀಮದಾಚಾರ್ಯರ ಮೂಲವಾಕ್ಯ ಪಂಚಮಪ್ರಕಾರ ಮೋಕ್ಷವನ್ನು ನಿರಾಕರಿಸುತ್ತದೆ.

<u>**ಟಿಪ್ಪಣಿಗಳವಿಶೇಷ ವಿವರಣೆ**</u>

**॥आद्ये इति॥**

ಈಗಿನವರೆಗೆ, ಅಜ್ಞಾನ ನಿವೃತ್ತಿರೂಪ ಮೋಕ್ಷವು, "अज्ञान कार्यं न " ಎರಡನೆ ವಿಕಲ್ಪದ ಬಗ್ಗೆ ವಿವೇಚಿಸಲಾಯಿತು.

ಈಗ, ಅಜ್ಞಾನನಿವೃತ್ತಿಯು ಅಜ್ಞಾನಕಾರ್ಯವಾಗಿದೆ ಎಂಬ ಮೊದಲಿನ ವಿಕಲ್ಪದ, ಉತ್ತರರೂಪವಾಗಿ ಶ್ರೀಮದಾಚಾರ್ಯರ "अज्ञान असम्भवेन" ಎಂಬ ಮೂಲವಾಕ್ಯವನ್ನು ವ್ಯಾಖನಿಸುತ್ತಾರೆ.

**॥यदि अज्ञान इति॥**

ಅಜ್ಞಾನನಿವೃತ್ತಿಯು ಅಜ್ಞಾನಕಾರ್ಯಆದರೆ, ಆಗ ಅದನ್ನು ಅಜ್ಞಾನದ ಅವಸ್ಥೆ ಎಂದು ಒಪ್ಪಬೇಕು. ಇನ್ನು ಉಪಾದಾನಕಾರಣ (ಅಜ್ಞಾನ)ವಿಲ್ಲದೆ ಉಪದೇಯಸ್ಥಿತಿ (ಅಜ್ಞಾನಕಾರ್ಯ) ಉಂಟಾಗಲು ಸಾಧ್ಯವಿಲ್ಲ.

**॥अज्ञान निवृत्तौ इति॥**

ಇನ್ನು ತಮ್ಮ ಮತದಲ್ಲಿ ಅಜ್ಞಾನವೇ ಅಸಂಭವವಾದ್ದರಿಂದ ಅಜ್ಞಾನನಿವೃತ್ತಿಯು ಅಜ್ಞಾನ ವಾಗಲು ಸಾಧ್ಯವಿಲ್ಲ, ಮತ್ತು ಉಪದೇಯಸ್ಥಿತಿಯನ್ನು ಹೊಂದಲೂ ಸಾಧ್ಯವಿಲ್ಲ. ಆದ್ದರಿಂದ, ಅಜ್ಞಾನನಿವೃತ್ತಿರೂಪ ಮೋಕ್ಷವು ಅಜ್ಞಾನವೂ ಅಲ್ಲ, ಅಜ್ಞಾನಕಾರ್ಯವೂ ಅಲ್ಲ. ಹೀಗೆ ಅದರ ಸ್ವರೂಪವೇ ಇಲ್ಲದಂತಾಗುವದು. ಅದರಂತೆ ಅಜ್ಞಾನನಿವೃತ್ತಿರೂಪ ಆತ್ಮಾತಿರಿಕ್ತ ಪಂಚಮಪ್ರಕಾರ ರೂಪ ಮೋಕ್ಷ ಎಂದು ಹೇಳುವದು ದೂರವಿರಲಿ.

**॥ किंच इति॥**

ಮತ್ತು ಘಟಾದಿಗಳ ಸತ್ಯತ್ವ, ಶಶವಿಶಾಣಾದಿಗಳ ಅಸತ್ಯತ್ವ,

**॥घटादीनाम एव देश्कालादि इति॥**

ಘಟಾದಿಗಳ ದೇಶ ಕಾಲಾದಿ ವ್ಯವಸ್ಥೆಯಂತೆ ಅವುಗಳ ಸದಸತ್ವ ಎಂಬ ಪ್ರಕಾರತ್ರಯಗಳು ಗಳು ಮಾತ್ರ ಅನುಭವ ಸಿದ್ಧವಾಗಿವೆ.

ಘಟಾದಿಗಳ ಸದಸತ್ವ ವನ್ನು ಹೀಗೆ ವಿವರಿಸಬಹುದು: ಘಟಾದಿಗಳು ಸ್ವದೇಶಾದಿಗಳಲ್ಲಿ (ಸ್ವದೇಶ ಮತ್ತು ಈಗಿನ ಕಾಲ) ಸತ್ಯ, ದೇಶಾಂತರಗಳಲ್ಲಿ (ತಾನಿದ್ದಕಿಂತ ಬೇರೆ ದೇಶಗಳಲ್ಲಿ ಮತ್ತು ಬೇರೆ ಸಮಯದಲ್ಲಿ ) ಅಸತ್ಯ ಎಂಬ ಭಾವವಿರುತ್ತದೆ.

ಇದನ್ನು ಇನ್ನೊಂದು ರೀತಿಯಿಂದಲೂ ವಿವರಿಸಬಹುದು ಅದು ಹೀಗಿರುತ್ತದೆ: ಘಟವು स्व–उपाधि ಯಲ್ಲಿ ಸತ್ಯ ಮತ್ತು पर–उपाधि ಯಲ್ಲಿ ಅಸತ್ಯ; ಈಗ ಸತ್ಯ ಮತ್ತು ಕಾಲಾಂತರದಲ್ಲಿ

ಅಸತ್ಯ; ಘಟತ್ವ ಪ್ರಕಾರದಿಂದ ಸತ್ಯ ಮತ್ತು ಪಟತ್ವ ಪ್ರಕಾರದಿಂದ ಅಸತ್ಯ.
ಮೇಲಿನ ಘಟಾದಿಗಳ ದೇಶ ಕಾಲಾದಿ ವ್ಯವಸ್ಥೆಯಿಂದ, ಸದಸದ್ವಿಲಕ್ಷಣರೂಪ ಚತುರ್ಥಪ್ರಕಾರವನ್ನೂ ಹೇಳಬಹುದಲ್ಲ. ಅದು ಹೀಗೆ ವಿವರಿಸಬಹುದು: ಘಟಾದಿಗಳಿಗೆ ಸ್ವದೇಶಾದಿಗಳಲ್ಲಿ ಅಸದ್ವಿಲಕ್ಷಣ ಮತ್ತು ದೇಶಾಂತರಗಳಲ್ಲಿ ಸದ್ವಿಲಕ್ಷಣತ್ವ.
ಇದನ್ನು ಹೀಗೆ ಹೇಳಲಾಗುವದಿಲ್ಲ ಏಕೆಂದರೆ, ಅಭಾವದ ಅಭಾವವು ಭಾವ ವಾಗುವದರಿಂದ, ಸ್ವದೇಶಾದಿಗಳಲ್ಲಿ ಸತ್ಯಕ್ಕಿಂತಲೂ ಅತಿರಿಕ್ತವಾದ, ಅಸದ್ವಿಲಕ್ಷಣದ, ಮತ್ತು ದೇಶಾಂತರಗಳಲ್ಲಿ ಅಸತ್ಯಕ್ಕಿಂತ ಅತಿರಿಕ್ತವಾದ ಸದ್ವಿಲಕ್ಷಣತ್ವ ದ ಅನುಭವವಿರುವದಿಲ್ಲ.
ಆದ್ದರಿಂದ ಪ್ರಕಾರತ್ರಯಗಳು ಮಾತ್ರ ಅನುಭವಸಿದ್ಧವಾಗಿವೆ ಎಂಬ ಭಾವವಿರುತ್ತದೆ.

॥ चतुर्थप्रकार एव इति॥

ಚತುರ್ಥಪ್ರಕಾರದ ಅನುಭವವೇ ಇಲ್ಲ. ಅಂದರೆ ಚತುರ್ಥಪ್ರಕಾರವೇ ಇಲ್ಲದಾಗ, ಮೋಕ್ಷವು ಪಂಚಮಪ್ರಕಾರದ್ದು ಎಂದು ಹೇಳುವದು, ಅಷ್ಟಮರಸದಂತೆ ಅತ್ಯಂತ ಅಸಂಭಾವನೀಯವಾಗಿದೆ. ಪ್ರಪಂಚದಲ್ಲಿ ಷಡ್-ರಸಗಳ ಮಾತ್ರ ಅನುಭವವಿರುವದು. ಸಪ್ತಮರಸದ ಅನುಭವವೇ ಇಲ್ಲ. ಇನ್ನು ಅಷ್ಟಮರಸ ಅತ್ಯಂತ ಅಸಂಭಾವಿತ ಎಂದರ್ಥ.

**೪.೫.೨.೪ ವೇದಾದಿಶಾಸ್ತ್ರಗಳಿಗೆ ಅಧಿಕಾರಿಯ ಅಭಾವತೆ**

## टीका

**अज्ञान असंभवाद् अधिकारि च निरस्तम इतुक्तं, तद्विवरणं अर्थं आह-**

"अज्ञान असंभवात् एव तन्मतं अखिलं अपाकृत्म्" ಎಂಬ ತಮ್ಮ ಪೂರ್ವವಾಕ್ಯದಲ್ಲಿ ಹೇಳಿದಂತೆ, ಪರಪಕ್ಷದಲ್ಲಿ अज्ञान ಅಸಂಭವಾದ್ದರಿಂದ, अधिकारि ಕೂಡ ಲಭಿಸುವದಿಲ್ಲ ಎಂಬುದನ್ನು ಶ್ರೀಮದಾಚಾರ್ಯರು ಈಗ ವಿವರಿಸಿ ಹೇಳುತ್ತಾರೆ,

## मायावाखण्डनम्
## विषय प्रयोजन अभावाद् एव अधिकारी च।

**ಶಾಸ್ತ್ರಗಳಿಗೆ ವಿಷಯಪ್ರಯೋಜನಗಳು ಇಲ್ಲದಿರುವದರಿಂದ ಅವುಗಳ ಅಧ್ಯಯನ ಮಾಡಬಯಸುವ ಜಿಜ್ಞಾಸುವು ಇಲ್ಲ.**

## टीका

**निरस्त इति सम्बन्धः। यो हि यत् प्रयोजनं अर्थयमानो यं विषयं जिज्ञासते, स**

**एव अत्र अधिकारि भवति। प्रकृते च अज्ञान् असम्भवेन विषय प्रयोजने निराकृते इति, तद् अभावत् एव, तद्विनाभूतो अधिकारी च निरस्तो वेदितव्यः।**

ಇಲ್ಲಿ, निरस्त ಪದದ ಸಂಬಂಧವನ್ನು ಜೋಡಿಸಿ ಅರ್ಥಮಾಡಬೇಕು. ಯಾವನು ಪ್ರಯೋಜನವಿದ್ದ ವಿಷಯವನ್ನು ಜಿಜ್ಞಾಸಿಸುತ್ತಾನೊ, ಅವನೇ ಅಧಿಕಾರಿ.
ಪ್ರಕೃತದಲ್ಲಿ, ಅಜ್ಞಾನವೇ ಅಸಂಭವವೆನಿಸಿದಾಗ, ವಿಷಯಪ್ರಯೋಜನಗಳನ್ನು ನಿರಾಕರಿಸಲಾಗಿ, ಅವುಗಳೇ ಇಲ್ಲವಾದಾಗ, ಅಧಿಕಾರಿ ಕೂಡ ಇಲ್ಲವೆಂದಾಗುತ್ತದೆ ಎಂದು ತಿಳಿಯಬೇಕು.
ಹಾಗೂ, ವಿಷಯಪ್ರಯೋಜನಗಳು ಪ್ರತ್ಯೇಕವಾಗಿ ಅಧಿಕಾರಿಪ್ರತಿ ವ್ಯಾಪಕವಾಗಿರುತ್ತವೆ. ಇನ್ನು ವಿಷಯಪ್ರಯೋಜನಗಳು ಇಲ್ಲವೆಂದಾಗ, ಅವುಗಳು ಪ್ರತ್ಯೇಕವಾಗಿ ಅಧಿಕಾರಿ ಲಭಿಸದಿದ್ದಕ್ಕೆ ಹೇತುಗಳಾಗುತ್ತವೆ ಎಂದು ತಿಳಿಯಬೇಕು.

### ೪.೫.೨.೫ ವೇದಾದಿಶಾಸ್ತ್ರಗಳಿಗೆ ಸಂಬಂಧದ ಅಭಾವತೆ

**टीका**

**अज्ञान असम्भवात् संम्बन्ध अभाव उक्तः। तम् उपपादयति-**

"अज्ञान असंभवात् एव तन्मतं अखिलं अपाकृत्म्" ಎಂಬ ತಮ್ಮ ಪೂರ್ವವಾಕ್ಯದಲ್ಲಿ ಹೇಳಿದಂತೆ, ಪರಪಕ್ಷದಲ್ಲಿ ಅಜ್ಞಾನ ಅಸಂಭವಾದ್ದರಿಂದ, ಸಂಬಂಧ ಲಭಿಸುವದಿಲ್ಲ ಎಂಬುದನ್ನು ಶ್ರೀಮದಾಚಾರ್ಯರು ಈಗ ವಿವರಿಸಿ ಹೇಳುತ್ತಾರೆ,

**मायावाखण्डनम्**
**तत् अभावात् एव सम्बन्धोऽपि।**

**ವಿಷಯ, ಪ್ರಯೋಜನ ಮತ್ತು ಅಧಿಕಾರಿ ಇಲ್ಲವಾದಮೇಲೆ ಅವುಗಳಿಗೆ ಪರಸ್ಪರ ಸಂಬಂಧವೂ ಇರುವದಿಲ್ಲ.**

**टीका**

**सतां एव हि सम्बन्धो भवति। अज्ञान असम्भवेन विषयादि अभावश्च उपापदितः। अतो विषयादि अभावात् सम्बन्धोऽपि निरस्त एव।**

ಸತ್ಯವಾದ ವಿಷಯಗಳಲ್ಲಿ ಮಾತ್ರ ಸಂಬಂಧ ಇರಲು ಸಾಧ್ಯ. ಸಾಧ್ಯಸಾಧನ ಭಾವಲಕ್ಷಣ ಸಂಬಂಧ ಸತ್ಯವಾದವುಗಳಲ್ಲಿ ಕಂಡುಬರುತ್ತದೆ. ಅದು ಅಸತ್ಯವಾದ ವಿಷಯ ಪ್ರಯೋಜನ ಗಳಲ್ಲಿ ಕಂಡುಬರುವದಿಲ್ಲ. ಅಂದರೆ ಅಸತ್ಯವಾದ शशशृंग ಹಾಗೂ ಅಸತ್ಯವಾದ नृशृंग ಗಳಲ್ಲಿ ಸಂಬಂಧ ಇರುವದಿಲ್ಲ ಎಂದರ್ಥ.

ಇಲ್ಲಿ ಅಜ್ಞಾನದ ಅಸಂಭವತೆಯಿಂದ, ವಿಷಯಾದಿಗಳು ಲಭಿಸುವದಿಲ್ಲವೆಂದು ಈಗಾಗಲೆ ಉಪಪಾದಿಸಲಾಗಿದೆ.

ಅದರಂತೆ, ವಿಷಯಾದಿಗಳು ಇಲ್ಲದಿದ್ದಾಗ, ಅವುಗಳಲ್ಲಿಯ ಸಂಬಂಧವನ್ನು ಕೂಡ ನಿರಾಕರಿಸದಂತೇ ಆಯಿತು. ಅಂದರೆ, ಅಧಿಕಾರಿ ವಿಷಯಾದಿಗಳಲ್ಲಿಯ ಜ್ಞಾತೃತ್ವ-ಜ್ಞೆಯತ್ವ ಭಾವಾದಿಗಳನ್ನು ನಿರಾಕರಿಸಲಾಯಿತು ಎಂದರ್ಥ.

ಹೀಗೆ ವೇದಾದಿಶಾಸ್ತ್ರಗಳು ಜೀವಬ್ರಹ್ಮಐಕ್ಯ ಪ್ರತಿಪಾದಿಸಿದಲ್ಲಿ, ಅವುಗಳಿಗೆ ಅನುಬಂಧ ಚತುಷ್ಟಗಳು ಲಭಿಸಲಾರವು, ಆದ್ದರಿಂದ ಅವುಗಳಿಗೆ ಅನಾರಂಭಣೀಯತ್ವ ಉಂಟಾಗುವದರಿಂದ ವೇದಾದಿಶಾಸ್ತ್ರಗಳು ಜೀವಬ್ರಹ್ಮಐಕ್ಯವನ್ನು ಪ್ರತಿಪಾದಿಸಲಾರವು ಎಂದು ಪ್ರಸ್ಥಾಪಿಸಲ್ಪಟ್ಟಿತು.

## ೫. ವೇದಾದಿಶಾಸ್ತ್ರಗಳಿಗೆ ಆಗಮಪ್ರಮಾಣಗಳಿಂದ ಪರಾಭಿಪ್ರೆತ ವಿಷಯಾದಿಗಳ ನಿರಾಕರಣೆ ಹಾಗೂ ಸ್ವಾಭಿಪ್ರೆತ ವಿಷಯಾದಿಗಳ ಸಮರ್ಥನೆ

### टीका

**एवं वेदादेः जीवब्रह्मणोः एकत्व प्रतिपादकत्वे अनारम्भणीयत्व प्रसंगात् न तत् प्रतिपादकत्वं इत्युक्तम्। इदानीं परमाप्ततमेन भगवता, श्रुत्या च विष्णोः सर्वोत्तमत्वस्यैव सर्वशास्त्रप्रतिपाद्यतया अभिहितत्वाच्च तदेव वेदादिप्रतिपाद्यं, न आत्मब्रह्मैक्यं इति आह्-**

ಈವರೆಗೆ, ಯುಕ್ತಿಬಲದಿಂದ ವೇದಾದಿಶಾಸ್ತ್ರಗಳಿಗೆ ಪರಾಭಿಪ್ರೆತ ವಿಷಯಾದಿಗಳನ್ನು

ನಿರಾಕರಿಸಿ, ಈಗ ಆಗಮಗಳ ಬಲದಿಂದಲೂ ಪರಾಭಿಪ್ರೇತ ವಿಷಯಾದಿಗಳನ್ನು ನಿರಾಕರಿಸಿ, ಸ್ವಾಭಿಪ್ರೇತ ವಿಷಯಾದಿಗಳನ್ನು ಶ್ರೀಮದಾಚಾರ್ಯರಉ ಸಮರ್ಥಿಸುತ್ತಾರೆ. ಹಾಗೂ ಪರಮ ಆಪ್ತನೆನಿಸಿದ ಭಗವಂತನ, ಮತ್ತು ಶೃತಿ ವಾಕ್ಯಗಳಿಂದ, ಶ್ರೀವಿಷ್ಣುಸರ್ವೋತ್ತಮತ್ವವನ್ನೆ ಸರ್ವಶಾಸ್ತ್ರಗಳು ಪ್ರತಿಪಾದಿಸುತ್ತವೆ ಎಂದು ಹೇಳಲ್ಪಟ್ಟದ್ದರಿಂದ, ಶ್ರೀವಿಷ್ಣುವೇ ವೇದಾದಿ ಪ್ರತಿಪಾದ್ಯನು, ಜೀವಬ್ರಹ್ಮಐಕ್ಯಅಲ್ಲ, ಎಂದು ಪ್ರತಿಪಾದಿಸುತ್ತಾರೆ.

## *೪.೧ ಭಗವದ್ಗೀತೆಯಲ್ಲಿಯ ಭಗವದ್ ವಚನ*

ಈಗ ಮೊದಲಿಗೆ, ಭಗವದ್ ಗೀತಾಗ್ರಂಥದಲ್ಲಿಯ ಭಗವಂತನ ವಚನವನ್ನು ಉದಾಹರಿಸುತ್ತಾರೆಃ

मायावाखण्डनम्
द्वाविमौ पुरुषौ लोके क्षरश्चाक्षर एव च।
क्षरः सर्वाणि भूतानि कूटस्थोऽक्षर उच्यते॥
उत्तमः पुरुषस्त्वन्यःपरमात्मेत्युदाहृतः।
यो लोकत्रयमाविश्य बिभर्त्यव्यय ईश्वरः॥
यस्मात्क्षरमतीतोऽहमक्षरादपि चोत्तमः।
अतोऽस्मिलोके वेदे च प्रथितः पुरुषोत्तमः॥
यो मामेवमसंमूढो जानाति पुरुषोत्तमम्।
स सर्वविद्भजति मां सर्वभावेन भारत॥
इति गुह्यतमं शास्त्रमिदमुक्तं मयाऽनघ।
एतद्बुद्ध्वा बुद्धिमान् स्यात्कृतकृत्यश्च भारत॥

ಈ ಭಗವದ್ ವಚನದ ಒಂದೊಂದು ಶ್ಲೋಕವನ್ನು ತೆಗೆದುಕೊಂಡು, ಅದರ ಪದವಿನ್ಯಾಸ, ಅನ್ವಯದೊಂದಿಗೆ ಅರ್ಥಮಾಡಿಕೊಳ್ಳೋಣ. ಈಗ ಮೊದಲಿನ ಶ್ಲೊಕ,

द्वाविमौ पुरुषौ लोके क्षरश्चाक्षर एव च।
क्षरः सर्वाणि भूतानि कूटस्थोऽक्षर उच्यते॥

अन्वयः इमौ लोके, पुरुषौ क्षर, अक्षर च द्वौ एव, क्षरः सर्वाणि भूतानि कूटस्थः अक्षर उच्यते।

द्वाविमौ पुरुषौ लोके क्षरश्चाक्षर एव च।

## टीका

## "इमौ" इति प्रमाणसिद्धतां सूचयति। पुरुषौ चेतनौ। एव शब्दस्य द्वौ एव इति संबन्धः। तद्धटनाय परम पूरुषं व्यावर्तयितुम् लोके इतुक्तम्।

ಇಲ್ಲಿ "इमौ" ಪದವು ಪ್ರಮಾಣದಿಂದ ಸಿದ್ಧವಾದದ್ದು ಎಂದು ಸೂಚಿಸುತ್ತದೆ. ಇನ್ನು"पुरुषौ" ಪದದ ಅರ್ಥ ಚೇತನರು ಎಂದರ್ಥ. ಇನ್ನು "एव" ಶಬ್ದವು "द्वौ एव" ಎಂಬ ಸಂಬಂಧವನ್ನು ಸೂಚಿಸುತ್ತದೆ. ಇದನ್ನು ಘಟಿಸಲು ಹಾಗೂ ಪರಮ ಪುರುಷನನ್ನು ಈ ವಿಂಗಡನೆಯಿಂದ ಹೊರಗಿಡಲು लोके ಎಂದು ಹೇಳಲಾಗಿದೆ.

### ಟಿಪ್ಪಣಿಗಳವಿಶೇಷ ವಿವರಣೆ

### ॥इमौ" इति॥

क्षर–अक्षर ಎಂಬ ಸಮಸ್ತ ಚೇತನರು ಪ್ರತ್ಯಕ್ಷದಿಂದ ಸಿದ್ಧವಾಗಿರುವದಿಲ್ಲ ಆದ್ದರಿಂದ द्वौ इमौ ಎಂದು ಹೇಳುವದು ಸರಿಯಲ್ಲ, ಎಂಬ ಶಂಕೆಯನ್ನು ದೂರಮಾಡಲು, ಟೀಕಾಕೃತ್ಪಾದರು इमौ ಪದದ ಅರ್ಥವನ್ನು ಸೂಚಿಸುತ್ತಾರೆ. ಇಲ್ಲಿ, इमौ ಪದವು ಪ್ರಮಾಣದಿಂದ ಸಿದ್ಧವಾದದ್ದು ಎಂದು ಸೂಚಿಸುತ್ತದೆ.

### ॥पुरुषौ चेतनौ इति॥

"ब्रह्मा शिवस्सुरेशाद्याः शरीर क्षरणात् क्षराः" ಎಂಬ ಪ್ರಮಾಣಾನುಸಾರವಾಗಿ, ಬ್ರಹ್ಮಾದಿ ಪುರುಷರಂತೆ, ಸರಸ್ವತ್ಯಾದಿ ಸ್ತ್ರೀಯರು ಕೂಡ ಅನಿತ್ಯ ಶರೀರವುಳ್ಳವರಾದ್ದರಿಂದ, ಅವರಿಗೂ ಕೂಡ क्षर ಶಬ್ದವಾಚ್ಯತ್ವದಲ್ಲಿ ಪರಿಗಣಿಸಬೇಕು. ಇನ್ನು द्वौ पुरुषौ ಎಂದು ಹೇಳಿದರೆ, क्षर ಶಬ್ದವಾಚ್ಯರಾದ ಸರಸ್ವತ್ಯಾದಿ ಸ್ತ್ರೀಯರು ಹಾಗೂ अक्षर ಶಬ್ದವಾಚ್ಯಳಾದ ರಮಾದೇವಿ, द्वौ पुरुषौ ರಲ್ಲಿ ಪರಿಗಣಿಸಲಾಗುವದಿಲ್ಲ. ಅವರನ್ನು ಕೂಡ द्वौ पुरुषौ ರಲ್ಲಿ ಪರಿಗಣಿಸಲಾಗುತ್ತದೆ, ಎಂಬ ಉದ್ದೇಶದ ಹಿನ್ನೆಲೆಯಲ್ಲಿ, ಟೀಕಾಕೃತ್ಪಾದರು पुरुष ಶಬ್ದಾರ್ಥವನ್ನು ಹೇಳುತ್ತಾರೆ. पुरुषौ ಎಂದರೆ, ಎಲ್ಲ ಅಸ್ವತಂತ್ರ ಚೇತನರು ಎಂದರ್ಥ.

ಅಥವಾ, ಲೋಕದಲ್ಲಿ, ಸ್ತ್ರೀ ಮತ್ತು ನಪುಂಸಕರು ಇರುತ್ತಾರೆ. ಆದ್ದರಿಂದ लोके द्वौ पुरुषौ ಎಂದು ಹೇಳುವದು ಸರಿಯೆನಿಸುವದಿಲ್ಲ. ಅವರನ್ನು ಕೂಡ पुरुष ಶಬ್ದವು ಗ್ರಹಿಸುತ್ತದೆ ಎಂದು ಸ್ಪಷ್ಟಪಡಿಸಲು, ಟೀಕಾಕೃತ್ಪಾದರು, पुरुष ಶಬ್ದದ ಅರ್ಥವನ್ನು ಹೇಳುತ್ತಾರೆಃ पुरुषौ ಎಂದರೆ, ಎಲ್ಲ ಅಸ್ವತಂತ್ರ ಚೇತನರು ಎಂದು..

**॥एव शब्दस्य इति॥**

एव ಶಬ್ದವು द्वौ ಶಬ್ದದ ಜೊತೆ ಸಂಬಂಧ ಪಡೆಯುತ್ತದೆ.

(पुरुषौ) क्षर:, अक्षर: च, द्वौ एव इति, ಎಂದು ಮೂಲ ಶ್ಲೋಕದಲ್ಲಿ ಇತಿ ಶಬ್ದವನ್ನು ಅಧ್ಯಾಹಾರಮಾಡಕೊಂಡು ಅರ್ಥಮಾಡ ಬೇಕು. ಅದರಂತೆ, ಎಲ್ಲ ಅಸ್ವತಂತ್ರ ಚೆತನರು ಕ್ಷರ, ಅಕ್ಷರ ಎಂದು ಎರಡೇ ವಿಧ ಉಳ್ಳವರಾಗಿದ್ದಾರೆ ಎಂದರ್ಥ.

ಇಲ್ಲಿ, च ಇದು ಸಮುಚ್ಚಯಾರ್ಥದಲ್ಲಿ ಉಪಯೋಗಿಸಲಾಗಿದೆ.

**॥तद्घटनाय इति॥**

ಪರಮ ಪುರುಷನು ಈ ವಿಂಗಡನೆಯಲ್ಲಿ ಸೇರುವದಿಲ್ಲ ಎಂಬುದನ್ನು ತಿಳಿಸಲು लोके ಎಂದು ಹೇಳಲಾಗಿದೆ.

लोके ಎಂದು ಹೇಳದೆ ಇದ್ದಲ್ಲಿ, क्षराक्षर ವ್ಯತಿರೇಕದಿಂದ ईश्वर ನನ್ನು ಕೂಡ ಗ್ರಹಿಸಬೇಕಾದಪ್ರಸಂಗ ಬರುವದರಿಂದ, ಹಾಗೂ द्वौ एव ಎಂಬ ಅವಧಾರಣೆ ತಪ್ಪಾಗುವದರಿಂದ, ईशितव्यवर्गवाचि, ಅಂದರೆ ಲೋಕದ ಒಡೆಯನನ್ನು ಪ್ರತ್ಯೇಕಿಸುವ लोक ಶಬ್ದಪ್ರಯೋಗವಿರುತ್ತದೆ.

ಅವರು ಯಾರು?

<u>क्षर: सर्वाणि भूतानि कूटस्थ: अक्षर उच्यते।</u>

<u>क्षर: सर्वाणि भूतानि</u>: क्षर ಎಂದರೆ, ಅನಿತ್ಯಶರೀರ ಉಳ್ಳವರು, सर्वाणि भूतानि ಎಂದರೆ ಬ್ರಹ್ಮಾದಿ ಸಕಲ ಚೇತನರು. ಅನಿತ್ಯ ಶರೀರ ಉಳ್ಳವರಾದ ಬ್ರಹ್ಮಾದಿ ಸಕಲ ಚೇತನರು ಎಂದರ್ಥ. ಇದನ್ನೆ ಈ ಉಕ್ತಿಯು ಸ್ಪಷ್ಟಪಡಿಸುತ್ತದೆ " ब्रह्मा शिवस्सुरेशाद्या: शरीरक्षरणात् क्षरा:"इति.

<u>कूटस्थ: अक्षर उच्यते</u>: "कूटं खं व्योम सन्धिराकाश उच्यते" ಎಂಬ ಉಕ್ತಿಯಂತೆ, कूटं ಎಂದರೆ अव्याकृत आकाश. अव्याकृत आकाशದ ಅಭಿಮಾನಿ ದೇವತೆ कूटस्थ ಶಬ್ದವಾಚ್ಯ महालक्ष्मी, अ–क्षर, (शरीर क्षरण अभावात् इति) ನಿತ್ಯಶರೀರ ಉಳ್ಳವಳಾಗಿದ್ದರಿಂದ अक्षर ಎನಿಸಿದ್ದಾಳೆ.

"लक्ष्मी: अक्षरदेहत्वात् अक्षरा" इति, कूट्स्थ पुरुष: महालक्ष्मी: अक्षर:।

पुंवत् शक्तियुक्तत्वात् पुल्लिंग शब्दवाच्यत्वम् युक्तम्। ಅದರಂತೆ महालक्ष्मी ಗೆ पुरुष शब्दवाच्यत्व ಯುಕ್ತವಾಗಿದೆ. ಇದನ್ನೆ "पुल्लिंगेन उच्यते श्रीश्च पुंवत् शक्तिमती यत:" ಈ ಉಕ್ತಿಯು ಸಮರ್ಥಿಸುತ್ತದೆ.

ಇವರೆಗಿನ ವಿವೇಚನೆಯಿಂದ, ಈ ಶ್ಲೋಕದ ಅರ್ಥ ಹೀಗಾಗುತ್ತದೆ:

**ಪರಮಾತ್ಮನಿಂದ ವ್ಯಾವರ್ತಿಸಲ್ಪಟ್ಟ ಪ್ರಾಮಾಣಿಕವಾದ, ಈ ಲೋಕದಲ್ಲಿ, ಅಸ್ವತಂತ್ರ ಚೇತನರು ಕ್ಷರ ಹಾಗೂ ಅಕ್ಷರ ಎಂದು ಎರಡೇ ವಿಧ ಉಳ್ಳವರಾಗಿದ್ದಾರೆ. ಬ್ರಹ್ಮಾದಿಸಕಲಚೇತನರು ಅನಿತ್ಯ ಶರೀರದವರಾಗಿರುವದರಿಂದ ಕ್ಷರ ಎಂದೆನಿಸಿದ್ದರೆ. ಹಾಗೂ ಅವ್ಯಾಕೃತ ಆಕಾಶದ ಅಭಿಮಾನಿ ದೇವತೆ ಮಹಾಲಕ್ಷ್ಮೀ ನಿತ್ಯಶರೀರವುಳ್ಳವಳಾಗಿದ್ದರಿಂದ ಅಕ್ಷರ ಎನಿಸಿದ್ದಾಳೆ.**

## टीका

## तत् अनेन उत्तमपुरुष निरूपणस्य अपेक्षितं पुरुष निरूपणं कृतम्। तत् किं इत्यत आह-

ಇಲ್ಲಿ, ಹೀಗೆ ಉತ್ತಮಪುರುಷನ ನಿರೂಪಣೆಯು, ನಿಪುರುಷನರೂಪಣೆಯನ್ನು ಅಪೇಕ್ಷಿಸುವದರಿಂದ, ಮೊದಲಿಗೆ ಪುರುಷನ ಸ್ವರೂಪವನ್ನು ವಿವರಿಸಲಾಗಿದೆ. ಉತ್ತಮಪುರುಷನು ಯಾರು? ಅದನ್ನೆ ಮುಂದಿನ ಶ್ಲೋಕ ವಿವರಿಸುತ್ತದೆ:

उत्तमः पुरुषस्त्वन्यःपरमात्मेत्युदाहृतः।
यो लोकत्रयमाविश्य बिभर्त्यव्यय ईश्वरः॥

अन्वयः उत्तमः पुरुषः तु अन्यः परमात्मा इति उदाहृतः। यः ईश्वरःअव्ययः लोकत्रयं आविश्य बिभर्ति।

उत्तमः पुरुषस्त्वन्यः...।

## टीका

## अन्यः क्षर-अक्षराभ्याम्, न तु अनयोः एव एकः, पुरुषोत्तमः कल्प्यत इति भावः।

उत्तमपुरुष ಎಂದರೆ ಶ್ರೇಷ್ಠ, क्षर अक्षर ಪುರುಷರಗಿಂತ ಬೇರೆಯಾದವನು ಉತ್ತಮ ಪುರುಷನು. ಇದನ್ನು अन्यः ಪದವು ಸ್ಪಷ್ಟವಾಗಿ ತಿಳಿಸುತ್ತದೆ. उत्तमपुरुष ನು क्षर ಮತ್ತು अक्षर ಪುರುಷರಲ್ಲಿಯೆ ಒಬ್ಬನಾದವನು ಎಂದು ಕಲ್ಪಿಸುವ ಅವಕಾಶವನ್ನೂ, तु ಶಬ್ದವು ತಳ್ಳಿ ಹಾಕುತ್ತದೆ.

**ಟಿಪ್ಪಣಿಗಳವಿಶೇಷ ವಿವರಣೆ**

## || पुरुषोत्तमः इति ||

पुरुषोत्तमः ಎಂಬಲ್ಲಿ समानाधिकरण ಸಮಾಸ ಆಗುವದಿಲ್ಲ. ಏಕೆಂದರೆ "सन्महत्परमोत्तम उत्कृष्टाः पूज्यमानैः" ಎಂಬ ಸೂತ್ರದಂತೆ प्रथमा ವಿಭಕ್ತಿಯಲ್ಲಿ ನಿರ್ದಿಷ್ಟವಾದ उत्तम ಶಬ್ದದ, पूर्वनिपात ಪ್ರಸಂಗ ಉಂಟಾಗುತ್ತದೆ. ಇನ್ನು ಇದು षष्ठीसमास ಕೂಡ ಆಗುವದಿಲ್ಲ. ಏಕೆಂದರೆ, "न निर्धारणे" ಯಂತೆ ಸಮಾಸದ ವಿರೋಧ ಬರುತ್ತದೆ. ಅದರಂತೆ, "पञ्चमी भयेन" ಎಂಬಲ್ಲಿ, "पञ्चमी" ಎಂದು योग विभाग ಮೆರೆಗೆ ಅಥವಾ "कर्तृकरणे कृता बहुलं" ಎಂಬ ಬಹುಲಗ್ರಹಣದಿಂದ "ग्रामात् निर्गतः" ಎಂಬಂತೆ, पञ्चमी समास ಎಂದು ತಿಳಿಯಬೇಕು. ಆದ್ದರಿಂದಲೆ, ಮುಂದಿನ ಶ್ಲೋಕದಲ್ಲಿ "अक्षरादपि उत्तमः" ಎಂಬ ನಿರ್ದೇಶವಿರುತ್ತದೆ.

ಇನ್ನು ಕೆಲವರು "यतश्च निर्धारणं" ಎಂಬ ಸೂತ್ರದಂತೆ, निर्धारणे सप्तमि ಎಂಬ ವಿಧಾನದಂತೆ, ಅದಕ್ಕೆ ಯಾವದೆ ಸಮಾಸದ ವಿರೋಧವಿಲ್ಲದ ಕಾರಣ सप्तमी समास ಎಂತಲೂ ಹೇಳುತ್ತಾರೆ.

### टीका

### अन्यस्य उत्तम पुरुषत्वे श्रुत्यादि सम्मतिम् आह-

ಇಂತಹ उत्तमपुरुष ನಲ್ಲಿ, ಶೃತ್ಯಾದಿಗಳ ಸಮ್ಮತಿಯನ್ನು ಸೂಚಿಸಲು ಹೇಳುತ್ತಾರೆಃ

परमात्मा इति उदाहृतः...।

### टीका

### आत्म शब्दः अत्र चेतन पर्यायः।

ಆದ್ದರಿಂದ ಶೃತಿಗಳು ಇವನನ್ನು परमात्मा ಎಂದು ಕರೆದಿವೆ. "परमात्मा व्यवस्थितः", "आत्मा नारायणः परः" ಇತ್ಯಾದಿ ಶೃತಿಗಳಿಂದ परमात्मा ಪದವು, नारायण ಪರವಾಗಿರುತ್ತದ ಹಾಗೂ आत्मा ಪದವು चेतन ಪರವಾಗಿರುತ್ತದೆ. परम ಪದವು उत्तम ಪರವಾಗಿರುತ್ತದೆ. परमात्मा ಶಬ್ದವು चेतनोत्तमत्वरूप पुरुषोत्तमत्वं ವನ್ನು ಹೇಳುತ್ತದೆ.

### टीका

### युक्तिं च आह-

क्षर ಮತ್ತು अक्षर ಪುರುಷರಕ್ಕಿಂತ ಅನ್ಯನಾದ उत्तमपुरुष ನಿದ್ದಾನೆ ಎಂದು ಶೃತ್ಯಾದಿ

ಸಮ್ಮತಿಯನ್ನು ಹೇಳಿ, ಈಗ ಯುಕ್ತಿ ಇಂದಲೂ ತಿಳಿಸುತ್ತಾರೆ.

यः लोकत्रयं आविश्य बिभर्ति.....

## टीका

### यो हि यस्य भर्ता स तस्मात् उत्तमो युक्तः।

यः ಅಂದರೆ ಇವನು लोकत्रयं आविश्य, ಅಂದರೆ ಮೂರುಲೋಕಗಳಲ್ಲಿದ್ದು, बिभर्ति ಅಂದರೆ ಅವುಗಳ ಧಾರಕ, ಪೋಷಕ ಹಾಗೂ ಕರ್ತಾ ಆಗಿದ್ದಾನೆ ಎಂದರ್ಥ. ಅಂದರೆ, ಇವನು ಮೂರು ಲೋಕಗಳಲ್ಲಿದ್ದು, ಅವುಗಳ ಧಾರಕ, ಪೋಷಕ ಹಾಗೂ ಕರ್ತಾ ಅಗಿದ್ದಾನೆ, ಎಂದರೆ ಅವುಗಳ ಒಡೆಯನಾಗಿದ್ದಾನೆ. ಯಾವನು ಯಾವುದರ ಒಡೆಯನಾಗಿದ್ದಾನೆ, ಆದ್ದರಿಂದ ಅವನು ಅವುಗಳಿಂದ ಉತ್ತಮನಗಿದ್ದಾನೆ ಎಂದರ್ಥ. ಅಂದರೆ, ಅವನು ಈ ಮೂರು ಲೋಕಗಳ ಒಡೆಯನಾಗಿರುವುದರಿಂದ ಉತ್ತಮ ಎನಿಸಿದ್ದಾನೆ ಎಂದರ್ಥ.

## टीका

### आविष्टस्य तन्नाशे नाशप्रसंगः इत्यत आह-

ಇನ್ನು ಮೂರು ಲೋಕಗಳು ನಾಶವಾದಾಗ, ಅದರಲ್ಲಿ ಆವಿಷ್ಟನಾದ, ಆ उत्तमपुरुषನೂ ನಾಶನಾಗುವ ಪ್ರಸಂಗ ಒದಗುವದು, ಎಂದರೆ, ಅದಕ್ಕೆ

.....अव्ययः.....।

ಎಂಬ ಪದವನ್ನು ಇಡಲಾಗಿದೆ. अव्यय ಎಂದರೆ ನಾಶವಿಲ್ಲದವನು ಎಂದರ್ಥ. ಅಂದರೆ, ಮೂರು ಲೋಕಗಳೂ ನಾಶವಾದರೂ, ಅವುಗಳಲ್ಲಿ ಆವಿಷ್ಟನಾದ ಆ उत्तमपुरुष ನು ನಾಶವಾಗುವದಿಲ್ಲ.

## टीका

### तत् कथम्। ऐश्वर्यात् इति आह-

ಅದು ಹೇಗೆ ಸಾಧ್ಯ? ಅವನು ऐश्वर्यादि ಗುಣಗಳಿಂದ ಕೂಡಿದವನಾಗಿದ್ದರಿಂದ. ऐश्वर्य ಎಂದರೆ ಅಘಟಿತಘಟಕ ಶಕ್ತಿಉಳ್ಳವನು ಎಂದರ್ಥ.

..........ईश्वरः......।

ಅದನ್ನೆ ಮಂತ್ರದಲ್ಲಿಯ ईश्वर ಪದ ಸೂಚಿಸುತ್ತದೆ. ईश्वरः ಎಂದರೆ ಅಚಿಂತ್ಯ ಶಕ್ತಿ ಉಳ್ಳವನು ಎಂದರ್ಥ. ಅವನು ಅಚಿಂತ್ಯ ಶಕ್ತಿ ಉಳ್ಳವನಾಗಿದ್ದರಿಂದ, ಮೂರೂ ಲೋಕಗಳು

ನಾಶವಾದರೂ, ಅವನು ನಾಶಹೊಂದುವದಿಲ್ಲ.

ಇವರೆಗಿನ ವಿವೇಚನೆಯಿಂದ, ಈ ಶ್ಲೋಕದ ಅರ್ಥ ಹೀಗಾಗುತ್ತದೆ:

**ಶೃತಿಗಳಲ್ಲಿ ಪರಮಾತ್ಮಾ ಎಂದು ಉದಾಹರಿಸಲ್ಪಟ್ಟ, उत्तमपुरुषನು, क्षर ಮತ್ತು अक्षर ಪುರುಷರಗಿಂತಲೂ ಶ್ರೇಷ್ಟನಾಗಿ ಅತ್ಯಂತ ಭಿನ್ನನಗಿದ್ದಾನೆ. ಅವನು ಅಚಿಂತ್ಯ ಶಕ್ತಿ ಉಳ್ಳವನಾದ್ದರಿಂದ ಸ್ವತಃ ಅವಿನಾಶಿಯಾಗಿ, ಮೂರೂಲೋಕಗಳಲ್ಲಿ ಆವಿಷ್ಟನಾಗಿ, ಅವುಗಳ, ಧಾರಕ, ಪೋಷಕ ಹಾಗೂ ಕರ್ತಾ ಆಗಿದ್ದಾನೆ.**

## टीका

## स च क:। इत्यतो अहमेव इति स प्रमाणकं आह-

ಅವನು ಯಾರು? ಅವನು ಇನ್ನಾರು ಅಲ್ಲ, ಅವನು ನಾನೆ ಎಂದು ಭಗವಂತನು ಸಪ್ರಮಾಣದಿಂದ ಹೇಳುತ್ತಾನೆ:

यस्मात्क्षरमतीतोऽहमक्षरादपि चोत्तम:।
अतोऽस्मिलोके वेदे च प्रथित: पुरुषोत्तम:॥

अन्वय: यस्मात् क्षरं च अतीत:, अक्षरात् अपि उत्तम:, अत: (अहम्) वेदे, लोके च पुरुषोत्तम: प्रथित: अस्मि।

## टीका

## क्षरं च अतीत इति च शब्दान्वय:। लोक शब्देन पौरुषेय आगम उच्यते।

ಇಲ್ಲಿ, क्षरं च अतीत:, ಎಂದು ಶಬ್ದಾನ್ವಯ ವಿರುತ್ತದೆ. लोक ಪದದಿಂದ ಪೌರುಷೇಯ ಗ್ರಂಥಗಳನ್ನು ಗ್ರಹಿಸಲಾಗಿದೆ.

यस्मात् ಅಂದರೆ, ಯಾವಕಾರಣದಿಂದ,

क्षरं च अतीत: ಕ್ಷರ ಪುರುಷರಿಂದ ಉತ್ತಮನೊ

अक्षरात् अपि उत्तम:: ಹಾಗೂ, अक्षर ಳಾದ ಲಕ್ಷ್ಮೀದೇವಿಗಿಂತಲೂ ಉತ್ತಮನೆಂದಿಸಿದ್ದೆನೊ,

अत:: ಆದ್ದರಿಂದ,

(अहम्) वेदे, लोके च पुरुषोत्तम: प्रथित: अस्मि: ನಾನು, ಪೌರುಷೇಯ ಮತ್ತು ಅಪೌರುಷೇಯ ಗ್ರಂಥಗಳಲ್ಲಿ, ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೆನೆ.

ಇವರೆಗಿನ ವಿವೇಚನೆಯಿಂದ, ಈ ಶ್ಲೋಕದ ಅರ್ಥ ಹೀಗಾಗುತ್ತದೆ:

ಯಾವಕಾರಣದಿಂದ, ಕ್ಷರ ಪುರುಷರಿಂದ ಉತ್ತಮನು, ಹಾಗೂ ಅಕ್ಷರಳಾದ ಲಕ್ಷ್ಮೀದೇವಿಗಿಂತಲೂ ಉತ್ತಮನೆನಿಸಿದ್ದರಿಂದ, ನಾನು ಪೌರುಷೇಯ ಹಾಗೂ ಅಪೌರುಷೇಯ ಗ್ರಂಥಗಳಲ್ಲಿ ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೇನೆ.

## टीका

### तात्पर्यद्योतनाय वेत्तुः फलं आह-

ಇಲ್ಲಿ, तात्पर्य ಎಂದರೆ, ತನ್ನ ಪುರುಷೋತ್ತಮತ್ವ ಎಂದರ್ಥ.

उपक्रमोपसंहारौ अभ्यास:अपूर्वता फलम्।
अर्थवादोपपत्ती च लिंगं तात्पर्यनिर्णये॥ इति,

ಎಂಬ ವಚನದಂತೆ ಫಲವು ತಾತ್ಪರ್ಯದ್ಯೋತಕವಾಗಿರುತ್ತದೆ ಎಂದು ತಿಳಿಯಬೇಕು. ಅದರಂತೆ ಮೇಲಿನ ಶ್ಲೋಕಗಳ ತಾತ್ಪರ್ಯವನ್ನು ಮತ್ತಷ್ಟು ಸ್ಪಷ್ಟಪಡಿಸಲು, ಹೀಗೆ, ಪರ್ಮಾತ್ಮನನ್ನು ತಿಳಿದವನಿಗೆ ಫಲವನ್ನು ಹೇಳುತ್ತಾರೆ.

ಇಲ್ಲಿ वेत्तुः ಎಂಬಲ್ಲಿ, "अनित्यं आगम अनुशासनं" ಎಂದು वैयाकरणि ಗಳ ಅಭಿಧಾನವಿರುವದರಿಂದ ಇಟ್ ಪ್ರಯೋಗ ಮಾಡಿಲ್ಲ ಎಂದು ತಿಳಿಯಬೇಕು. ಆದ್ದರಿಂದ ಇಲ್ಲಿ, ज्ञानार्थकस्य विदेः सेट्त्वाद् "वेदितुः" ಎಂದು ಇರಬೇಕಾಗಿತ್ತು ಎಂಬ ಶಂಕೆಗೆ ಆಸ್ಪದ ಇರುವದಿಲ್ಲ.

यो मामेवमसंमूढो जानाति पुरुषोत्तमम्।
स सर्वविद्भजति मां सर्वभावेन भारत॥

अन्वयः हे भारत, यः एवं असंमूढः मां पुरुषोत्तमं जानाति, सर्ववित् सः सर्वभावेन मां भजति।
यो मामेवमसंमूढो जानाति पुरुषोत्तमम्।

यो मामेवमसंमूढो जानाति पुरुषोत्तमम्।

## टीका

### एवं इत्यस्य, व्यावृत्तिनिरासः असंमूढ इति। न तु (पुनः) अश्वकर्णादिवत् सञ्ज्ञामात्रत्वेन इत्यर्थः।

एवं ಎಂಬ ಪದದಿಂದ, पुरुषोत्तम ಪದವು ರೂಢನಾಮವಾಗಬಹುದು ಎಂಬ ಭ್ರಾಂತಿಯನ್ನು ನಿರಾಕರಿಸಲು, असंमूढ ಎಂಬ ಪದವನ್ನು ಇಡಲಾಗಿದೆ. असंमूढ ಎಂದರೆ ನಿಶ್ಚಿತಜ್ಞಾನ

ಎಂದರ್ಥ. ಇದರಿಂದ, पुरुषोत्तम ಪದವು ಕರ್ಣೋಪಕರ್ಣ ಸಂಜ್ಞಾನಾಮವಲ್ಲ ಎಂದು ತಿಳಿಸುತ್ತದೆ. ಆದ್ದರಿಂದ पुरुषोत्तम ಪದವು, ಅನ್ವರ್ಥಕ ನಾಮವಾಗಿರುತ್ತದೆ, ವಿನಹ ಕೇವಲ ರೂಢನಾಮವಲ್ಲ.

**ಟಿಪ್ಪಣಿಗಳವಿಶೇಷ ವಿವರಣೆ**

## ॥ एवं इत्यस्य इति ॥

ಇದನ್ನೆ ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಮೇಲಿನ ಶ್ಲೋಕದಲ್ಲಿ क्षर ಮತ್ತು अक्षर ಚೇತನರಿಂದ ಪರಮಾತ್ಮನ अतीतत्व ಮತ್ತು उत्तमत्व ವನ್ನು ಹೇಳಿದಪ್ರಕಾರದಿಂದ, ಅವನಲ್ಲಿ पुरुषोत्तमत्व ಹೇಗೆ ಕೂಡುತ್ತದೆ? ಮತ್ತು ಹಾಗೆ ಹೇಳುವ ಪ್ರಮಾಣ ಗಳಿಲ್ಲ. ಮತ್ತು, पुरुषोत्तम ಶಬ್ದಾವಯವ ಶಕ್ತಿ ಪರ್ಯಾಲೋಚನಿಯಿಂದ, पुरुषोत्तमत्व ಸಿದ್ಧಿಸುತ್ತದಲ್ಲ ಎಂದು ಹೇಳಲಾಗದು. ಅದು ಅಶ್ವಕರ್ಣಾದಿಗಳಂತೆ ರೂಢನಾಮ ಅಥವಾ ಸಂಜ್ಞಾತ್ಮಕನಾಮವಾಗಿರಬಹುದಲ್ಲ ಎಂದರೆ, ಈ ಶಂಕೆಯ ಪರಿಹಾರ ಹೀಗಿರುತ್ತದೆ:

> ब्रह्मा शिवः सुरेशाद्याः शरीर क्षरणात् क्षराः।
> लक्ष्मीरक्षरदेहत्वात् अक्षरा तत्परो हरिः॥ इति,

ಎಂಬ ಮುಂತಾದ ಶ್ರುತಿವಾಕ್ಯಗಳಿಂದ, क्षर ಮತ್ತು अक्षर ಚೇತನರಿಂದ ಪರಮಾತ್ಮನು ಉತ್ತಮನು ಎಂದು ತಿಳಿದುಬರುತ್ತದೆ. ಅದರಂತೆ पुरुषोत्तम ಇಲ್ಲಿ ಕೇವಲ ಸಂಜ್ಞಾತ್ಮಕನಾಮವಾಗಿರದೆ, ಅನ್ವರ್ಥಕನಾಮವಾಗಿರುತ್ತದೆ. ಅದರಂತೆ, असंमूढ ಪದದಿಂದ, एवं ಪದದಿಂದ पुरुषोत्तम ಪದಕ್ಕೆ ಉಂಟಾಗಬಹುದಾದ ಸಂಜ್ಞಾತ್ಮಕಾರ್ಥದ ಅಭಾಸತೆಯನ್ನು ನಿರಾಕರಿಸಲಾಗಿದೆ ಎಂದರ್ಥ.

## ॥सञ्ज्ञामात्रत्वेन इति॥

ಇದನ್ನೆ ಶ್ರೀನಿವಾಸತೀರ್ಥರು ಹೀಗೆ ವಿವರಿಸುತ್ತಾರೆ:

ಹಿಂದೆ, "यस्मात् क्षरमतीतोऽहम्" ಎಂಬ ಮುಂತಾದವುಗಳಿಂದ,

ಯೌಗಿಕ ಅರ್ಥದಿಂದ क्षर ಮತ್ತು अक्षर ಚೇತನರಿಂದ ಪರಮಾತ್ಮನಿಗೆ अतीतत्व ಮತ್ತು उत्तमत्व ವನ್ನು ಹೇಳಲಾಯಿತು. ಅದನ್ನೆ एवं ಪದದಿಂದ ಈ ಶ್ಲೋಕದಲ್ಲಿ ಪರಾಮರ್ಶಿಸಲಾಗಿದೆ. ಆದರೂ एवं ಪದದಿಂದ पुरुषोत्तम ಪದಕ್ಕೆ ಉಂಟಾಗಬಹುದಾದ ಹಿಂದಿನ ಯೌಗಿಕ ಅರ್ಥಕ್ಕಿಂತ ಬೇರೆಯಾದ ರೂಢನಾಮಾರ್ಥಕದ ಅಭಾಸತೆಯನ್ನು असंमूढ ಪದದಿಂದ ನಿರಾಕರಿಸುತ್ತಾರೆ.

ಅಥವಾ, एवं ಪದದಿಂದ ಉಂಟಾದ यौगिक ಅರ್ಥದ व्यावृत्ति ಅಂದರೆ मिथ्यात्व, ಅದರ ನಿರಾಕರಣೆ असंमूढ ಎಂಬ ಪದದಿಂದ ಮಾಡಲಾಗಿದೆ. ಅದನ್ನೆ ಹೀಗೆ ಹೇಳಬಹುದು, "यथा

अश्वकर्णादिवत् विद्यमानकर्णवत्तं पुरुषे अपारमार्थिकं कुतः? संज्ञामात्रत्वात् इत्यादि सम्मोह वर्जितः इत्यर्थः". ಅಂದರೆ, ಪುರುಷನ ವಿದ್ಯಮಾನ ಕರ್ಣಗಳು, ಹೇಗೆ ಅಶ್ವಕರ್ಣಾದಿಗಳು संज्ञामात्र ಗಳಾಗಿರುವದರಿಂದ ಅಪರ್ಮಾರ್ಥಿಕ ಎಂದೆನಿಸುವವೊ ಅದರಂತೆ, ಅಭಾಸ ವರ್ಜಿತ ವಾದದ್ದು ಎಂದರ್ಥ. ಇದನ್ನೆ ಶ್ರೀಟೀಕಾಕೃತ್ಪಾದರು, ತಮ್ಮ विष्णुतत्त्वविनिर्णय " एतच्च, पुरुषोत्तमत्वं अपारमार्थिकं इति सम्मोहवर्जितः" इति.

ಆದರೆ, "न तु (पुनः) अश्वकर्णादिवत् सञ्ज्ञामात्रत्वेन इत्यर्थः" ಎಂಬ ವಾಕ್ಯವು प्रक्षिप्त ಎಂದರೆ ಬೆರೆಯವರು ಸೇರಿಸಿದ್ದ ವಾಕ್ಯ, ಟೀಕಾವಾಕ್ಯವಲ್ಲ ಎಂದು ಶ್ರೀಸತ್ಯನಾಥರ ಪ್ರತಿಪಾದನೆಯಾಗಿರುತ್ತದೆ.

ಈಗಿನವರೆಗಿನ ವಿವೆಚನೆಯಿಂದ, ಮೇಲಿನ ಶ್ಲೋಕವಾಕ್ಯದ ಅರ್ಥ ಹೀಗಾಗುತ್ತದೆ:

हे भारतः ಹೇ ಭಾರತ, यः एवं असंमूढः: ಹೀಗೆ, ನಿಶ್ಚಿತಜ್ಞಾನವುಳ್ಳವನಾಗಿ, ಯಾರು मां पुरुषोत्तमं जानातिः ನನ್ನನ್ನು, ಪುರುಷೋತ್ತಮನೆಂದು ತಿಳಿಯುತ್ತಾನೊ,

स सर्वविद्भजति मां सर्वभावेन भारत॥

## टीका

### स सर्ववित्, अस्यैव सर्वशास्त्रार्थत्वात्। सर्वभावेन सर्वप्रकारेण।

सर्ववित् सः ಎಂದರೆ ಹೀಗೆ ತಿಳಿದವನು, ಎಲ್ಲ ಶಾಸ್ತ್ರಾರ್ಥಗಳನ್ನು ತಿಳಿದವನಂತೆಯೆ ಸರಿ. ಇದರಿಂದ ವಿಷ್ಣುಸರ್ವೋತ್ತಮತ್ವವೇ ಸರ್ವಶಾಸ್ತ್ರಾರ್ಥವಾಗಿರುತ್ತದೆ ಎಂದು ತಿಳಿದುಬರುತ್ತದೆ. सर्वभावेन ಎಂದರೆ ಸರ್ವಪ್ರಕಾರದಿಂದ ಎಂದರ್ಥ

## ಟಿಪ್ಪಣಿಗಳವಿಶೇಷ ವಿವರಣೆ

### ॥स सर्ववित्, अस्यैव सर्वशास्त्रार्थत्वात् इति॥.

ಇದನ್ನೆ, ಶ್ರೀವ್ಯಾಸತೀರ್ಥರು ಹೀಗೆ ವಿವರಿಸುತ್ತಾರೆ:

ಇಲ್ಲಿ ವಿಷ್ಣುವಿನ ಸರ್ವೋತ್ತಮತ್ವವನ್ನು ಮಾತ್ರ ಹೇಳಲಾಗಿದೆ ವಿನಹಾ, ಅದೇ ಶೃತ್ಯಾದಿಗಳ ತಾತ್ಪರ್ಯ ಅಲ್ಲ, ಎಂದು ಶಂಕಿಸಿ, ಪರಮಾತ್ಮನ पुरुषोत्तमत्व ವನ್ನು ತಿಳಿದವನಿಗೆ सर्ववित् ದಿಂದ सर्वज्ञत्व ವನ್ನು ಹೇಳಲಾಗಿದೆ. ಇನ್ನು पुरुषोत्तमत्व ವು ಸರ್ವ ಚೇತನರಲ್ಲಿ ಇರುವದಿಲ್ಲ ಆದ್ದರಿಂದ पुरुषोत्तमत्वद ಜ್ಞಾನಮಾತ್ರದಿಂದ ईश्वर ನಂತೆ ಮುಖ್ಯ सर्वज्ञत्व ವನ್ನು ಚೇತನರಿಗೆ

ಹೇಳಲಾಗುವದಿಲ್ಲ.

ಅದರಂತೆ, ಮುಮುಕ್ಷುಗಳು, ಋಗಾದಿಶಾಸ್ತ್ರಗಳನ್ನು ತಿಳಿದವರಾದ್ದರಿಂದ , पुरुषोत्तमत्ववು ಸರ್ವಶಾಸ್ತ್ರಾರ್ಥವಾದದ್ದರಿಂದ, ಅದರ ಜ್ಞಾನದಿಂದ ತಿಳಿದದ್ದು ಎಲ್ಲವನ್ನು ತಿಳಿದಂತಾಯಿತು, ಈ ಪ್ರಕಾರದಿಂದ, पुरुषोत्तमत्व ವನ್ನು ತಿಳಿದವನಿಗೆ ಎಲ್ಲ್ ಶಾಸ್ತ್ರಾರ್ಥ ಸಿದ್ಧಿದಂತಾಯಿತು ಎಂಬ ಭಾವದಿಂದಲೇ, ಟೀಕಾಕೃತ್ಪಾದರು अस्यैव सर्वशास्त्रार्थत्वात् ಎಂದು ಹೇಳಿದ್ದಾರೆ.

## ॥सर्वप्रकारेण इति॥

सर्वभावेन ಎಂಬುದರಿಂದ್, ಅನ್ಯಥಾಪ್ರತೀತಿಯನ್ನು ನಿರಾಕರಿಸಲು, ಅದರ ಅರ್ಥವನ್ನು ಸ್ಪಷ್ಟವಾಗಿ ಹೇಳುತ್ತಾರೆ: सर्वभावेन ಎಂದರೆ ಸರ್ವಪ್ರಕಾರದಿಂದ ಎಂದರ್ಥ.

ಈಗಿನವರೆಗಿನ ವಿವೇಚನೆಯಿಂದ, ಮೇಲಿನ ಶ್ಲೋಕವಾಕ್ಯದ ಅರ್ಥ ಹೀಗಾಗುತ್ತದೆ:

सर्ववित् सः: ಅವನು ಎಲ್ಲ ಶಾಸ್ತ್ರಗಳನ್ನು ತಿಳಿದಂತವನಾಗಿ सर्वभावेन मां भजति: ಸರ್ವಪ್ರಕಾರದಿಂದ ನನ್ನನ್ನು ಹೊಂದುತ್ತಾನೆ.

ಇವರೆಗಿನ ವಿವೇಚನೆಯಿಂದ, ಈ ಶ್ಲೋಕದ ಅರ್ಥ ಹೀಗಾಗುತ್ತದೆ:

**ಹೇ ಭಾರತ, ಹೀಗೆ ನಿಶ್ಚಿತಜ್ಞಾನವುಳ್ಳವನಾಗಿ, ಯಾರು ನನ್ನನ್ನು ಪುರುಷೋತ್ತಮನೆಂದು ತಿಳಿಯುತಾನೊ, ಅವನು ಎಲ್ಲ ಶಾಸ್ತ್ರಗಳನ್ನು ತಿಳಿದಂತವನಾಗಿ, ಸರ್ವಪ್ರಕಾರದಿಂದ ನನ್ನನ್ನು ಹೊಂದುತ್ತಾನೆ.**

## टीका

## एतच्च न यस्मै कस्मै वाच्यं इति आह-

ಇಂತಹ, ಅತೀರಹಸ್ಯವಾದ ಸರ್ವಶಾಸ್ತ್ರಾರ್ಥವಾದ ತತ್ವವನ್ನು ಯದ್ವಾ, ತದ್ವಾ ಯಾರಿಗಾದರು ಉಪದೇಶಿಸಬಾರದು ಎಂದು ತಿಳಿಸಲು ಹೇಳುತ್ತಾರೆ.

इति गुह्यतमं शास्त्रमिदमुक्तं मयाऽनघ।
एतद्बुद्ध्वा बुद्धिमान् स्यात्कृतकृत्यश्च भारत॥

अन्वय: हे अनघ, इति गुह्यतमं शास्त्रं, इदं उक्तं मया। हे भारत, एतत् बुद्ध्वा बुद्धिमान्, कृतकृत्यश्च स्यात् ।

इति गुह्यतमं शास्त्रमिदमुक्तं मयाऽनघ।

हे अनघः ಹೇ ಪಾಪದೂರನಾದ ಅರ್ಜುನಾ!

ಹೀಗೆ, ಇದುವರೆಗೆ, ಶಾಸ್ತ್ರಗಳಲ್ಲಿ ಹೇಳಿದ, ಅತಿ ರಹಸ್ಯವಾದ ತತ್ವವನ್ನು, ನಾನು ನಿನಗೆ ಹೇಳದ್ದೇನೆ. ಆದ್ದರಿಂದ, ಇದನ್ನು ಯೋಗ್ಯಪುರುಷರಿಗೆ ಮಾತ್ರ ಉಪದೇಶಿಸತಕ್ಕದ್ದು ಎಂದು ತಿಳಿಯಬೇಕು.

## टीका

## स सर्ववित् इत्यादि उक्तं। तत् किम् इत्यत आह-

यो मामेवं.." ಎಂಬ ಶ್ಲೋಕವು ಫಲವನ್ನು ಹೇಳಲು ಪ್ರಾರಂಭಿಸಿ, सर्ववित् ಇತ್ಯಾದಿಗಳಿಂದ, ಸರ್ವಶಾಸ್ತ್ರಜ್ಞಾನಪೂರ್ವಕ ಭಗವಂತನ ಸೇವೆಮಾಡಬೇಕೆಂದು ಹೇಳಲಾಯಿತು. ಅಲ್ಲಿ, ಜ್ಞಾನಿಗೆ ಸ್ವತಃ ಫಲಸ್ವರೂಪ ಹೇಳಿದಂತಾಗಲಿಲ್ಲ, ಅದನ್ನಿ ಇಲ್ಲೆ ಫಲಾಂತರವಾಗಿ ಹೇಳುತ್ತಾರೆ ಎಂಬ ಭಾವ.

हे भारत, एतत् बुद्ध्वा बुद्धिमान्, कृतकृत्यश्च स्यात्।

## टीका

## बुद्धिमान् अपरोक्षज्ञानी। कृतकृत्यः मुक्तः।

ಹೇ ಭಾರತ, ಹೀಗೆ ಪರೋಕ್ಷವಾಗೆ ತಿಳಿದ ಜ್ಞಾನಿಯು ಅಪರೋಕ್ಷ ಜ್ಞಾನಿಯಾಗಿ, ಮುಕ್ತನಾಗುತ್ತಾನೆ.

ಇಲ್ಲಿ बुद्धिमान् ಪದವು ಅಪರೋಕ್ಷಜ್ಞಾನಿಯ ಪರ ಇಡಲಾಗಿದೆ. कृतकृत्य ಎಂದರೆ ಮುಕ್ತಿಯನ್ನು ಹೊಂದುತ್ತಾನೆ ಎಂದರ್ಥ.

ಇವರೆಗಿನ ವಿವೇಚನೆಯಿಂದ, ಈ ಶ್ಲೋಕದ ಅರ್ಥ ಹೀಗಾಗುತ್ತದೆ:

**ಹೇ ಪಾಪದೂರನಾದ ಅರ್ಜುನಾ! ಹೀಗೆ, ಶಾಸ್ತ್ರಗಳಲ್ಲಿ ಹೇಳಿದ, ಅತಿ ರಹಸ್ಯವಾದ ತತ್ವವನ್ನು, ನಾನು ಇದುವರೆಗೆ ನಿನಗೆ ಹೇಳಿದ್ದೆನೆ. ಆದ್ದರಿಂದ, ಇದನ್ನು ಯೋಗ್ಯ ಪುರುಷರಿಗೆ ಮಾತ್ರ ಉಪದೇಶಿಸತಕ್ಕದ್ದು ಎಂದು ತಿಳಿಯಬೇಕು. ಹೇ ಭಾರತ! ಹೀಗೆ ತಿಳಿದ ಅಪರೋಕ್ಷಜ್ಞಾನಿಯು, ಕೃತಕೃತ್ಯನಾಗುತ್ತಾನೆ, ಅಂದರೆ ಮುಕ್ತನಾಗುತ್ತಾನೆ ಎಂದರ್ಥ.**

### *೫.೩ ಕಾಠಕ ಶೃತಿ ಮಂತ್ರ*

ಈಗ, ಕಾಠಕೊಪನಿಷತ್ ನಲ್ಲಿಯ ಮಂತ್ರವನ್ನು ಉದಾಹರಿಸುತ್ತಾರೆ,

# मायावाखण्डनम्
इन्द्रियेभ्यः पराह्यर्था अर्थेभ्यश्च परं मनः।
मनससस्तु परा बुद्धिः बुद्धेरात्मा महान्परः॥
परतः परमव्यक्तम् अव्यक्तात् पुरुषः परः।
पुरुषान्न परं किंचित् साकाष्ठा सापरागतिः॥

ಈಗ ಈ ಶ್ಲೋಕವನ್ನು ಪದವಿನ್ಯಾಸ, ಅನ್ವಯದೊಂದಿಗೆ ಅರ್ಥಮಾಡಿಕೊಳ್ಳೋಣ. ಈಗ ಮೊದಲನೆ ಭಾಗಃ

इन्द्रियेभ्यः पराह्यर्था अर्थेभ्यश्च परं मनः।
मनससस्तु परा बुद्धिः बुद्धेरात्मा महान्परः॥

अन्वयः इन्द्रियेभ्यः अर्थाः परा हि, अर्थेभ्यश्च मनः परं, मनसस्तु परा बुद्धि, बुद्धेः महान् आत्मा परः।

## टीका
## आत्मा महान् इति सामानाधिकरण्यम्।

ಮಹಾನ್ ಆತ್ಮಾ ಎಂದರೆ ಸಾಮಾನಾಧಿಕರಣ್ಯದಿಂದ ಮಹತ್ತತ್ತ್ವಾಭಿಮಾನಿಯಾದ ಬ್ರಹ್ಮದೇವರು ಎಂದರ್ಥ.

**ಟಿಪ್ಪಣಿಗಳವಿಶೇಷ ವಿವರಣೆ**

इन्द्रियेभ्यः पराह्यर्था ಎಂದು ಶ್ರುತಿ ಮಂತ್ರದಲ್ಲಿ ಬಂದ इन्द्रियादि ಶಬ್ದಗಳನ್ನು अभिमानि–अधिकरण न्याय ದಿಂದ, इन्द्रियादि अभिमानि देवता, ಪರ ಎಂದು ತಿಳಿಯಬೇಕು.

इन्द्रियेभ्यः:– "श्रोत्र–त्वक्–चक्षु–रसन–घ्राण्–वाक्–पाणि–पाद–पायूपस्थेभ्यः ज्ञानेन्द्रिय कर्मेन्द्रिय नियन्तृतया तत्तनाम्भ्यः क्रमात् तत् तत् अभिमानि देवेभ्यः सोम–कुबेर–सूर्य–वरुण–अश्विनि–अग्नि–इन्द्र–जयन्त–यमदक्षेभ्यः।" इति।

ಇಂದ್ರಿಯಗಳೆಂದರೆ: ಐದು ज्ञानेन्द्रिय ಗಳು, ಐದು कर्मेन्द्रिय ಗಳು. श्रोत्र, त्वक्, चक्षु, रसन ಮತ್ತು घ्राण ಇವು ಐದು ज्ञानेन्द्रिय ಗಳು. वाक्, पाणि. पाद, ಮತ್ತು पायूपस्थ (ಗುದ, ಜನನೇಂದ್ರಿಯ) ಇವು ಐದು कर्मेन्द्रिय ಗಳು.

ಇವುಗಳಿಗೆ ಕ್ರಮವಾಗಿ ಅಭಿಮಾನಿ ದೇವತೆಗಳು ಹೀಗಿರುತ್ತಾರೆ:

श्रोत्र–सोम; त्वक्–कुबेर; चक्षु–सूर्य; रसन– वरुण; ಮತ್ತು घ्राण-अश्विनिकुमार; ಹೀಗೆ, ज्ञानेन्द्रिय ಅಭಿಮಾನಿ ದೇವತೆಗಳಿರುತ್ತಾರೆ.

वाक्–अग्नि; पाणि–इन्द्र; पाद–जयन्त; ಮತ್ತು पायूपस्थ–यम ಮತ್ತು दक्ष. ಹೀಗೆ कर्मेन्द्रिय

ಅಭಿಮಾನಿ ದೇವತೆಗಳಿರುತ್ತಾರೆ.

अर्थेभ्यः – शब्द–स्पर्श–रूप–रस–गन्धरूपाः श्रोत्रादिविषयाः, तत् अभिमानिन्यः सुपर्णी–वारुणी–पार्वति इति तिस्रो देव्यः। शब्दादीनां पंचत्वेऽपि सौपर्णी–वारुण्यौ द्वयोर्द्वयोः देवते, पार्वती तु एकस्य इति विवेकः।

ಇಂದ್ರಿಯಾದಿಗಳ, अर्थादिಗಳು ಅಂದರೆ ವಿಷಯಾದಿಗಳು ಐದು ವಿಧವಾಗಿರುತ್ತವೆ: शब्द, स्पर्श, रूप,रस ಮತ್ತು गन्ध ಎಂದು. ಇವುಗಳ ಅಭಿಮಾನಿ ದೇವತೆಗಳು ಹೀಗಿರುತ್ತಾರೆ:

शब्द–स्पर्श=सौपर्णी; रूप–रस=वारुणि ಮತ್ತು गन्ध–पार्वती.

मनः– मनोभिमानिनः रुद्र–इन्द्र–शेषाः। रुद्र, इन्द्र, ಹಾಗೂ शेष ದೇವರು ಮನೋಭಿಮಾನಿ ದೇವತೆಗಳಾಗಿದ್ದಾರೆ.

आत्मा महान्: महत् तत्त्वाभिमानि चतुर्मुख ब्रह्मः, विरिंचः। "आत्मा विरिंचः, सुमना इत्यभिधानात्"इति।

ಅಂದರೆ, ಮಹತ್ ತತ್ತ್ವಾಭಿಮಾನಿ ಚತುರ್ಮುಖ ಬ್ರಹ್ಮದೇವರು ಎಂದರ್ಥ.

इन्द्रियेभ्यः अर्थाः परा हि: इन्द्रियाभिमानि ದೇವತೆಗಳಿಗಿಂತ अर्थाभिमानि ದೇವತೆಗಳು ಉತ್ತಮರು.

अर्थेभ्यश्च मनः परंः अर्थाभिमानि ದೇವತೆಗಳಿಗಿಂತ ಮನೊಭಿಮಾನಿ ದೇವತೆ(ಗಳಾದ)ಯಾದ ರುದ್ರ (ಇಂದ್ರ, ಶೇಷ) ದೇವರು ಉತ್ತಮರಗಿದ್ದಾರೆ.

मनसस्तु परा बुद्धि: ಮನೊಭಿಮಾನಿ ದೇವತೆಯಾದ ರುದ್ರದೇವರಿಗಿಂತಲು ಬುದ್ಧಿಗೆ ಅಭಿಮಾನಿದೇವತೆಯಾದ ಸರಸ್ವತಿ ದೇವಿಯು ಉತ್ತಮಳು.

बुद्धेः महान् आत्मा परः: ಬುದ್ಧಿಗೆ ಅಭಿಮಾನಿದೇವತೆಯಾದ ಸರಸ್ವತಿದೇವಿಗಿಂತ ಮಹತ್ತತ್ತ್ವಾಭಿಮಾನಿಯಾದ ಬ್ರಹ್ಮದೇವರು ಉತ್ತಮರು.

ಇವರೆಗಿನ ವಿವೇಚನೆಯಿಂದ, ಈಭಾಗಿನ ಮಂತ್ರದ ಅರ್ಥ ಹೀಗಾಗುತ್ತದೆ:

**ಇಂದ್ರಿಯಾಭಿಮಾನಿ ದೇವತೆಗಳಿಗಿಂತ ಅರ್ಥಾಭಿಮಾನಿ ದೇವತೆಗಳು ಉತ್ತಮರು. ಅರ್ಥಾಭಿಮಾನಿ ದೇವತೆಗಳಿಗಿಂತ ಮನೊಭಿಮಾನಿ ದೇವತೆ ಉತ್ತಮ. ಮನೊಭಿಮಾನಿ ದೇವತೆಯಾದ ರುದ್ರದೇವರಿಗಿಂತ ಬುದ್ಧಿಗೆ ಅಭಿಮಾನಿಯಾದ ಸರಸ್ವತಿದೇವಿಯು ಉತ್ತಮಳು. ಬುದ್ಧಿಯ ಅಭಿಮಾನಿ ದೇವತೆಯಾದ ಸರಸ್ವತಿದೇವಿಗಿಂತಲೂ ಮಹತ್ತತ್ತ್ವಾಭಿಮಾನಿ ದೇವತೆಯಾದ ಬ್ರಹ್ಮದೇವರು ಉತ್ತಮರು.**

ಈಗ ಮಂತ್ರದ ಮುಂದಿನ ಭಾಗ:

महतः परमव्यक्तम् अव्यक्तात् पुरुषः परः।
पुरुषान्न परं किंचित् साकाष्ठा सापरागतिः॥

अन्वय: महत: परं अव्यक्तं। अव्यक्तात् पुरुष: पर:। पुरुषात् परं न किंचित् । सा काष्ठा । सा परा गति:।

## टीका

## न परं किंचित् किन्तु सा काष्ठा स एव अवधि:। कुत एतत्, सा परा गति:, गम्यत इति गति:।

ಶ್ರೀವಿಷ್ಣುವಿನಿಗಿಂತಲೂ ಶ್ರೇಷ್ಠರಾದವರು ಯಾರೂ ಇಲ್ಲ ಪರಂತು ಶ್ರೀವಿಷ್ಣುವೆ ಈ ದೇವತಾ ತಾರತಮ್ಯಕ್ಕೆ ಕೊನೆ ಅವಧಿಯಾಗಿರುತ್ತಾನೆ. ಶ್ರೀವಿಷ್ಣುವೇ गम्यत इति गति: ಯಂತೆ ಮುಮುಕ್ಷುಗಳಿಗೆ ಪರಮ ಪ್ರಾಪ್ಯನಾಗಿದ್ದಾನೆ.

### ಟಿಪ್ಪಣಿಗಳವಿಶೇಷ ವಿವರಣೆ

महत: परं अव्यक्तं: महत ಅಂದರೆ ಚತುರ್ಮುಖ ಬ್ರಹ್ಮ, ಅವನಿಗಿಂತ अव्यक्तं ಅಂದರೆ ಪ್ರಕೃತಿಗೆ ಅಭಿಮಾನಿಯಾದ ಶ್ರೀಲಕ್ಷ್ಮೀದೇವಿಯು ಶ್ರೇಷ್ಠಳಾಗಿದ್ದಾಳೆ.
अव्यक्तात् पुरुष: पर:: ಪ್ರಕೃತಿಗೆ ಅಭಿಮಾನಿಯಾದ ಶ್ರೀಮಹಾಲಕುಮಿಗಿಂತಲೂ ಪುರುಷ ಶಬ್ದವಾಚ್ಯನಾದ ಶ್ರೀವಿಷ್ಣು ಶ್ರೇಷ್ಠನಾಗಿದ್ದಾನೆ.
ಇಲ್ಲಿ पुरुष ಶಬ್ದವು नारायण ಪರವಾಗಿರುತ್ತದೆ. "पुरुषो हवै नारायण:" "सहस्रशीर्षापुरुष:.." ಎಂದು ಶೃತಿಗಳಲ್ಲಿ, नारायण ಪರ ಪ್ರಯೋಗ ಮಾಡಲಾಗಿರುತ್ತದೆ. ಅದಲ್ಲದೆ, ಈ ಕಾಠಕ ಶೃತಿಯಲ್ಲಿಯೆ ಪೂರ್ವದಲ್ಲಿ ಹೀಗೆ ಹೇಳಲಾಗಿದೆ: "सोऽध्वन: परमाप्नोति तद्विष्णो: परमं पदम्" इति।. ಇವೆಲ್ಲವುಗಳಿಂದ, ಈ ಮಂತ್ರದಲ್ಲಿಯ पुरुष ಶಬ್ದವು नारायण ಪರ ಎಂದು ತಿಳಿದುಬರುತ್ತದೆ.
पुरुषात् परं न किंचित्: ಶ್ರೀವಿಷ್ಣುವಿನಿಗಿಂತಲೂ ಶ್ರೇಷ್ಠರಾದವರು ಯಾರೂ ಇಲ್ಲ,
सा काष्ठा: ಶ್ರೀವಿಷ್ಣುವೆ ಈ ದೇವತಾ ತಾರತಮ್ಯಕ್ಕೆ ಕೊನೆ ಅವಧಿಯಾಗಿರುತ್ತಾನೆ.
ಈ ಶೃತಿವಾಕ್ಯದಿಂದ ವಿಷ್ಣುಸರ್ವೊತ್ತಮತ್ವವನ್ನು ಹೇಳಲಾಗಿದೆ ನಿಜ, ಆದರೆ ವಿಷ್ಣುಸರ್ವೊತ್ತ್ಮತ್ವವೇ ಸರ್ವಶಾಸ್ತ್ರಾರ್ಥವಾದಿದೆ ಎಂದು ತಿಳಿದುಕೊಳ್ಳುವದು ಹೇಗೆ?. ಈ ಶಂಕೆಯ ಸಮಾಧಾನ ಶೃತಿ ಮಂತ್ರವೇ ತನ್ನ ಮುಂದಿನ ವಾಕ್ಯದಲ್ಲಿ ಸ್ಪಷ್ಟಪಡಿಸುತ್ತದೆ.
सा परा गति:: ಶ್ರೀವಿಷ್ಣುವೇ ಮುಮುಕ್ಷುಗಳಿಗೆ ಪರಮಪ್ರಾಪ್ಯನಾಗಿದ್ದಾನೆ. ಇದು ವಿಷ್ಣುಸರ್ವೋತ್ತಮತ್ವ ಶಾಸ್ತ್ರಾರ್ಥವಾಗಿದೆ ಎಂದು ಪ್ರಮಾಣೀಕರಿಸುತ್ತದೆ,
गम्यत इति गति:, ಇಲ್ಲಿ कर्मसाधन ಪರ गति ಶಬ್ದದಿಂದ ಜ್ಞೆಯತ್ವವನ್ನೆ ಹೇಳಲಾಗಿದೆ.

ಅದರಂತೆ गति ಪದದಿಂದ शास्त्रप्रतिपाद्यत्व ಉಂಟಾಗಿ, पर ಶಬ್ದದಿಂದ उत्कृष्टते ಯನ್ನು ಹೇಳಲಾಗಿದೆ. ಇನ್ನು, उत्कृष्टते ಯನ್ನು एकदेश ದಲ್ಲಿ ಪ್ರತಿಪಾದಿಸಲು ಬರುವದಿಲ್ಲ. ಆದ್ದರಿಂದ, सर्वशास्त्र प्रतिपाद्यत्व ಸಿದ್ಧವಾದುತ್ತದೆ. ಇನ್ನು परा गतिः ಎಂಬುದರಿಂದ सर्वशास्त्रप्रतिपाद्यत्व ಸಿದ್ಧವಾದರೂ, ಯಾವ ಪ್ರಕಾರದಿಂದ परा गतिः ಎಂಬುದು सर्वशास्त्रप्रतिपाद्यम् ಪರ ಆಗುತ್ತದೆ, ಎಂಬ ಜಿಜ್ಞಾಸೆ ಹುಟ್ಟಲು, ಅದನ್ನೆ, सा काष्ठा ಎಂದು, ಪೂರ್ವವಾಕ್ಯದಲ್ಲಿ, ಸ್ಪಷ್ಟಪಡಿಸಲಾಗಿದೆ,

ಇವರೆಗಿನ ವಿವೇಚನೆಯಿಂದ, ಈಭಾಗಿನ ಮಂತ್ರದ ಅರ್ಥ ಹೀಗಾಗುತ್ತದೆ:

**महत् ಅಂದರೆ ಚತುರ್ಮುಖ ಬ್ರಹ್ಮ, ಅವನಿಗಿಂತಲೂ अव्यक्तं ಎಂದರೆ ಪ್ರಕೃತಿಗೆ ಅಭಿಮಾನಿದೇವತೆಯಾದ ಶ್ರೀಲಕ್ಷ್ಮೀದೇವಿಯು ಶ್ರೇಷ್ಠಳಾಗಿದ್ದಾಳೆ. ಈ ಮಹಾಲಕುಮಿಗಿಂತಲೂ ಪೂರ್ಣನಾಗಿರುವವನಾದ್ದರಿಂದ, ಪುರುಷ ಶಬ್ದವಾಚ್ಯನಾದ ಶ್ರೀವಿಷ್ಣುವು ಶ್ರೇಷ್ಠನಾಗಿದ್ದಾನೆ. ಆ ಶ್ರೀವಿಷ್ಣುವಿಗಿಂತ ಶ್ರೇಷ್ಠರಾದವರು ಯಾರೂ ಇಲ್ಲ. ಅವನೇ ಈ ದೇವತಾ ತಾರತಮ್ಯಕ್ಕೆ ಕೊನೆ ಅವಧಿಯಾಗಿರುತಾನೆ. ಅವನೇ ಮುಮುಕ್ಷುಗಳಿಗೆ ಪರಮಪ್ರಾಪ್ಯನೂ ಹೌದು.**

## *೫.೩ ಬ್ರಹ್ಮಸೂತ್ರದಲ್ಲಿಯ ಒಂದು ಸೂತ್ರ*

### टीका

**एवं सर्वशास्त्रैः प्रतिपाद्यत इति आह-**

ಈಗ, ನಾರಾಯಣನ ಸರ್ವೋತ್ತಮತ್ವವನ್ನೆ ಸರ್ವಶಾಸ್ತ್ರಗಳು ಪ್ರತಿಪಾದಿಸುತ್ತವೆ ಎನ್ನಲು, ಶ್ರೀಮದಾಚಾರ್ಯರು ಬ್ರಹ್ಮಸೂತ್ರಗಳಲ್ಲಿಯ, ಒಂದು ಸೂತ್ರವನ್ನು ಉದಾಹರಿಸುತ್ತಾರೆ.

### मायावाखण्डनम्

**ॐ भूम्नः क्रतुवज्ज्यायस्त्वं तथा च दर्शयति ॐ ।**

### टीका

**सर्वगुणेषु भूमगुणस्य ज्यायस्त्वं मुख्यतो वेदप्रतिपाद्यत्वं इति सूत्रार्थोऽत्र अभिमतः।**

ಈ ಸೂತ್ರದ ಅರ್ಥವನ್ನು ಶ್ರೀಮದಾನಂದತೀರ್ಥರು, ತಮ್ಮ ब्रह्मसूत्रभाष्य ದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ:

"पूर्णत्वरूपस्य भूमगुणस्य पूर्णानन्दः पूर्णज्ञान इति सर्वगुणविशेषतया सर्वोपास्यत्वलक्षणं ज्यायस्त्वं विवक्ष्यते" इति।

ಅಂದರೆ, ಪೂರ್ಣಾನಂದ ಪೂರ್ಣಜ್ಞಾನ, ಎಂಬ ಪೂರ್ಣತ್ವರೂಪ ಭೂಮ ಗುಣವು ज्यायस्त्वं ಅಂದರೆ ಮುಖ್ಯವಾಗಿ ಸರ್ವೋಪಾಸ್ಯಲಕ್ಷಣತ್ವವನ್ನು ಹೊಂದಿದೆ, ಎಂದು ಈ ಸೂತ್ರದ ಅರ್ಥ.

ಭಾಷ್ಯದಲ್ಲಿ ಪ್ರತಿಪಾದಿಸಿದ ಈ ವಾಖ್ಯಾನವು, ಇಲ್ಲಿ ಅನುಪಯುಕ್ತವಾದ್ದರಿಂದ, ಪ್ರಕೃತದಲ್ಲಿ ಅಭಿಪ್ರೇತವಾದ ಅರ್ಥವನ್ನು ಟೀಕಾಕೃತ್ಪಾದರು ಮೇಲಿನ ಸೂತ್ರದ ಅರ್ಥ ಹೀಗೆ ಎವೆರಿಸುತ್ತಾರೆ:

**ಶ್ರೀವಿಷ್ಣುವಿನ ಎಲ್ಲ ಗುಣಗಳಲ್ಲಿ, ಸರ್ವೋತ್ತಮತ್ವರೂಪ, ಪೂರ್ಣತ್ವವನ್ನು ಪ್ರತಿಪಾದಿಸುವ ಭೂಮ ಗುಣವೇ, ಸರ್ವವೇದಶಾಸ್ತ್ರಗಳಿಂದ ಮುಖ್ಯವಾಗಿ ಪ್ರತಿಪಾದಿಸಲ್ಪಟ್ಟಿದೆ.**

## ೬. ಉಪಸಂಹಾರ

ಹೀಗೆ, ಈವರೆಗೆ ಆಗಮ ಪ್ರಮಾಣಗಳಿಂದ, ಶ್ರೀ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಿ, ಅದನ್ನೇ ಉಪಸಂಹಾರಪೂರ್ವಕ ಮತ್ತೊಮ್ಮೆ ಸ್ಪಷ್ಟಪಡಿಸುತ್ತಾರೆ:

### मायावाखण्डनम्

### इति विष्णोः सर्वोत्तमत्वमेव शास्त्रार्थत्वेन भगवता श्रुत्याच अभिहितम्।

**ಹೀಗೆ ವಿಷ್ಣುವಿನ ಸರ್ವೋತ್ತಮತ್ವವೇ ಸಕಲಶಾಸ್ತ್ರಗಳ ತಾತ್ಪರ್ಯ ಬ್ರಹ್ಮಾತ್ಮೈಕ್ಯವಲ್ಲ ವೆಂದು, ಸಾಕ್ಷಾತ್ ಭಗವಂತನಿಂದ, ಕಾಠಕ ಶೃತಿಯಿಂದ ಹಾಗೂ ಸೂತ್ರಕಾರರಿಂದ ಹೇಳಲ್ಪಟ್ಟಿರುತ್ತದೆ.**

### टीका

### एवं प्रकरणार्थं उपपाद्य तस्य प्रयोजनं आह-

ಈ ರೀತಿಯಿಂದ ಪ್ರಕರಣದ ಅರ್ಥವನ್ನು ವಿವರಿಸಿ, ಶ್ರೀಮದಾಚಾರ್ಯರು ಈಗ ಪ್ರಕರಣದ ಪ್ರಯೋಜನವನ್ನು ನಿರೂಪಿಸುತ್ತಾರೆ:

मायावाखण्डनम्
इति सर्वज्ञमुनिना मायावादतमोऽखिलम्।
निरस्तं तत्त्ववादेन सतां संशयनुत्तये॥

अन्वय: इति, सतां संशयनुत्तये, सर्वज्ञमुनिना तत्त्ववादेन, मायावाद अखिलम् तम: निरस्तम्।

## टीका

### अन्यथा हि विप्रतिपत्ते: संशयो भवति ।

इति: ಹೀಗೆ ಈ ಪ್ರಕರಣದ ಮೂಲಕ

सतां संशयनुत्तये: ಸಜ್ಜನರ ಸಂಶಯ ಶಮನಕ್ಕಾಗಿ.

संशय ಅಂದರೆ, ಅನ್ಯಥಾ ಪ್ರತಿಪಾದಿಸುವದರಿಂದ ಹುಟ್ಟುವ ಸಂದೇಹವೆ ಸಂಶಯವೆನಿಸುತ್ತದೆ

सर्वज्ञमुनिना तत्त्ववादेन: ಸರ್ವಜ್ಞಮುನಿಗಳಿಂದ ತತ್ವವಾದದಿಂದ

मायावाद अखिलम् तम: निरस्तम् : ಮಾಯಾವಾದವೆಂಬ ಅಖಿಲ ತಮಸ್ಸನ್ನು ನಿರಾಕರಿಸಲಾಯಿತು.

ಇವರೆಗಿನ ವಿವೆಚನೆಯಿಂದ, ಮೇಲಿನ ಶ್ಲೋಕದ ಅರ್ಥ ಹೀಗಾಗುತ್ತದೆ:

**ಹೀಗೆ ಈ ಪ್ರಕರಣದ ಮೂಲಕ, ಸಜ್ಜನರ ಸಂಶಯ ಶಮನಕ್ಕಾಗಿ, ಸರ್ವಜ್ಞಮುನಿಯ, ತತ್ವವಾದದಿಂದ ಮಾಯಾವಾದವೆಂಬ ಅಖಿಲ ತಮಸ್ಸನ್ನು, ನಿರಾಕರಿಸಲಾಯಿತು.**

## टीका

### प्रकरणार्थं उपसंहरन् तत् अनुगुणं भगवद् वाक्यमेव पठति।

ಈಗ, ಪಕರಣಾರ್ಥವನ್ನು ಉಪಸಂಹರಿಸಲು, ಅದಕ್ಕೆ ಅನುಗುಣವಾದ ಭಗವದ್ ವಾಕ್ಯವನ್ನೇ ಪಠಿಸುತ್ತಾರೆ. ಶ್ರೀವೇದವ್ಯಾಸ ಮಹರ್ಶಿಗಳು ಮಹಾಭಾರತದಲ್ಲಿ ಹೇಳಿದ ವಾಕ್ಯ ಇದು.

मायावाखण्डनम्
नास्ति नारायण समं न भूतं न भविष्यति।
एतेन सत्यवाक्येन सर्वार्थान् साधयाम्यहम्॥

अन्वय: "नास्ति नारायण समं न भूतं न भविष्यति।" एतेन सत्यवाक्येन अहम् सर्वार्थान् साधयामि।

"नास्ति नारायण समं न भूतं न भविष्यति।": ಶ್ರೀ ನಾರಾಯಣನಿಗೆ ಸಮನಾದ ದೇವರು ಬೇರೊಬ್ಬನಿಲ್ಲ, ಹಿಂದೆ ಇರಲಿಲ್ಲ, ಮುಂದೆ ಆಗುವದು ಇಲ್ಲ.

एतेन सत्यवाक्येन अहम् सर्वार्थान् साधयामि: ಈ ಸತ್ಯವಾಕ್ಯದಿಂದಲೇ ನಾನು ಸಮಸ್ತಶಾಸ್ತ್ರಾರ್ಥಗಳನ್ನು ಸಾಧಿಸುತ್ತೇನೆ.

ಇಲ್ಲಿ ಕೂಡ सर्वार्थान् साधयामि ಎಂಬುದರಿಂದ ಶ್ರೀವಿಷ್ಣುಸರ್ವೋತ್ತಮತ್ವವೇ ಸರ್ವಶಾಸ್ತ್ರಾರ್ಥವಾಗಿರುತ್ತದೆ ಎಂದು ಹೇಳಲಾಗಿದೆ.

ಇವರೆಗಿನ ವಿವೇಚನೆಯಿಂದ, ಮೇಲಿನ ಶ್ಲೋಕದ ಅರ್ಥ ಹೀಗಾಗುತ್ತದೆ:

**ಶ್ರೀನಾರಾಯಣನಿಗೆ ಸಮನಾದ ದೇವನು ಬೇರೊಬ್ಬನಿಲ್ಲ, ಹಿಂದೆ ಇರಲಿಲ್ಲ, ಮುಂದೆ ಆಗುವದೂ ಇಲ್ಲ. ಈ ಸತ್ಯವಾಕ್ಯದಿಂದಲೆ, ನಾನು ಸಮಸ್ತಶಾಸ್ತ್ರಾರ್ಥಗಳನ್ನು ಸಾಧಿಸುತ್ತೇನೆ.**

॥ इति श्रीमदानन्दतीर्थ भगवत्पादाचार्य विरचितम् ॥
॥ मायावाद खण्डनं सम्पूर्णम् ॥

## ೭. ಟೀಕಾ ಅಂತ್ಯ ಮಂಗಲ ಪದ್ಯ

ಟೀಕಾಕೃತ್ಪಾದರು ತಾವು ಮುಗಿಸಿದ ಗ್ರಂಥದ ಅಂತ್ಯದಲ್ಲಿ ಕೂಡ ಮಂಗಲವನ್ನು ಆಚರಿಸುತ್ತಾರೆ

**टीका**
**वचनप्रसूनमाला जयतीर्थाख्येन भिक्षुणा रचिता।**
**ध्रियतां सदये हृदये कमलामहिलेन पुरुषेण॥**

अन्वय: जयतीर्थाख्येन भिक्षुणारचिता वचनप्रसूनमाला, कमलामहिलेन पुरुषेण सदये हृदये ध्रियताम्।

॥वचन इति॥

वचनप्रसूनमाला: ವಚನಗಳೆಂಬ ಕುಸುಮಗಳ ಮಾಲೆ.

॥ सदये इति ॥

सदये: ಕೃಪೆ ಸಹಿತ ಎಂದರ್ಥ.

## ॥कमला इति॥

ಕಮಲಾ ಎಂದರೆ ಮಹಾಲಕ್ಷ್ಮೀ, ಮಹಿಲಾ ಎಂದರೆ ಹೆಂಡತಿ ಎಂದರ್ಥ:

कमलामहिलेन पुरुषेण: ಎಂದರೆ, ಮಹಾಲಕ್ಷ್ಮೀಯನ್ನು ಹೇಂಡತಿಯಾಗಿ ಪಡೆದ ಪುರುಷನಿಂದ, ಅಂದರೆ, ಶ್ರೀಮಹಾಲಕ್ಷ್ಮೀಪತಿ ಭಗವಂತನಿಂದ ಎಂದರ್ಥ.

ध्रियतां: ಧರಿಸುವಂತಾಗಲಿ ಅಥವಾ ಅಲಂಕರಿಸುವಂತಾಗಲಿ

ಇಲ್ಲಿ ಶ್ರೀನಿವಾಸತೀರ್ಥರು ಉಪಮೆಯನ್ನು ಕೊಡುತ್ತ ಹೀಗೆ ವಿವರಿಸುತ್ತಾರೆ:

ಹೇಗೆ ಯಃಕಶ್ಚಿತ ಭಿಕ್ಷುಕನು ತಾನು ಮಾಡಿದ ಪುಷ್ಪಮಾಲೆಯನ್ನು ಸಿರಿವಂತನಾದ ಪುರುಷನಿಗೆ ಸಮರ್ಪಿಸಿದಾಗ, ಆ ಸಿರಿವಂತನಾದ ಪುರುಷನು ಕರುಣೆಯಿಂದ ಆ ಮಾಲೆಯನ್ನು ತನ್ನ ಹೃದಯದಲ್ಲಿ ಧರಿಸುತ್ತಾನೊ, ಅದರಂತೆ, ಇಲ್ಲಿ ಶ್ರಿಜಯತೀರ್ಥ ಮುನಿಗಳು ತಾವು ರಚಿಸಿದ ಗ್ರಂಥವನ್ನು ಶ್ರೀಲಕ್ಷ್ಮೀಪತಿ ಪರಮಾತ್ಮನಲ್ಲಿ ಸಮರ್ಪಿಸುತ್ತಿದ್ದಾರೆ ಎಂಬ ಭಾವ.

ಇವರೆಗಿನ ವಿವೆಚನೆಯಿಂದ, ಮೇಲಿನ ಶ್ಲೋಕದ ಅರ್ಥ ಹೀಗಾಗುತ್ತದೆ:

ಜಯತೀರ್ಥಭಿಕ್ಷುವಿನಿಂದ ರಚಿತವಾದ ಈ ವಚನಗಳೆಂಬ ಕುಸುಮಗಳ ಮಾಲೆ, ಶ್ರೀಮಹಾಲಕ್ಷ್ಮೀಪತಿ ಭಗವಂತನಿಂದ ಹೃದಯದಲ್ಲಿ ಅನುಗ್ರಹ ಪೂರ್ವಕ ಅಲಂಕರಿಸುವಂತಾಗಲಿ.

॥ इति श्रीमदानन्दतीर्थ भगवत्पादाचर्यविरचित मायावादखण्डन विवरणं ॥
॥ जयतीर्थभिक्षु विरचितं संपूर्णम्॥

सर्वोत्तमं मध्वनाथं भातं रामार्यहृद्पंकजम्।
प्रणमामि अनन्याभक्त्या प्रियतां कमलालय:॥

॥इति श्रीगुरुराजाचार्यसूनु जयतीर्थाचार्य विरचिता मायावादखण्डनकन्नडभाषा विवरणं संपूर्णम्॥
॥अस्मद् गुर्वन्तर्यामि भारतीरमणमुख्यप्राणान्तर्गतकृष्णार्पणमस्तु ॥

---

# ಪರಿಶೀಲಿಸಿದ ಗ್ರಂಥಗಳು

१. श्रीपद्मनाभतीर्थविरचित मायावादखण्डनटीका
२. श्रीजयतीर्थविरचित मायावादखण्डनटीका
३. श्रीव्यासतीर्थविरचित मन्दारमंजरी मायावादखण्डनटीका टिप्पणि
४. श्रीनिवासतीर्थविरचित दुर्गमार्थव्याख्या मायावादखण्डनटीका टिप्पणि
५. श्रीसत्यनाथतीर्थविरचित परशु मायावादखण्डनटीका टिप्पणि.
६. श्रीमदानन्दतीर्थविरचित उपाधिखण्डनम्.
७. श्रीमज्जयतीर्थविरचित उपाधिखण्डन टीका
८. श्रीमदानन्दतीर्थविरचित प्रपंचमिथ्यात्व अनुमान खंडनम्
९. श्रीमज्जयतीर्थविरचित प्रपंचमिथ्यात्व अनुमान खंडन टीका.
१०. श्रीमदानन्दतीर्थविरचित श्रीविष्णुतत्त्वविनिर्णय
११. श्रीमदानन्दतीर्थविरचित श्रीविष्णुतत्त्वविनिर्णय टीका
१२. श्रीमदानन्दतीर्थविरचित गीताभाष्य
१३. श्रीमज्जयतीर्थविरचित गीताभाष्य प्रमेयदीपिका
१४. श्रीराघवेन्द्रतीर्थविरचित गीताविवृत्ति
१५. श्रीविद्यामान्यतीर्थविरचित खण्डनत्रय अनुवाद संग्रहः
१६. श्रीवादिराजाचार्यविरचित प्रमाणसंग्रहः
१७. श्रीचक्रवर्तिश्रीनिवासगोपालाचार्य कृत शब्दार्थकौस्तुभः
१८. महामहोपाध्याय भीमाचार्येण विरचितः न्यायकोशः

---

# ಪಾರಿಭಾಷಿಕ ಶಬ್ದಾರ್ಥ ಕೋಶ

१. अपसिद्धान्तः ಪೂರ್ವಾಚಾರ್ಯರಿಂದ ಅಂಗೀಕೃತ ಪ್ರಮೆಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸುವದು.

२. अभावः ಇಲ್ಲದಿರುವಿಕೆ, ದ್ರವ್ಯಾದಿ ಸಪ್ತಪದಾರ್ಥಗಳಲ್ಲಿ ಒಂದು. द्रव्यगुणकर्मसामान्यविशेषसमवायाभावाः सप्त पदार्थाः। ಅಭಾವವು ನಾಲ್ಕುವಿಧಃ ಪ್ರಾಕ್ ಅಭಾವ, ಪ್ರಧ್ವಂಸ ಅಭಾವ, ಅತ್ಯಂತ ಅಭಾವ ಹಾಗೂ ಅನ್ಯೊನ್ಯ ಅಭಾವ.

३. अप्रसिद्धविशेषणः ಎಲ್ಲೂ ಪ್ರಸಿದ್ಧವಲ್ಲದ ವಿಶೇಷಣವನ್ನು (ಸಾಧ್ಯವನ್ನು) ಪಕ್ಷದಲ್ಲಿ ಸಾಧಿಸುವದು.

४. आश्रयासिद्धः: ಯಾವ ಅನುಮಾನದ ಆಶ್ರಯ ಹೇತುವಿಗೆ ಇಲ್ಲವೋ, ಪಕ್ಷ ಅಸತ್ ಆಗಿದೆಯೋ ಆ ಅನುಮಾನದ ಹೇತುವು ಆಶ್ರಯಾಸಿದ್ಧವೆನಿಸುತ್ತದೆ.

५.अन्योन्याश्रयः: ಪರಸ್ಪರಾವಲಂಬನ, ಪರಸ್ಪರ ಒಂದರ ಅಧಿನದಲ್ಲಿ ಮತ್ತೊಂದಿರುವಿಕೆ. ಅನ್ಯೊನ್ಯಾಶ್ರಯವು ಜ್ಞಪ್ತಿ, ಉತ್ಪತ್ತಿ ಮತ್ತು ಸ್ಥಿತಿಃ ಎರಡು ವಸ್ತುಗಳಲ್ಲಿ ಪರಸ್ಪರ ಒಂದರ ಜ್ಞಾನವುಂಟಾದರೆನೆ ಮತ್ತೊಂದರ ಜ್ಞಾನವುಂಟಾಗುವದು, ಇದು ಜ್ಞಪ್ತಿ ಅನ್ಯೊನ್ಯಾಶ್ರಯ; ಎರಡು ವಸ್ತುಗಳಲ್ಲಿ ಪರಸ್ಪರ ಒಂದರ ಉತ್ಪತ್ತಿಯು, ಮತ್ತೊಂದರ ಉತ್ಪತ್ತಿ ಅಪೇಕ್ಷಿಸಿಕೊಂಡಿರುವದು, ಇದು ಉತ್ಪತ್ತಿ ಅನ್ಯೊನ್ಯಾಶ್ರಯ; ಎರಡು ವಸ್ತುಗಳಲ್ಲಿ ಪರಸ್ಪರ ಒಂದಿರಬೇಕಾದರೆ ಮತ್ತೊಂದರ ಇರುವಿಕೆ ಅವಶ್ಯವಾಗಿರಬೇಕು, ಇದು ಸ್ಥಿತಿ ಅನ್ಯೊನ್ಯಾಶ್ರಯ

६. अनवस्थाः ಉಪಪಾದ್ಯ ಹಾಗೂ ಉಪಪಾದಕಗಳಿಗೆ ಅಥವಾ ಕಾರ್ಯಕಾರಣಗಳಿಗೆ ಕೊನೆಯಿಲ್ಲದಿರುವುದು. ಒಂದರ ಉತ್ಪತ್ತಿ ಜ್ಞಪ್ತಿಗೆ ಮತ್ತೊಂದು, ಅದಕ್ಕೆ ಮಗದೊಂದು,, ಹೀಗೆ ಅನಂತ ಪದಾರ್ಥಗಳ ಪರಂಪರೆ ಒಪ್ಪುವದು ಅನವಸ್ಥಾ.

७. अनुमानः ಅನುಮಿತಿಗೆ ಕಾರಣ, ವ್ಯಾಪ್ಯವಸ್ತುವೊಂದರ ಜ್ಞಾನದಿಂದ ವ್ಯಾಪಕವಸ್ತುವಿದೆಯೆಂಬ ನಿಶ್ಚಯ. ಉದಾಃ ವ್ಯಾಪ್ಯವಾದ ಧೂಮ, ವ್ಯಾಪಕವಾದ ಬೆಂಕಿ ಇವೆರಡನ್ನು ಅಡುಗೆಮನಿಯಲ್ಲಿ ನೋಡಿದವನಿಗೆ ಪರ್ವತಾದಿಗಳಲ್ಲಿ ಧೂಮ ದರ್ಶನದಿಂದ ಪರ್ವತದಲ್ಲಿ ಬೆಂಕಿ ಇದೆ ಎಂಬ ನಿಶ್ಚಿತಜ್ಞಾನ ಉಂಟಾಗುವದು.

८.अनिर्वचनीयः ಉಚ್ಚರಿಸಲಾಗದ, ಹೇಳಲಾಗದ. ಹೇಳಲು ಅಶಕ್ಯವಾದ ತೋರಿಕೆ.

९.अवच्छिन्नः ಬೇರ್ಪಡಿಸಲ್ಪಟ್ಟ, ವಿಂಗಡಿಸಲ್ಪಟ್ಟ, ಉಪಾಧಿಗಳಿಂದ ಭೇದ ತೋರಿಸಲ್ಪಟ್ಟ, ವಿಶೇಷ ಗುಣಗಳಿಂದ ಬೇರ್ಪಡಿಸಲ್ಪಟ್ಟ. ಘಟಾಕಾಶ ಮತ್ತು ಮಠಾಕಾಶಗಳಲ್ಲಿ, ಆಕಾಶ

ಒಂದೆ ಇದ್ದರೂ, ಘಟ, ಮಠ ರೂಪವಾದ ಉಪಾಧಿಗಳು ಬೇರೆ ಬೇರೆ ಯಾದುದರಿಂದ ಘಟ ಅವಚ್ಛಿನ್ನ ಹಾಗೂ ಮಾಠ ಅವಚ್ಛಿನ್ನ, ಆಕಾಶಗಳು, ಬೇರೆ ಬೇರೆ ಎಂದು ವ್ಯವರಿಸಲ್ಪಡುತ್ತವೆ.

१०.अवच्छेदक: ಅವ್ಯಾಪ್ಯ ವೃತ್ತಿತ್ವ ನಿಯಾಮಕ ಒಂದು ಅಧಿಕರಣದಲ್ಲಿ ತಾನಿರುವ ಏಕದೇಶವು ತನಕೆ ಅವಚ್ಛೆದಕವೆನಿಸುವದು.

अग्रे वृक्षः कपिसंयोगी न मूले। ಅಂದರೆ, ಒಂದು ಮರದಲ್ಲಿ, ಕಪಿಸಂಯೋಗವಿರುವ ಅಗ್ರಭಾಗವು ಕಪಿಸಂಯೋಗಕ್ಕು ಹಾಗೂ ಮೂಲವು ಕಪಿಸಂಯೋಗ ಅಭಾವಕ್ಕೂ ಅವಚ್ಛೆದಕಗಳಾಗುವವು.

११.अविद्याः ಜ್ಞಾನಕ್ಕೆ ವಿರೋಧಿಯಾದ, ಅಜ್ಞಾನ.

१२.आगमः ಶಾಸ್ತ್ರ. ದಾರ್ಶನಿಕರು ಅಂಗೀಕರಿಸಿರುವ ಶಬ್ದಪ್ರಮಾಣ, ವೆದಾದಿಶಾಸ್ತ್ರಗಳು.

निर्दोष शब्दः आगमः।

१३.आपादकः ದೋಷಾರೊಪಣೆ, ಆಪಾದನೆ.

१४.उदाहरणवैकल्यः ಯಾವುದೇ ಅನುಮಾನಕ್ಕೆ ಸಾಧ್ಯ ಮತ್ತು ಹೇತು ಗಳಲ್ಲಿಯ ವ್ಯಾಪ್ತಿ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸುವ ದೃಷ್ಟಾಂತ ಇಲ್ಲದೆ ಇರೊಣ,

१५.इष्टापत्तिः ವಾದಿಯ ಆಪಾದನೆಯೇ ಪತಿವಾದಿಗೂ ಸಮ್ಮತವಾಗಿರುವಿಕೆ.

१६. दूषण अनुमानः ಯಾವುದೆ ಸಿದ್ಧಾಂತವನ್ನು ದೂಷಿಸಲು ಉಪಯೋಗಿಸುವ ಅನುಮಾನ. ಇದು ದೂಷಣಕ್ಕೊಳಗಾದ ಸಿದ್ಧಾಂತದ ಆಪಾದಕವನ್ನೊಳಗೊಂಡಿರುತ್ತದೆ.

१७. पक्षः ಯಾವ ಧರ್ಮವನ್ನು ಸಾಧಿಸಬೇಕಾಗಿದೆಯೋ, ಅಂತಹ ಧರ್ಮವುಳ್ಳ ಧರ್ಮಿ, ಪಕ್ಷ ಎನಿಸುವದು. ಅಂದರೆ, ಎಲ್ಲಿ ಧರ್ಮವನ್ನು ಸಾಧಿಸಲಾಗುವದೋ ಅದು ಪಕ್ಷ.

साध्यधर्मविशिष्टः पक्षः।

पर्वतो वन्हिमान् धूमवत्वात्। ಎಂಬಲ್ಲಿ ಪರ್ವತದಲ್ಲಿ ಬೆಂಕಿಯನ್ನು ಸಾಧಿಸಲಗುತ್ತಿದೆ. ಇಲ್ಲಿ ಪರ್ವತವು ಪಕ್ಷ.

१८. पुनरुक्तिः ಅಂದು ಪದದಿಂದ ಅಥವಾ ವಾಕ್ಯದಿಂದ ಹೇಳಿದ ಅರ್ಥವನ್ನು ಬೇರೆ ಪದದಿಂದ ಅಥವಾ ವಾಕ್ಯದಿಂದ ಮತ್ತೆ ಹೇಳುವದು.

१९. प्रमाणः ಯಾವ ದೇಶ ಕಾಲದಲ್ಲಿ ಯಾವ ವಸ್ತುವು ಹೇಗೆ ಇರುತ್ತದೆಯೋ, ಆ ವಸ್ತುವನ್ನು ಅದೇ ರೀತಿಯಿಂದ ವಿಷಯೀಕರಿಸುವದು.

२०.प्रमाण बाधकः ಯಾವದೇ ಒಂದು ವಿಷಯದಲ್ಲಿ ಪ್ರಯೋಗಿಸಿದ ಪ್ರಮಾಣಕ್ಕೆ ದೋಷವನ್ನು ಹೇಳುವದು.

२१.प्रतिज्ञावाक्यः ಪಕ್ಷದಲ್ಲಿ ಸಾಧ್ಯಸಂಬಂಧವನ್ನು ತಿಳಿಸುವ ವಾಕ್ಯ.

२२.प्रतिपत्तिगौरवः ಯಾವದೋ ಊಹೆಯನ್ನವಲಂಬಿಸಿ ತಿಳುವಳಿಕೆಯನ್ನು ಮಾಡಿಕೊಳ್ಳುವದು.

२३.प्रतियोगिन्: ವಿರುದ್ಧವಾದ್ ಸಂಬಂಧವುಳ್ಳ, ಪ್ರತಿಕೂಲ ಸಂಬಂಧ ಹೊಂದಿರುವ. ಯವುದೊಂದು ವಸ್ತುವಿನ ಅಭಾವವನ್ನು ಹೇಳಲಾಗುವದೊ ಆ ವಸ್ತುವು ಅಭಾವದ ಪ್ರತಿಕೂಲ ಸಂಬಂಧವನ್ನು ಹೊಂದಿರುವದರಿಂದ ಅದು ಅಭಾವದ ಪ್ರತಿಯೋಗಿ ಆಗುವದು. ಉದಾಃ ಘಟವು ಘಟಾಭಾವದ ಪ್ರತಿಯೋಗಿ ಆಗಿರುತ್ತದೆ.

२४.प्रध्वंस अभावः ಪದಾರ್ಥದ ಧ್ವಂಸದ ನಂತರ ಉಂಟಾಗುವ ಆ ಪದಾರ್ಥದ ಅಭಾವ.

२५.प्राक् अभावः ಪದಾರ್ಥ ಹುಟ್ಟುವ ಮುಂಚೆ ಇರುವ ಆ ಪದಾರ್ಥದ ಅಭಾವ.

२६.निराश्रयः ಆಶ್ರಯವಿಲ್ಲದ, ಆಧಾರವಿಲ್ಲದ,

२७.सिद्धसाधनताः ಸಿದ್ಧವಾದವಿಷಯವನ್ನೆ ಮತ್ತೆ ಸಾಧಿಸುವದು. ಇದೊಂದು ಅನುಮಾನ್ ದೋಷ.

२८.समानाधिकरणः ಏಕಧಿಕರಣವುಳ್ಳ, ಒಂದೆ ಆಶ್ರಯವುಳ್ಳ. नीलो घटः ಎಂಬಲ್ಲಿ, ನೀಲ ಮತ್ತು ಘಟ ಪದಗಳು ಏಕಧರ್ಮಿ (ಅಂದರೆ ಆಶ್ರಯ) ಬೋಧಕ ಪದಗಳಾಗಿರುವದರಿಂದ ಇವು ಸಮಾನಧಿಕರಣ ಪದಗಳು.

२९. साध्यः ಯಾವ ಧರ್ಮವನ್ನು ಹೇತುವಿನಮೂಲಕ ಪಕ್ಷದಲ್ಲಿ ಸಾಧಿಸಲಾಗುತ್ತದೊ, ಅದು ಸಾಧ್ಯ. पर्वतो वन्हिमान् धूमवत्वात्। ಎಂಬಲ್ಲಿ ಬೆಂಕಿಯನ್ನು ಪರ್ವತದಲ್ಲಿ ಸಾಧಿಸಲಾಗುತ್ತದೆ, ಇಲ್ಲಿ ಬೆಂಕಿ ಸಾಧ್ಯ.

३०.साधक अनुमानः ಒಂದು ಸಿದ್ಧಾಂತವನು ಸಾಧಿಸಲು ಪ್ರಯೊಗಿಸುವ ಅನುಮಾನ.

३१. हेतुः ಕರಣ, ಲಿಂಗ ಅಥವಾ ಸಾಧ್ಯಧರ್ಮದ ಜ್ಞಾಪಕ. पर्वतो वन्हिमान् धूमवत्वात्। ಎಂಬಲ್ಲಿ, ಪರ್ವತದಲ್ಲಿ ಬೆಂಕಿಯನ್ನು ಸಾಧಿಸಲು ಧೂಮ ಕರಣ. ಅಥವಾ ವ್ಯಾಪ್ತಿ ಸಂಬಂಧವಿರುವದರಿಂದ ಸಾಧ್ಯದ ಜ್ಞಾನವನ್ನುಂಟುಮಾಡುವ ಧರ್ಮ ಹೇತು.

३२.वैयर्थ्यः ಪ್ರಯೋಜನವಿಲ್ಲದಿರುವಿಕೆ, ಫಲವಿಲ್ಲದಿರುವಿಕೆ.

३३.वैयधिकरण्यः ಬೇರೆ ಬೇರೆ ಸ್ಥಳಗಳಲ್ಲಿರುವಿಕೆ, ವಿಭಿನ್ನ ದೇಶಗಳಲ್ಲಿರುವಿಕೆ.

३४.व्याप्तिः ಸಾಧ್ಯ ಮತ್ತು ಹೇತುಗಳಲ್ಲಿಯ ಅನ್ಯೋನ್ಯ ಸಂಬಂಧ. पर्वतो वन्हिमान् धूमवत्वात्। ಎಂಬಲ್ಲಿ, ಬೆಂಕಿ ಮತ್ತು ಧೂಮ ಗಳಲ್ಲಿಯ ಅನ್ಯೋನ್ಯ ಸಂಬಂಧ.

## About the Author

Dr. Mangasuli Jayateerthacharya hails from the orthodox Madhva Brahmin family of scholars, his both grandfathers Pt Mangasuli Ramacharya, and Pt Chincholi Krishtacharya were eminent scholars. Being initiated into realm of Shri Madhvashastra by his guru illustrious late Pt. Mangasuli Ramacharya, author is very fortunate to pursue the Shri Madhvashastra studies initially under his father late Prof Gurajacharya and later incessantly on his own, along with modern scientific education. Besides, he has unique privilege of completing **Rigvedadhyana** under late Shri Vedacharya Ghaisas Guruji at Pune. As of today, author has proud credentials of completing studies of, **Ten Prakaran Granthas, Vadavali, Bhedojeevanam, Nyayamrutam, seven of ten major Upanishads and Geeta, along with teeka tippanis.** Presently he is pursuing his studies on Brahmasutraas along the lines of, Tantra Deepika and Nyayamuktavali, the great works of Shri Raghavendra Teertha.

On professional front, as alumni of prestigious institutes, IIT Kanpur, IISc Bangalore and IIM Calcutta, author is a professional technocrat in the field of Telecom /Wireless/Internet technologies. Recently his book on Next Generation Networks entitled "**Convergence through All IP networks**", being printed and published in USA by Taylor & Francis Group LLC New York, has been released across the globe.